

ರಂಜನೆ ಬೋಧನೆ ವಿವೇಚನೆ

ಗೌರಿ ಲಂಕೇಶ್

ನವೆಂಬರ್ 7, 2007 ರೂ.10/-




ಮೂರೂ ಬಿಟ್ಟವರಿಂದ ರಾಜ್ಯದ ತಿಥಿ!



ಗದಗ: ಎಸ್ಪಿಗಳ ಕರ್ಮಕಾಂಡ

ಪ್ರೈಜ್‌ಕ್ಯಾಚ್: ಕಿಲ್ಲರ್ ಶ್ಯಾಮ್-ಶೂಟರ್ ಕವಿರಾಜ್

ಬೆನ್ನಿಗಿರಿದವರ್‍ಯಾರು?





ರಾಯಚೂರು ಸಂಸದನ ಕೀಚಕ ಪುತ್ರರು




ಮಾನವ ಹಕ್ಕುಗಳ ಆಯೋಗದಲ್ಲಿ ಪೊಲೀಸ್ ಹಕ್ಕುಗಳ ಕಾವಲುಗಾರ!!!

ಚಾರ್ವಾಕ

- ಶಿವಸುಂದರ್-

ಕರ್ನಾಟಕದ ಮಾನವ ಹಕ್ಕುಗಳ ಹೋರಾಟಗಾರರ ಮತ್ತು ಇತರ ಜನಪರ ಹೋರಾಟಗಾರರ ಸತತ ಹೋರಾಟದ ಪರಿಣಾಮವಾಗಿ ಮತ್ತು ಹೈಕೋರ್ಟಿನ ಆದೇಶದ ಒತ್ತಡದಿಂದಾಗಿ ಕರ್ನಾಟಕದಲ್ಲೂ ಈ ವರ್ಷ ಒಂದು ಮಾನವ ಹಕ್ಕು ಆಯೋಗ ಸ್ಥಾಪನೆಯಾಗಿದೆ. ಆದರೆ ಅದರ ಅಧ್ಯಕ್ಷರ ತಿಳಿವಳಿಕೆಯ ಮಟ್ಟ ಮತ್ತು ಕಾರ್ಯವೈಖರಿಯನ್ನು ನೋಡಿದರೆ ಅದು ಮಾನವ ಹಕ್ಕುಗಳ ಆಯೋಗವೋ ಅಥವಾ ಪೊಲೀಸರ ಹಕ್ಕುಗಳನ್ನು ಕಾಯುವ ಕಾವಲು ಸಮಿತಿಯೋ ಅರ್ಥವಾಗುವಂತಿಲ್ಲ.

ಈ ಆಯೋಗವು ಅಸ್ತಿತ್ವಕ್ಕೆ ಬಂದ ಮೇಲೆ ಅದು ಸುದ್ದಿ ಆದದ್ದು ಜನರ ಹಕ್ಕುಗಳ ದಮನದ ಬಗ್ಗೆ ಧ್ವನಿ ಎತ್ತಿದ್ದಕ್ಕೆ ಅಲ್ಲ ಅಥವಾ ಜನರಿಗೆ ಸೌಕರ್ಯವನ್ನು ಕೊಡದೆ ಜನರ ಹಕ್ಕುಗಳ ಉಲ್ಲಂಘನೆಯಾಗುತ್ತಿದೆ ಎಂಬ ಕಾರಣಕ್ಕೂ ಅಲ್ಲ. ಬದಲಿಗೆ ಆಯೋಗದ ಕಚೇರಿಗೆ ಸರಿಯಾದ ಸೌಲಭ್ಯ ಕೊಟ್ಟಿಲ್ಲ ಮತ್ತು ಅದರ ಅಧ್ಯಕ್ಷರ ಕಾರ್ಯ ನಿರ್ವಹಣೆಗೆ ಪೂರಕವಾದ ವಾತಾವರಣ ಕಲ್ಪಿಸಿಕೊಟ್ಟಿಲ್ಲ ಎಂಬ ಕಾರಣಕ್ಕೆ. ನಿಜ, ಜನರ ಹಕ್ಕುಗಳ ಉಲ್ಲಂಘನೆಯ ದೂರುಗಳನ್ನು ಸರಿಯಾಗಿ ಪರಿಶೀಲಿಸಬೇಕೆಂದರೂ ಸೂಕ್ತವಾದ ವಾತಾವರಣ ಮತ್ತು ಕನಿಷ್ಠ ಸೌಲಭ್ಯಗಳ ಅಗತ್ಯವಿರುತ್ತದೆ. ಈ ಬಗೆಯ ಆಯೋಗದ ರಚನೆ ಮಾಡಲು ಸಿದ್ಧವಿಲ್ಲದ ಸರ್ಕಾರ ಅದರ ಸಕ್ಷಮ ಕಾರ್ಯ ನಿರ್ವಹಣೆಗೆ ಎಷ್ಟರಮಟ್ಟಿಗೆ ಪೂರಕವಾದ ವಾತಾವರಣ ನಿರ್ಮಿಸುತ್ತದೆ ಎಂಬುದು ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗದ ಪರಿಸ್ಥಿತಿಯನ್ನು ನೋಡಿದರೇ ಅರ್ಥವಾಗುತ್ತದೆ.


ಎಸ್.ಆರ್. ನಾಯಕ್

ಆದರೆ ಕರ್ನಾಟಕದಲ್ಲಿ ಮಾತ್ರ ಶ್ರೀಮಾನ್ ನ್ಯಾಯಮೂರ್ತಿ ಎಸ್.ಆರ್. ನಾಯಕ್‌ರ ಅಧ್ಯಕ್ಷತೆಯಲ್ಲಿರುವ ಆಯೋಗಕ್ಕೆ ಹೆಚ್ಚೆಚ್ಚು ಸೌಲಭ್ಯಗಳನ್ನು ಕೊಟ್ಟಷ್ಟೂ ಜನರ ಹಕ್ಕುಗಳ ಉಲ್ಲಂಘನೆಯು ಕಡಿಮೆಯಾಗುವುದರ ಬದಲು ದಮನದ ಸಮರ್ಥನೆಯೇ ನಡೆಯಬಹುದೇನೋ ಎಂದು ಆತಂಕ ಪಡುವಂತಾಗಿದೆ. ಏಕೆಂದರೆ ಆಯೋಗದ ಹಾಲಿ ಅಧ್ಯಕ್ಷರಿಗೆ ಮಾನವ ಹಕ್ಕುಗಳೆಂದರೇನು ಎಂಬ ಬಗ್ಗೆ ಕಿಂಚಿತ್ತೂ ತಿಳಿವಳಿಕೆ ಇದ್ದಂತೆ ತೋರುತ್ತಿಲ್ಲ, ಮತ್ತು ಆಯೋಗದ ಕಾರ್ಯವ್ಯಾಪ್ತಿಯೇನು ಎಂಬುದರ ಬಗ್ಗೆಯೂ ಸರಿಯಾದ ಗ್ರಹಿಕೆ ಇರುವುದಿರಲಿ ಅತ್ಯಂತ ಅಪಾಯಕಾರಿ ತಿಳಿವಳಿಕೆಯೇ ಇರುವಂತೆ ಕಾಣುತ್ತಿದೆ.

ಆಯೋಗವು ತನ್ನ ಕಾರ್ಯ ನಿರ್ವಹಣೆ ಪ್ರಾರಂಭಿಸಿದ ಒಂದು ತಿಂಗಳ ಒಳಗೆ ಆಯೋಗಕ್ಕೆ ಕನಿಷ್ಠವೆಂದರೂ 52 ಲಿಖಿತ ದೂರುಗಳು ಬಂದಿವೆ. ಇದು, ಕರ್ನಾಟಕದಲ್ಲಿ ಮಾನವ ಹಕ್ಕುಗಳ ಉಲ್ಲಂಘನೆಯಾಗುತ್ತಿಲ್ಲ, ಆದ್ದರಿಂದಲೇ ಕರ್ನಾಟಕದಲ್ಲಿ ಮಾನವ ಹಕ್ಕುಗಳ ಆಯೋಗದ ಅಗತ್ಯವಿಲ್ಲ ಎಂದು ವಾದಿಸುತ್ತಾ ಆಯೋಗದ ಸ್ಥಾಪನೆಯನ್ನು ಮುಂದೂಡಿಕೊಳ್ಳುತ್ತಲೇ ಬಂದಿದ್ದ ಚಂದ್ರೇಗೌಡರಂತ ಹಲವಾರು ರಾಜಕಾರಣಿಗಳ ಕುತಂತ್ರವನ್ನು ಬಯಲಿಗೆಳೆಯುವಂತೇ ಇದೆ.

ಆ 52 ದೂರುಗಳಲ್ಲಿ ಕಳೆದ ಜುಲೈ 10ರಂದು ಮೆಣಸಿನಹಾಡ್ಯದಲ್ಲಿ ನಾಲ್ವರು ಆದಿವಾಸಿಗಳ ಮತ್ತು ಒಬ್ಬ ನಕ್ಸಲೈಟರ ಪೊಳ್ಳು ಎನ್‌ಕೌಂಟರಿನ ಪ್ರಕರಣವೂ ಒಂದು. ಈಗಾಗಲೇ ಅದರ ಬಗ್ಗೆ ರಾಜ್ಯ ಮಟ್ಟದ ಮತ್ತು ರಾಷ್ಟ್ರ ಮಟ್ಟದ ಹಲವಾರು ಸತ್ಯಶೋಧನಾ ಸಮಿತಿಗಳು ಸ್ಥಳಕ್ಕೆ ಭೇಟಿ ಕೊಟ್ಟು, ಪೊಲೀಸರನ್ನು ಮತ್ತು ಸಮಾಜದ ವಿವಿಧ ಜನವರ್ಗಗಳನ್ನು ಭೇಟಿ ಮಾಡಿ ದಿನಗಟ್ಟಲೆ ಅಧ್ಯಯನ ನಡೆಸಿ ಅದು ಅಮಾಯಕ ಗಿರಿಜನರ ಮೇಲೆ ಪೊಲೀಸರು ನಡೆಸಿದ ಭೀಕರ ಕಗ್ಗೊಲೆ ಎಂದು ವರದಿ ನೀಡಿವೆ. ಆ ರೀತಿ ಸತ್ಯ ಶೋಧನೆ ನಡೆಸಿದ ತಂಡಗಳಲ್ಲಿ ನಕ್ಸಲರ ಸಿದ್ಧಾಂತದ ಬಗ್ಗೆ ಕಿಂಚಿತ್ತೂ ಸಹಾನುಭೂತಿ ಇಲ್ಲದ ವ್ಯಕ್ತಿಗಳೂ ಇದ್ದರು. ನಕ್ಸಲರಿಂದ ಮಲೆನಾಡಿನ ಶಾಂತಿ ನೆಮ್ಮದಿ ಹಾಳಾಗುತ್ತಿದೆ ಎಂದು ಭಾವಿಸುವವರೂ ಇದ್ದರು. ಆದರೂ ಮೆಣಸಿನಹಾಡ್ಯ ಎನ್‌ಕೌಂಟರಿನ ವಿಷಯಕ್ಕೆ ಬಂದಾಗ ಪೊಲೀಸರು ವಿನಾಕಾರಣ ಕಾನೂನುಬಾಹಿರವಾಗಿ ನಡೆಸಿದ ಈ ನರಹತ್ಯೆಗಳನ್ನು ಖಂಡಿಸಲು ಹಿಂಜರಿಯಲಿಲ್ಲ.

ಈ ಹಿನ್ನೆಲೆಯಲ್ಲೇ ರಾಜ್ಯ ಮಾನವ ಹಕ್ಕುಗಳ ಆಯೋಗದ ಅಧ್ಯಕ್ಷರೂ ಸಹ ಸತ್ಯಶೋಧನೆ ನಡೆಸಲು ಕಳೆದ ಅಕ್ಟೋಬರ್ 17ರಂದು ಮೆಣಸಿನಹಾಡ್ಯಕ್ಕೆ ಭೇಟಿ ನೀಡಿದ್ದರು. ಅಲ್ಲಿಗೆ ಹೋಗುವ ಮುಂಚೆಯೇ ದೇವರ ಮೇಲೆ ಭಾರ ಹಾಕಿ ಅಲ್ಲಿಗೆ ಹೋಗುತ್ತಿರುವುದಾಗಿಯೂ, ಸರ್ಕಾರ ತಮಗೆ ಸೂಕ್ತ ಪೊಲೀಸ್ ರಕ್ಷಣೆ ಒದಗಿಸಿಲ್ಲವೆಂದೂ ಅಲವತ್ತುಕೊಂಡೇ ಹೋದರು. ಹೀಗೆ ಮೆಣಸಿನಹಾಡ್ಯಕ್ಕೆ ಭೇಟಿ ಕೊಡುವ ಮುಂಚೆಯೇ ಅವರಿಗೆ ನಕ್ಸಲರೆಂದರೆ ಯಾರನ್ನು ಬೇಕಾದರೂ ಸುಖಾಸುಮ್ಮನೆ ಕೊಂದು ಬಿಡುತ್ತಾರೆಂಬ ಪೂರ್ವಾಗ್ರಹವಿತ್ತು. ಅವರು ಮೆಣಸಿನಹಾಡ್ಯದಲ್ಲಿ ಮೊಕ್ಕಾಂ ಮಾಡಿದ ದಿನ ಸ್ಥಳೀಯ ಪೊಲೀಸರು ಅವರಿಗೆ ಸಾಕಷ್ಟು ರಕ್ಷಣೆಯನ್ನೇನೋ ಒದಗಿಸಿದ್ದರು. ಆದರೆ ಇದೇ ಪೊಲೀಸರ ಕಣ್ಣೆದುರಿನಲ್ಲೇ ಅದೇ ಪೊಲೀಸರ ವಿರುದ್ಧವಾಗಿ ಸಾಮಾನ್ಯ ಜನ ಹೇಗೆ ಸಾಕ್ಷ್ಯ ನುಡಿಯುತ್ತಾರೆ? ದಿನಬೆಳಗಾದರೆ ಇದೇ ಪೊಲೀಸರೇ ಮನೆ ಮನೆಗೆ ನುಗ್ಗಿ, ಬಂಧಿಸಿ ಕಾರಣವಿಲ್ಲದೆ ಜನರಿಗೆ ಹಿಂಸೆ ಕೊಡುತ್ತಿರುವಾಗ?

ಹೀಗಾಗಿ ಮೆಣಸಿನಹಾಡ್ಯದಲ್ಲಿ ಮಾನವ ಹಕ್ಕುಗಳ ಆಯೋಗಕ್ಕೆ ಸಿಕ್ಕ ರಕ್ಷಣಾ ಕವಚವೇ ಜನರನ್ನು ಸತ್ಯ ಹೇಳದಂತೆ ಬೆದರಿಸುವ ಅಸ್ತ್ರವೂ ಆಗಿಬಿಟ್ಟಿದ್ದು ಅಧ್ಯಕ್ಷರ ಗಮನಕ್ಕೆ ಬರಲೇ ಇಲ್ಲ. ಬದಲಿಗೆ ಸಾಕಷ್ಟು ಸ್ಥಳೀಯ ಜನರು ಸಾಕ್ಷ್ಯ ಹೇಳಲು ಮುಂದೆ ಬರದಿದ್ದದ್ದೇ ಜನರ ವಿರುದ್ಧದ ಸಾಕ್ಷ್ಯವೂ ಆಗಿಬಿಟ್ಟದ್ದು ಸಂದರ್ಭದ ವ್ಯಂಗ್ಯಕ್ಕೆ ಸಾಕ್ಷಿ ನುಡಿಯುವಂತಿತ್ತು. ಮಾರನೇ ದಿನ ಚಿಕ್ಕಮಗಳೂರಿನಲ್ಲಿ ಹಲವಾರು ಪ್ರಗತಿಪರ ಸಂಘಟನೆಗಳು ಮತ್ತು ಸತ್ಯಶೋಧನೆಯಲ್ಲಿ ಭಾಗವಹಿಸಿದ ಸಂಘಟನೆಗಳು ಸವಿವರವಾದ ಸಾಕ್ಷ್ಯ ನುಡಿದರು. ಲಿಖಿತ ಹೇಳಿಕೆ ದಾಖಲಿಸಿದರು.

ಪ್ರಭುತ್ವದಿಂದ ಮಾನವ ಹಕ್ಕುಗಳು ಉಲ್ಲಂಘನೆಯಾಗದಂತೆ ತಡೆಯಬೇಕಿರುವ ಆಯೋಗ ಇವೆಲ್ಲವನ್ನೂ ಒಂದು ಪುರಾವೆಯೆಂಬಂತೆ ಪರಿಗಣಿಸಬೇಕಿತ್ತು. ಇಂಥ ಘನ ಘೋರ ಕೃತ್ಯ ನಡೆದರೂ ಸಾಕ್ಷ್ಯ ಹೇಳಲು ಮುಂದೆ



ಬರದ ಜನರ ಪರಿಸ್ಥಿತಿಯನ್ನು ಅರ್ಥ ಮಾಡಿಕೊಂಡು ಅದನ್ನು ನಿವಾರಿಸುವ ಕ್ರಮಗಳ ಬಗ್ಗೆ ಯೋಚಿಸಬೇಕಿತ್ತು. ಹಲವಾರು ಪ್ರಗತಿಪರ ಸಂಘಟನೆಗಳು ಕೊಟ್ಟ ಸಾಕ್ಷ್ಯಗಳನ್ನು ಗಂಭೀರವಾಗಿ ಅಧ್ಯಯನ ಮಾಡಬೇಕಿತ್ತು.

ಇವ್ಯಾವುದನ್ನೂ ಮಾಡದ ಆಯೋಗದ ಅಧ್ಯಕ್ಷ ನ್ಯಾಯಮೂರ್ತಿ ಎಸ್.ಆರ್.ನಾಯಕ್ ಚಿಕ್ಕಮಗಳೂರಿನಿಂದ ವಾಪಸ್ ಬಂದ ಎರಡು ದಿನಗಳಲ್ಲೇ ಒಂದು ಪತ್ರಿಕಾಗೋಷ್ಠಿಯನ್ನು ಕರೆದು ಮಾನವ ಹಕ್ಕುಗಳ ಬಗ್ಗೆ ತಮ್ಮ ಪೂರ್ವಾಗ್ರಹಪೀಡಿತ ತಿಳಿವಳಿಕೆಯನ್ನು ಮತ್ತು ತಮ್ಮ ಅಜ್ಞಾನವನ್ನು ಪ್ರದರ್ಶನ ಮಾಡಿಕೊಂಡರು.

ಅಜ್ಞಾನದ ಮೊದಲ ಸ್ಯಾಂಪಲ್: ಮೆಣಸಿನಹಾಡ್ಯದ ಎನ್‌ಕೌಂಟರಿನ ಬಗ್ಗೆ ಈಗಾಗಲೇ ಮ್ಯಾಜಿಸ್ಟ್ರಿಯಲ್ ವಿಚಾರಣೆ ನಡೆಯುತ್ತಿರುವುದರಿಂದ ತಾವು ಅದಕ್ಕೆ ಪರ್ಯಾಯವಾಗಿ ವಿಚಾರಣೆ ನಡೆಸುವುದು ತರವಲ್ಲವೆಂದು, ಅದರ ವರದಿ ಬಂದ ಮೇಲೆ ಅಗತ್ಯ ಬಿದ್ದರೆ ಮತ್ತೆ ವಿಚಾರಣೆ ನಡೆಸುವುದಾಗಿಯೂ ಹೇಳಿದ್ದು.

ಆದರೆ ಇಂಥ ಮಾನವ ಹಕ್ಕುಗಳ ಆಯೋಗದ ಸ್ಥಾಪನೆ ಮತ್ತು ಕಾರ್ಯ ನಿರ್ವಹಣೆಯ ಬಗ್ಗೆ ಮಾಡಲಾಗಿರುವ **The protection of Human Rights Act,1993 (As amended by protection of Human Rights (Amendments) Act, 2006-No.43 of 2006)** ಕಾಯಿದೆಯ ಕಲಂ 12 ಮತ್ತು 36 ಈ ಬಗ್ಗೆ ಮಾನವ ಹಕ್ಕು ಆಯೋಗಕ್ಕಿರುವ ಜವಾಬ್ದಾರಿ ಮತ್ತು ಅಧಿಕಾರವನ್ನು ತುಂಬಾ ಸ್ಪಷ್ಟವಾಗಿ ಹೇಳುತ್ತವೆ. ಅದರಲ್ಲಿ 12 (ಎ) ಕಲಮು ಎಲ್ಲೆಲ್ಲಿ ಮಾನವ ಹಕ್ಕುಗಳ ಉಲ್ಲಂಘನೆ ನಡೆದಿರುತ್ತದೆಯೋ ಅದರ ಬಗ್ಗೆ ಆಯೋಗವೇ ತನ್ನಂತೆ ತಾನೆ ಅಥವಾ ಬಾಧಿತರ ಅಥವಾ ಬಾಧಿತರ ಪರವಾಗಿ ಯಾರೆ ನೀಡುವ ದೂರನ್ನು ಆಧರಿಸಿ ಕ್ರಮ ತೆಗೆದುಕೊಳ್ಳಬೇಕೆಂದು ತುಂಬಾ ಸ್ಪಷ್ಟವಾಗಿ ಸೂಚಿಸುತ್ತದೆ. ಹಾಗೆಯೇ 12(ಬ) ಕಲಮು ಅಂಥ ಉಲ್ಲಂಘನೆಗಳ ಬಗ್ಗೆ ಯಾವುದಾದರೂ ಕೋರ್ಟಿನಲ್ಲಿ ವಿಚಾರಣೆ ನಡೆಯುತ್ತಿದ್ದರೆ ಆ ಕೋರ್ಟಿನ ಒಪ್ಪಿಗೆಯನ್ನು ತೆಗೆದುಕೊಂಡು ತಾನೂ ತನ್ನ ಸ್ವತಂತ್ರ ತನಿಖೆಯನ್ನಾಧರಿಸಿ ಮಧ್ಯಪ್ರವೇಶ ಮಾಡಬಹುದೆಂದೂ ಸೂಚಿಸುತ್ತದೆ. 13ನೇ ಕಲಮು ಆಯೋಗವು ಅಂತಹ ಸ್ವತಂತ್ರ ತನಿಖೆಯನ್ನು ನಡೆಸಲು ಯಾವುದೇ ಸರ್ಕಾರಿ ಅಧಿಕಾರಿ ಅಥವಾ ಸಂಬಂಧಪಟ್ಟ ಮಾಹಿತಿಯನ್ನು ಸರ್ಕಾರದಿಂದ ಪಡೆದುಕೊಳ್ಳುವ ಅಧಿಕಾರವನ್ನು ನೀಡುತ್ತದೆ. 36ನೇ ಕಲಮು ಯಾವ್ಯಾವ ಸಂದರ್ಭಗಳಲ್ಲಿ ಆಯೋಗವೂ ತನಿಖೆ ಮಾಡುವಂತಿಲ್ಲ ಎಂದು ನಿರ್ದಿಷ್ಟೀಕರಿಸುತ್ತದೆ. ಅದರ ಪ್ರಕಾರ ಅಂಥ ಪ್ರಕರಣವನ್ನು ಈಗಾಗಲೇ ಸರ್ಕಾರದಿಂದ ರಚಿತವಾದ ಮತ್ತೊಂದು ತನಿಖಾ ಆಯೋಗವು ಕೈಗೆತ್ತಿಕೊಂಡಿದ್ದರೆ ಮತ್ತು ಅಂಥ ಪ್ರಕರಣ ಘಟಿಸಿ ಒಂದು ವರ್ಷ ಸಂದು ಹೋಗಿದ್ದರೆ ಅಂಥ ಪ್ರಕರಣಗಳ ತನಿಖೆಯನ್ನು ಆಯೋಗ ತೆಗೆದುಕೊಳ್ಳುವಂತಿಲ್ಲವೆಂದು ಸೂಚಿಸುತ್ತದೆ.

ಅಂದರೆ ಮಾನವ ಹಕ್ಕುಗಳ ಆಯೋಗವು ಮೆಣಸಿನಹಾಡ್ಯ ಎನ್‌ಕೌಂಟರಿನ ವಿಚಾರದಲ್ಲಿ ಸ್ವತಂತ್ರ ತನಿಖೆ ಕೈಗೆತ್ತಿಕೊಂಡು ನ್ಯಾಯದ ಪರವಾಗಿ ಮಧ್ಯಪ್ರವೇಶ ಮಾಡಲು ಯಾವುದೇ ತಾಂತ್ರಿಕ ತೊಂದರೆಯಿರಲಿಲ್ಲ. ಹಾಗೆ ನೋಡಿದರೆ ಗುಜರಾತಿನಲ್ಲಿ ಹಿಂದೂತ್ವವಾದಿಗಳು ನರಮೇಧ ನಡೆಸಿದಾಗ ಸರ್ಕಾರವೇ ನೇಮಿಸಿದ ನಾನಾವತಿ ಆಯೋಗ, ಬ್ಯಾನರ್ಜಿ ಆಯೋಗ, ಪೊಲೀಸ್ ಇಲಾಖಾ ತನಿಖೆ ಇನ್ನಿತ್ಯಾದಿ ಹಲವು ತನಿಖೆಗಳು ಏಕಕಾಲದಲ್ಲಿ ನಡೆಯುತ್ತಿದ್ದರೂ ಪರಿಸ್ಥಿತಿಯ ಗಂಭೀರತೆಯನ್ನು ಅರ್ಥ ಮಾಡಿಕೊಂಡು ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗ ತಾನೇ ಸ್ವತಂತ್ರ ತನಿಖೆ ನಡೆಸಿ ಸುಪ್ರೀಂಕೋರ್ಟಿನಲ್ಲಿ ತನ್ನ ತನಿಖೆಯ ಫಲಿತಾಂಶದ ಬಗ್ಗೆ ಅಫಿಡವಿಟ್ ನೀಡಿತ್ತು. ಅದು ಸಹ ಗುಜರಾತಿನಲ್ಲಿ ಆ ನರಮೇಧಕ್ಕೆ ಬಲಿಯಾದವರಿಗೆ ಸ್ವಲ್ಪವಾದರೂ ನ್ಯಾಯವನ್ನು ದೊರಕಿಸಿಕೊಡುವಲ್ಲಿ ಸ್ವಲ್ಪ ಸಹಾಯ ಮಾಡಿತ್ತು.

ಆದರೆ ಈ ಬಗೆಯಲ್ಲಿ ಮೆಣಸಿನಹಾಡ್ಯ ಎನ್‌ಕೌಂಟರಿನ ವಿಷಯದಲ್ಲಿ ನೊಂದವರಿಗೆ ನ್ಯಾಯ ಕೊಡಿಸುವ ವಿಷಯದಲ್ಲಿ ಮುಂದೊಡಗು ತೋರದಿರುವುದರಲ್ಲಿ ನ್ಯಾಯಮೂರ್ತಿ ಎಸ್. ಆರ್. ನಾಯಕರಿಗೆ ಮತ್ತೊಂದು ದೋಷವಿತ್ತು. ಅದು ನಕ್ಸಲ ಹೋರಾಟದ ಬಗ್ಗೆ ಇದ್ದ ಪೂರ್ವಾಗ್ರಹ ಮತ್ತು ಮಾನವ ಹಕ್ಕುಗಳ ತತ್ವದ ಬಗ್ಗೆ ಇದ್ದ ಅಜ್ಞಾನ ಅಥವಾ ಪೊಲೀಸ್

(18ನೇ ಪುಟಕ್ಕೆ)

No Comments



"ಆಗಾಗ ಹಿಮಾಲಯಕ್ಕೆ ತೆರಳುವ ರಜನೀಕಾಂತ್ ಅವರು ಅಲ್ಲಿನ ಸನ್ಯಾಸಿಗಳಿಗೆ ನಾನು ರಾಮ ವಿರೋಧಿಯಲ್ಲವೆಂದು ಮನವರಿಕೆ ಮಾಡಿ ಕೊಡಬೇಕು."

-ಕರುಣಾನಿಧಿ

"ಸ್ಪಷ್ಟ ಬಹುಮತ ನೀಡದ ಜನಾದೇಶ ಮತ್ತು ಸ್ಪರ್ಧಾತ್ಮಕ ರಾಜಕಾರಣ ಸ್ಪಷ್ಟವಾಗಿ ಕಾಣುವುದನ್ನೂ ಅಸುಷ್ಪಾನಕ್ಕೆ ತರದಂತೆ ಮಾಡಿದೆ."

-ಮನಮೋಹನ್ ಸಿಂಗ್



"ಪ್ರಕಾಶ್ ಕಾಂಗ್ರೆಸ್ ಜೊತೆ ಮಾತನಾಡಿದ್ದು ತಪ್ಪೆಂದು ಹೇಳಿಲ್ಲ, ಅವರು ಬರಲಿ. ಬಂದ ನಂತರ ನಿರ್ಧರಿಸುತ್ತೇವೆ."

-ಮೆರಾಜುದ್ದೀನ್ ಪಟೇಲ್



"ಬಂಗಾರಪ್ಪ ಮತ್ತೆ ಮುಖ್ಯಮಂತ್ರಿಯಾಗಲಿ."

-ಮುಲಾಯಂ ಸಿಂಗ್ ಯಾದವ್

"ಭ್ರಷ್ಟಾಚಾರವನ್ನು ನಿಲ್ಲಿಸಲು ಸಾಧ್ಯವೇ ಇಲ್ಲ. 2010 ರಲ್ಲಿ ನಾನು ನಿವೃತ್ತನಾಗುವ ವೇಳೆಗೆ ಅದನ್ನು ಸ್ವಲ್ಪ ನಿಯಂತ್ರಣಕ್ಕೆ ತರಬಹುದು ಅಷ್ಟೆ."

-ಸಂತೋಷ್ ಹೆಗಡೆ

ನಂಬಿದ್ರೆ ನಂಬಿ ಬಿಟ್ರೆಬಿಡಿ

"ದೇವೇಗೌಡರ ಕುಟುಂಬವನ್ನು ಬಿಟ್ಟುಬಂದರೆ ಮಾತ್ರ ಜೆಡಿಎಸ್‌ನೊಂದಿಗೆ ಮರು ಮೈತ್ರಿ."



-ಸದಾನಂದಗೌಡ

"ಗೌಡರ ಸೂಚನೆ ಧಿಕ್ಕರಿಸಿ ದಿಲ್ಲಿಗೆ ಪ್ರಕಾಶ್."

-ಪತ್ರಿಕಾ ವರದಿ

"ಕುಮಾರಸ್ವಾಮಿ ಅಧಿಕಾರ ಹಸ್ತಾಂತರಿಸದೆ ಒಳ್ಳೆಯದೇ ಮಾಡಿದರು."

-ರಾಮಚಂದ್ರ ಗೌಡ



ಸೋ ವಾಟ್..?

"ಡಯಾನ ಸಾಯುವ ಮುಂಚೆ ಆಡಿದ ಕೊನೆ ಮಾತು ಓಹ್ ಮೈ ಗಾಡ್."

-ಇಂಗ್ಲೆಂಡಿನ ಒಂದು ತನಿಖಾ ಸಂಶೋಧನೆ

ಪ್ರಾಮಾಣಿಕ ಅವಕಾಶವಾದ



"ನಾನು ಬಂಡಾಯಗಾರನೂ ಅಲ್ಲ, ನಾನು ಯಾವುದೇ ಗುಂಪಿನ ಪ್ರತಿನಿಧಿಯೂ ಅಲ್ಲ."

-ಎಂ. ಪಿ. ಪ್ರಕಾಶ್

ಹಾಗಿದ್ರೆ ಹೀಗೆ, ಇನ್ನು?!

"ಅತ್ಯಂತ ಕಡಿಮೆ ಜಾಗತೀಕರಣಗೊಂಡ ರಾಷ್ಟ್ರಗಳ ಪೈಕಿ ಭಾರತಕ್ಕೆ ದ್ವಿತೀಯ ಸ್ಥಾನ."

-ಒಂದು ವರದಿ

ಇದನ್ನು ಹೇಳಿದವರ ತುದ್ದ ಸರಿಯೇ, ತಪ್ಪೇ ತಿಳಿಸಿ!

"ಜನರಿಗೆ ಮೂಲ ಸೌಕರ್ಯಗಳನ್ನು ನೀಡಿ ಸ್ವಾವಲಂಬಿಗಳನ್ನಾಗಿ ಮಾಡುವ ಮೂಲಕ ನಕ್ಸಲ್‌ನಂತಹ ಗಂಭೀರ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಬಹುದು."

-ಐಜಿಪಿ ಎಂ.ಕೆ. ನಾಗರಾಜ್

"ಜನತೆಗೆ ಅಗತ್ಯ ಶಸ್ತ್ರಾಸ್ತ್ರ ಒದಗಿಸಿ ಛತ್ತೀಸ್‌ಘಡದ ಸಾಲ್ವಾಜುಡುಂ ಮಾದರಿಯಲ್ಲಿ ಪ್ರತಿಭಟನೆ ಮಾಡುವುದರ ಮೂಲಕ ನಕ್ಸಲ್ ಸಮಸ್ಯೆ ಪರಿಹರಿಸಬಹುದು."

-ಜಸ್ಟೀಸ್ ಎಸ್.ಆರ್. ನಾಯಕ್, ಕರ್ನಾಟಕ ಮಾನವ ಹಕ್ಕು ಆಯೋಗದ ಅಧ್ಯಕ್ಷರು

ವಾರದ ಘೋಷಣೆ

"ಗೆಳೆಯರೇ ನಾನು ನಾಸ್ತಿಕನಾದದ್ದು ನನ್ನ ಚಿಂತನೆಗಳ ತಾರ್ಕಿಕ ಬೆಳವಣಿಗೆಗಳಿಂದಲೇ ವಿನಃ ನನ್ನ ಅಹಂಕಾರದಿಂದಲ್ಲ."

-ಭಗತ್ ಸಿಂಗ್

ವಂಚಕರಿಗೆ ಕೆಲವು ಪ್ರಶ್ನೆಗಳು



ಕಂಡಹಾಗೆ

ವಿಧ ಅಂಗವಿಕಲರಿಗೆ, ನಿರ್ಗತಿಕ ಮಹಿಳೆಯರಿಗೆ, ಅಸಹಾಯಕ ಮಕ್ಕಳಿಗೆ ಬೀದಿಗಳಲ್ಲಿ ನಿಂತು ಭಿಕ್ಷೆ ಬೇಡುವುದು ಅನಿವಾರ್ಯವಾಗಿರುತ್ತದೆ. ಆದರೆ ಮೊನ್ನೆ ವರೆಗೂ ಒಬ್ಬರನ್ನೊಬ್ಬರು ವಾಚಾಮಗೋಚರ ಬೈಯುತ್ತಿದ್ದ ಬಿಜೆಪಿಯ ಚೆಡ್ಡಿಗಳಿಗೆ ಮತ್ತು ಜನತಾದಳದ ಜಾತಿವಾದಿಗಳಿಗೆ ನಿನ್ನೆ ಭಿಕ್ಷುಕರಂತೆ ರಾಜಭವನದ ಮುಂದೆ ನಿಲ್ಲುವುದು ಅನಿವಾರ್ಯವಾಗಿರಲಿಲ್ಲ- ಅವರ ಅಧಿಕಾರದಾಹವೊಂದನ್ನು ಹೊರತುಪಡಿಸಿದರೆ.

ಮೆರಾಜುದ್ದೀನ್ ಪಟೇಲ್, ಯಡಿಯೂರಪ್ಪ, ಅನಂತಕುಮಾರ್, ವೆಂಕಯ್ಯನಾಯ್ಡು, ಕಟ್ಟಾಸುಬ್ರಮಣ್ಯ ನಾಯ್ಡು ಇವರೆಲ್ಲಾ ರಾಜಭವನದ ಮುಂದೆ ಭಿಕ್ಷುಕರಂತೆ ನಿಂತಿದ್ದ ದೃಶ್ಯ ಅಸಹ್ಯ ಹುಟ್ಟಿಸುವಂತಿತ್ತು. ಇವತ್ತು ಅನಿವಾರ್ಯ ಕಾರಣಗಳಿಂದಾಗಿ ತಮ್ಮ ದೇಹವನ್ನೇ ಬಂಡವಾಳ ಮಾಡಿಕೊಂಡು ಜೀವಿಸುತ್ತಿರುವ ಮಹಿಳೆಯರನ್ನು ವೇಶ್ಯೆಯರು ಎಂದಲ್ಲದೆ 'ಲೈಂಗಿಕ ಕಾರ್ಯಕರ್ತೆಯರು' ಎಂದು ಕರೆಯುತ್ತಾರೆ. ಆ ಮಹಿಳೆಯರ ಪರಿಸ್ಥಿತಿ ಬಗೆಗಿನ ಅನುಕಂಪದಿಂದ ಈ ಹೊಸ ಪದಪ್ರಯೋಗ ಜಾರಿಗೆ ಬಂದಿದೆ. ಆದರೆ ಆ ಗೇಟಿನ ಮುಂದೆ ನಿಂತಿದ್ದ ಎರಡೂ ಪಕ್ಷಗಳ ನಾಯಕರ ಅವಕಾಶವಾದಿತನಕ್ಕೆ ಯಾವ ಪದ ಸರಿಯಾಗಿ ಹೊಂದುತ್ತದೆ ಎಂದು ನೀವೊಮ್ಮೆ ಯೋಚಿಸಿ.

ನೈತಿಕತೆ, ಪಾವಿತ್ರ್ಯತೆ, ರಾಜಧರ್ಮ ಇದ್ಯಾವುದರ ಬಗ್ಗೆಯೂ ಕಿಂಚಿತ್ತೂ ಎಚ್ಚರ, ಕಾಳಜಿ, ಜ್ಞಾನ ಈ ಎರಡೂ ಪಕ್ಷದವರಿಗೆ ಇರುವಂತಿಲ್ಲ. ಇವೆರಡಕ್ಕೆ ಸರಿಯಾಗಿ ಜೋಭದ್ರಗೇಡಿ ಕಾಂಗ್ರೆಸ್ ಎಂಬ ಪಕ್ಷವೂ ಇದೆ. ಮೂರೂ ಬಿಟ್ಟ ಈ ಮೂರೂ ಪಕ್ಷಗಳು ತಮಗೆ ಬೇಕಾದಾಗ, ಬೇಕಾದಂತಹ ಅನೈತಿಕತೆ, ಅಪವಿತ್ರತೆ, ದ್ರೋಹ ಎಲ್ಲವನ್ನೂ ಎಸಗುತ್ತಾ, ಅವೆಲ್ಲವನ್ನೂ ವಿವಿಧ ರೀತಿಯಲ್ಲಿ ಸಮರ್ಥಿಸಿಕೊಂಡು ಬರುತ್ತವೆ.

ಅದರಲ್ಲೂ ಈಗ ಬಿಜೆಪಿ ಮತ್ತು ಜೆಡಿಎಸ್ ನಡುವೆ ಏರ್ಪಟ್ಟಿರುವ ಮರುಮೈತ್ರಿ ರಾಜಕಾರಣದ ಹೊಲಸಿನ ಪರಮಾವಧಿಯಂತಿದೆ. ಮನುವಾದಿ, ಕೋಮುವಾದಿ ಸಿದ್ಧಾಂತದ ಬಿಜೆಪಿ ಯಾವತ್ತೂ ನಾಯಿಯ ಡೊಂಕು ಬಾಲ ಇದ್ದಂತೆ. ಅದನ್ನು ಎಂದೂ ರಿಪೇರಿ ಮಾಡಲಾಗುವುದಿಲ್ಲ. ಆದರೆ ದೇವೇಗೌಡ ಅಂಡ್ ಸನ್ಸ್ ಎಂಬ ಫ್ಯಾಮಿಲಿ ಪಕ್ಷವಾದ ಜೆಡಿಎಸ್‌ಗೆ ತನ್ನ ಬಾಲವೂ ಡೊಂಕಾಗಿದೆ ಎಂದು ಗೊತ್ತಿದ್ದರೂ "ಇಲ್ಲ, ನನ್ನ ಬಾಲ ನೆಟ್ಟಗಿದೆ" ಎಂದು ವಾದಿಸುವಷ್ಟು ಭಂಡತನ.

ಇಂದು ಅಧಿಕಾರಕ್ಕಾಗಿ ಮತ್ತೆ ಬಿಜೆಪಿಯೊಂದಿಗೆ ಮಂಚವನ್ನೇರಿರುವ ಜೆಡಿಎಸ್ ಕೇವಲ ಹತ್ತು ದಿನಗಳ ಹಿಂದೆ ರಾಜ್ಯ ಪತ್ರಿಕೆಗಳಲ್ಲಿ ಒಂದೂವರೆ ಪುಟಗಳ ಜಾಹೀರಾತನ್ನು ನೀಡಿತ್ತು. ಅಕ್ಟೋಬರ್ 19ರಂದು 'ಕೆರಳಿಸಲ್ಪಟ್ಟ ಭಾವಾವೇಶದಲ್ಲಿ ಮರೆಮಾಚಲ್ಪಟ್ಟ ಸತ್ಯಗಳು' ಎಂಬ ಶೀರ್ಷಿಕೆಯಡಿ ಪ್ರಕಟಗೊಂಡ ಆ ಜಾಹೀರಾತನ್ನು ರಾಜ್ಯದ ಎಲ್ಲಾ ಜಿಲ್ಲೆಗಳ ಜೆಡಿಎಸ್ ಘಟಕದ ಅಧ್ಯಕ್ಷರ ಪರವಾಗಿ ನೀಡಲಾಗಿತ್ತು. ಆದರೆ ವಾಸ್ತವವಾಗಿ ಅದರ ಹಿಂದೆ ಇದ್ದದ್ದು ಸ್ವತಃ ದೇವೇಗೌಡ ಎಂಬುದು ಎಲ್ಲರಿಗೂ ಗೊತ್ತಿರುವ ವಿಷಯ.

ಆ ಜಾಹೀರಾತಿನಲ್ಲಿ ಬಿಜೆಪಿ ನಾಯಕರಿಗೆ ಸರಾಸರಿ 26 ಸುದೀರ್ಘ ಪ್ರಶ್ನೆಗಳನ್ನು ಕೇಳಲಾಗಿತ್ತು. ಆ ಯಾವ ಪ್ರಶ್ನೆಗಳಿಗೆ ಯಾವ ಬಿಜೆಪಿ ನಾಯಕನೂ ಇಲ್ಲಿಯವರೆಗೂ ಉತ್ತರಿಸಿಲ್ಲ, ಸಮಜಾಯಿಷಿ ನೀಡಿಲ್ಲ. ಆದರೂ ಯಾವ ಮಾನಮರ್ಯಾದೆ ಇಲ್ಲದೆ ಇವತ್ತು ಬಿಜೆಪಿಗೆ ಬೆಂಬಲವನ್ನು ದೇವೇಗೌಡ, ಅವರ ಪುತ್ರರು ಹಾಗೂ ಬಾಲಂಗೋಚಿಗಳಂತಹ ಶಾಸಕರು ಘೋಷಿಸಿದ್ದಾರೆ.

ಆ ಜಾಹೀರಾತಿನಲ್ಲಿ ಬಿಜೆಪಿಗೆ ಜೆಡಿಎಸ್ ಪ್ರಶ್ನೆಗಳನ್ನು ಕೇಳಿದ್ದರಿಂದ ಅವುಗಳನ್ನೇ ಆಧರಿಸಿ ಇಲ್ಲಿ ಜೆಡಿಎಸ್‌ಗೆ ಹಲವು ಪ್ರಶ್ನೆಗಳನ್ನು ಕೇಳುತ್ತಿದ್ದೇನೆ. ಅವುಗಳಿಗೆ ಉತ್ತರಿಸುವ ನೈತಿಕತೆ ಗೌಡರಿಗಿದೆಯಾ?

ಪ್ರಶ್ನೆ 1: ಒಂದು ಹಂತದಲ್ಲಿ ಯಡಿಯೂರಪ್ಪನವರು ಅಧಿಕಾರಕ್ಕಾಗಿ ಬಿಜೆಪಿ ಪಕ್ಷವನ್ನೇ ತೊರೆದು ಬರುವುದಾಗಿ ಹೇಳಿದ್ದರು ಎಂದಿದ್ದೀರಿ. ಮಾತ್ರವಲ್ಲ, ಅದರ ಬಗ್ಗೆ ಜಾಹೀರಾತಿನಲ್ಲೂ, ಭಾಷಣಗಳಲ್ಲೂ ಲೇವಡಿ ಮಾಡಿದ್ದೀರಿ. ಯಡಿಯೂರಪ್ಪನವರ ಅಧಿಕಾರದಾಹ ಸ್ಪಷ್ಟವಾಗಿತ್ತು, ನಗ್ನವಾಗಿತ್ತು. ಆದರೆ ಇವತ್ತು ನೀವೂ ಅಧಿಕಾರದ ಆಸೆಯಿಂದಲೇ ಅವರ ಕಾಲಿಗೆ ಬಿದ್ದಿಲ್ಲವೇ?

ಪ್ರಶ್ನೆ 2: ಕಾಂಗ್ರೆಸ್-ಬಿಜೆಪಿ ಎರಡರಿಂದಲೂ ಸಮಾನಾಂತರ ಕಾಪಾಡಿಕೊಳ್ಳಲಾಗುವುದೆಂದೂ (ಎರಡು ಪಂಥಗಳನ್ನು ಹೆತ್ತ ಮಹಿಳೆ ಹಾಸಿಗ್ಗೂ ಕಣ್ಣೆ ಎಂದು ವಾದಿಸುವಷ್ಟು ಹಾಸ್ಯಾಸ್ಪದ ಇದು, ಇರಲಿ), ಯಾವುದೇ ಕಾರಣಕ್ಕೂ ಮರುಮೈತ್ರಿ ಸಾಧ್ಯವಿಲ್ಲವೆಂದೂ, ಚುನಾವಣೆಗೆ ಹೋಗುತ್ತೇವೆಂದೂ ನೀವು ತೊಡೆ ತಟ್ಟಿ ಹೇಳಿದ್ದಿರಿ. ಈಗ ಆ ಎಲ್ಲ ನಿಲುವುಗಳನ್ನು ತೊರೆದು ಅಧಿಕಾರ ದಾಹದಿಂದ ಬಿಜೆಪಿ ಜೊತೆ ಕೈ ಜೋಡಿಸಿರುವುದು ತಮಗೆ ತಾವೇ ಊರುಭಂಗ ಮಾಡಿಕೊಂಡಂತಲ್ಲವೆ?

ಪ್ರಶ್ನೆ 3: ಅಂದು ಬಿಜೆಪಿಯ ಹಿರಿಯ ನಾಯಕರು ಕುಮಾರಸ್ವಾಮಿಯೊಂದಿಗೆ ಮಾತ್ರ ಅಧಿಕಾರ ಹಂಚಿಕೆಯ ಬಗ್ಗೆ ಚರ್ಚಿಸಿ ದೇವೇಗೌಡರನ್ನು ಕಗ್ಗತ್ತಲಿನಲ್ಲಿ ಇಟ್ಟದ್ದು ಯಾಕೆ ಎಂದು ಪ್ರಶ್ನಿಸಲಾಗಿದೆ. ಬಿಜೆಪಿಯವರ ಮಾತು ಪಕ್ಕಕ್ಕಿರಲಿ, ಇಲ್ಲಿ ಇನ್ನೂ ಮುಖ್ಯವಾದ ಪ್ರಶ್ನೆ ಸ್ವತಃ ಕುಮಾರಸ್ವಾಮಿಯೇ ತಮ್ಮ ತಂದೆಯನ್ನು ಕಗ್ಗತ್ತಲಿನಲ್ಲಿ ಇಡುವ ಸಂಚಿನ ಭಾಗವಾಗಿದ್ದರಲ್ಲವೆ ಎಂಬುದು. ಅಂದರೆ ಬಿಜೆಪಿಯವರಷ್ಟೇ ಕುಮಾರಸ್ವಾಮಿಯೂ ತಪ್ಪಿತಸ್ಥ ಎಂದು ಹೇಳಬಹುದಲ್ಲವೇ?

ಪ್ರಶ್ನೆ 4: ಅಂದು ಬಿಜೆಪಿ ನಾಯಕರು ಕುತಂತ್ರ ಮತ್ತು ಕೃತ್ರಿಮ ಮಾರ್ಗದಿಂದ ಸಮ್ಮಿಶ್ರ ಸರಕಾರ ರಚಿಸಿದ್ದರು ಎಂದಿದ್ದೀರಿ. ಹಾಗಾದರೆ ಈಗ ಅವರು ಮತ್ತು ತಾವು ಅನುಸರಿಸುತ್ತಿರುವ ಮಾರ್ಗ ಯಾವುದು? ಪ್ರಜಾತಂತ್ರ ಮಾರ್ಗವಾ? ರಾಜಧರ್ಮ ಮಾರ್ಗವಾ? ಜನಾದೇಶ ಮಾರ್ಗವಾ? ಅಥವಾ ಅವಕಾಶವಾದಿ ರಾಜಕಾರಣದ ಮಾರ್ಗವಾ?



ಪ್ರಶ್ನೆ 5: ಜನವಿರೋಧಿ ನೈಸ್ ಸಂಸ್ಥೆಯ ಮುಖ್ಯಸ್ಥ ಅಶೋಕ್ ಖೇಣಿಯೊಂದಿಗೆ ಬಿಜೆಪಿಯ ಶಾಸಕರು ಗಳಸ್ಯ ಕಂಠಸ್ಯ ಸಂಬಂಧ ಹೊಂದಿದ್ದನ್ನೂ ಟೀಕಿಸಿದ್ದೀರಿ. ಈಗ ನಿಮ್ಮ ಈ 'ಪವಿತ್ರ' ಸಂಬಂಧದಲ್ಲಿ ಖೇಣಿಯೊಂದಿಗಿನ ಬಿಜೆಪಿಯ 'ಅಕ್ರಮ' ಸಂಬಂಧವನ್ನೂ ಹೇಗೆ ಎದುರಿಸುತ್ತೀರಿ? ಅಥವಾ ಅದನ್ನೂ 'ಸಕ್ರಮ'ಗೊಳಿಸುವ ಮಾರ್ಗವೊಂದು ನಿಮಗೆ ಗೊತ್ತಿದೆಯೇ?

ಪ್ರಶ್ನೆ 6: ನಿಮ್ಮ ಮಗ್ಗಲ ಮುಳ್ಳಾಗಿರುವ ಜನಾರ್ಧನ ರೆಡ್ಡಿ, ಕರುಣಾಕರ ರೆಡ್ಡಿ ಮತ್ತು ಶ್ರೀರಾಮುಲುರವರನ್ನು ಸದಾನಂದ ಗೌಡರು "ಬಿಜೆಪಿ ಪಕ್ಷದ ಬ್ರಹ್ಮ, ವಿಷ್ಣು ಮಹೇಶ್ವರರು" ಎಂದು ಕೊಂಡಾಡಿದ್ದರ ಬಗ್ಗೆ ಆಕ್ಷೇಪ ವ್ಯಕ್ತಪಡಿಸಿದ್ದೀರಿ. ಈಗ ಈ ತ್ರಿಮೂರ್ತಿಗಳನ್ನು ತಾವು ಏನೆಂದು ಕರೆಯುತ್ತೀರಿ?

(ಸಲಹಾ ಉತ್ತರ: ಶನಿ, ಪಿಶಾಚಿ, ರಾಕ್ಷಸ?)

ಪ್ರಶ್ನೆ 7: ತನ್ನ ಹಣದ ಅಗತ್ಯಗಳಿಗೆ ಈ ಮೂವರನ್ನೇ ಬಿಜೆಪಿ ಆಧರಿಸಿರುವುದರಿಂದ ಅದು ಭಾರತೀಯ ಜನತಾ ಪಕ್ಷ ಅಲ್ಲ, ಬದಲಾಗಿ ಬಳ್ಳಾರಿ ಜನತಾಪಕ್ಷ ಎಂದು ಲೇವಡಿ ಮಾಡಿದ್ದೀರಿ. ಈಗ ತಾವು ಕೂಡ ಅದೇ ಬಳ್ಳಾರಿ ಜನತಾಪಕ್ಷಕ್ಕೆ ಬೆಂಬಲ ನೀಡದಂತಾಗಿದೆಯಲ್ಲಾ?

ಪ್ರಶ್ನೆ 8: ಈ ಹಿನ್ನೆಲೆಯಲ್ಲಿ ಕುಮಾರಸ್ವಾಮಿ ವಿರುದ್ಧ 150 ಕೋಟಿ ರೂಪಾಯಿಗಳ ಲಂಚ ಸ್ವೀಕರಿಸಿದ ಆರೋಪ ಮಾಡಿರುವ ಜನಾರ್ಧನ ರೆಡ್ಡಿ ಬಗ್ಗೆ ಏನೆಂತೀರಿ?

ಪ್ರಶ್ನೆ 9: ಬಾಬಾಬುಡನ್‌ಗಿರಿ ದರ್ಗಾ ಬಗ್ಗೆ ಮಾತನಾಡುತ್ತಾ, (ಕುಮಾರಸ್ವಾಮಿ ಅದನ್ನು ತಪ್ಪಾಗಿ ದತ್ತಪೀಠ ಎಂದು ಕರೆಯುತ್ತಾರೆ. ಜಾತ್ಯತೀತ ಜನತಾದಳದ ಅಧ್ಯಕ್ಷನಾಗಿದ್ದಾಗಲೂ ಅವರಿಗೆ ಜಾತ್ಯತೀತ ಪದದ ಅರ್ಥ ಗೊತ್ತಿರಲಿಲ್ಲವಾದ್ದರಿಂದ ಇಂತಹ ಸೂಕ್ಷ್ಮತೆಗಳ ಬಗ್ಗೆಯೂ ಅವರಿಗೆ ಗೊತ್ತಿರುತ್ತದೆ ಎಂದು ಭಾವಿಸುವುದೇ ತಪ್ಪು) ಕಳೆದ ವರ್ಷ ಬಿಜೆಪಿಯು ತನ್ನ ರಹಸ್ಯ ಅಜೆಂಡಾವನ್ನು ಜಾರಿಗೆ ತರಲು ಅವಾಂತರ ಮಾಡಿತ್ತು ಎಂದಿದ್ದೀರಿ. ಬರುವ ಡಿಸೆಂಬರ್ ತಿಂಗಳಲ್ಲಿ ನಿಮ್ಮ ಪಕ್ಷದ ನಿಲುವು ಏನಾಗಿರುತ್ತದೆ?

ಪ್ರಶ್ನೆ 10: ಹೋದವರ್ಷ ಇದೇ ವಿಷಯಕ್ಕೆ ಸಂಬಂಧಿಸಿದಂತೆ ಕರ್ನಾಟಕ ಕೋಮು ಸೌಹಾರ್ದ ವೇದಿಕೆಯ ನೂರೈವತ್ತು ಜನರನ್ನು ಚಿಕ್ಕಮಗಳೂರಿನಲ್ಲಿ ಬಂಧಿಸಿ ಜೈಲಿನಲ್ಲಿಡಲಾಗಿತ್ತು. ಅವರೊಂದಿಗೆ ನಾನೂ ಇದ್ದೆ. ಅಂದು ಮುಖ್ಯಮಂತ್ರಿ ಆಗಿದ್ದವರು ಕುಮಾರಸ್ವಾಮಿ. ನಮ್ಮನ್ನು ಬಂಧಿಸಿದ್ದು ಅವರೇ ಅಲ್ಲವೇ? ನಮ್ಮನ್ನು ಬಂಧಿಸಿದ್ದು ಯಾಕೆ ಎಂದು ಹೇಳುತ್ತೀರಾ?

ಪ್ರಶ್ನೆ 11: ಮಂಗಳೂರಿನಲ್ಲಿ ಸಂಘ ಪರಿವಾರವು ಕೋಮು ಗಲಭೆಗಳನ್ನು ಸೃಷ್ಟಿಸಿ ಇಬ್ಬರು ಅಲ್ಪಸಂಖ್ಯಾತರ ಕೊಲೆಗೆ ಕಾರಣವಾಗಿದ್ದಾಗಲೂ ಮುಖ್ಯಮಂತ್ರಿಯಾಗಿದ್ದವರು ಕುಮಾರಸ್ವಾಮಿಯವರೇ. ಆ ಗಲಭೆಗಳಿಗೆ, ಕೊಲೆಗಳಿಗೆ ಕಾರಣರಾದವರ ವಿರುದ್ಧ ಅವರು ಯಾವ ಕ್ರಮ ತೆಗೆದುಕೊಂಡರು? ಅಲ್ಪಸಂಖ್ಯಾತರಲ್ಲಿ ಅಭದ್ರತೆ ಮೂಡದಂತೆ ಅವರು ಏನನ್ನು ಮಾಡಿದರು?

ಪ್ರಶ್ನೆ 12: ಗೋಲ್ವಾಲ್ಕರ್ ಎಂಬ ಮನುವಾದಿಯ ಹೆಸರಿನಲ್ಲಿ ರಾಜ್ಯದೆಲ್ಲೆಡೆ ಸಂಘ ಪರಿವಾರವು ವಿರಾಟ್ ಹಿಂದೂ ಸಮಾಜೋತ್ಸವಗಳನ್ನು ಆಚರಿಸಿ ಸಮಾಜದ ಶಾಂತಿ ಮತ್ತು ಸೌಹಾರ್ದವನ್ನು ಕದಡಿದರು ಎಂದು ಆರೋಪಿಸಿದ್ದೀರಿ. ಅದು ನಿಜ. ಆದರೆ ರಾಜ್ಯ ಕಾಂಗ್ರೆಸ್ ತನ್ನ ಪಕ್ಷದವರು ಇಂತಹ ಅನಾಹುತಕಾರಿ ಕಾರ್ಯಕ್ರಮಗಳಲ್ಲಿ ಭಾಗವಹಿಸಬಾರದೆಂದು ಠರಾವು ಹೊರಡಿಸಿತ್ತು. ನಿಮ್ಮ ಪಕ್ಷವೂ ಯಾಕೆ ಅಂತಹ ಠರಾವೊಂದನ್ನು ಹೊರಡಿಸಲಿಲ್ಲ? ಆ ಮೂಲಕ ರಾಜ್ಯದ ಕೇಸರೀಕರಣವನ್ನು ತಡೆಯಲಿಲ್ಲ?

ಪ್ರಶ್ನೆ 13: ಇದೇ ವಿರಾಟ್ ಹಿಂದೂ ಸಮಾಜೋತ್ಸವಕ್ಕೆ ಸಂಬಂಧಪಟ್ಟಂತೆ ಸಂಘಪರಿವಾರಿಗಳಿಗೆ ಬೆಂಗಳೂರಿನ ಶಿವಾಜಿನಗರದಂತಹ ಪ್ರದೇಶದಲ್ಲಿ ಮೆರವಣಿಗೆ ನಡೆಸಲು ಆ ಮೂಲಕ ಇಬ್ಬರ ಸಾವಿಗೆ ಕಾರಣವಾಗಲು ಅನುಮತಿ ನೀಡಿದ್ದಾಗಲೂ ಕುಮಾರಸ್ವಾಮಿಯವರೇ ಮುಖ್ಯಮಂತ್ರಿ ಆಗಿದ್ದರು. ಅಂದರೆ ಆ ಇಬ್ಬರ ಸಾವಿಗೆ ಕುಮಾರಸ್ವಾಮಿಯೂ ಹೊಣೆಯಲ್ಲವೇ?

ಪ್ರಶ್ನೆ 14: ಹತ್ತೆಯತ್ತ ಸೇರಿದಂತೆ ಕುಮಾರಸ್ವಾಮಿಯ ವಿರುದ್ಧ ವಿವಿಧ ಆರೋಪಗಳನ್ನು ಮಾಡಿದ್ದ ಶ್ರೀರಾಮುಲು ಬಗ್ಗೆ ಯಡಿಯೂರಪ್ಪ ಸೇರಿದಂತೆ ಯಾರೂ ಟುಟಿಪಿಟಿಕ್ ಅಂದಿರಲಿಲ್ಲ ಎಂದಿದ್ದೀರಿ. ಮಾತ್ರವಲ್ಲ ಆ ಕಾರಣಕ್ಕಾಗಿಯೇ "ಖಂಡಿಸಲಾರದಷ್ಟು ನಿರ್ವೀರ್ಯರಾದರೆ ಉಪಮುಖ್ಯಮಂತ್ರಿ" ಎಂದು ಪ್ರಶ್ನಿಸಿದ್ದೀರಿ. ಈಗ ಅದೇ ಯಡಿಯೂರಪ್ಪನವರೊಂದಿಗೆ ಪವಿತ್ರವೊ, ಅಪವಿತ್ರವೋ, ಅದೆಂತಹದ್ದೊ ಒಂದು ಸಂಬಂಧಕ್ಕೆ ಸಿದ್ಧವಾಗಿರುವ ನಿಮಗೆ ಅವರು ಹೇಗೆ ಕಾಣಿಸುತ್ತಿದ್ದಾರೆ?

ಪ್ರಶ್ನೆ 15: ರಾಮಸೇತು ವಿವಾದಕ್ಕೆ ಸಂಬಂಧಿಸಿದಂತೆ ಬೆಂಗಳೂರಿನ ಬೊಮ್ಮನಹಳ್ಳಿಯಲ್ಲಿ ಇಬ್ಬರು ಅಮಾಯಕರು ಸಾವಿಗೀಡಾದರು. ಈ ಸಾವುಗಳಿಗೆ ಬಿಜೆಪಿಯ ಧರ್ಮಾಂಧತೆಯೇ ಕಾರಣ ಎಂದು ನೀವು ಹೇಳಿದ್ದೀರಿ. ಈಗ ಮತ್ತೆ ಅಧಿಕಾರ ಸಿಕ್ಕಾಗ ಈ ಪ್ರಕರಣ ಕುರಿತಂತೆ CBI ತನಿಖೆ ಆಗಬೇಕೆಂದು ಒತ್ತಾಯಿಸುತ್ತೀರಾ?

ಪ್ರಶ್ನೆ 16: ಕುಮಾರಸ್ವಾಮಿಯವರನ್ನು 'ಥಕಾಯಿತ' ಎಂದೂ, ಗೌಡರನ್ನು 'ಮುದಿಗೂಬೆ' ಎಂದೂ, ಅವರ ಇಡೀ ವಂಶದ 'ತಿಥಿ ಮಾಡುತ್ತೇನೆ' ಎಂದೂ ಹೇಳಿದ್ದ ಜನಾರ್ಧನ ರೆಡ್ಡಿ ವಿರುದ್ಧ ಇವತ್ತಿಗೂ ಯಡಿಯೂರಪ್ಪ, ಅನಂತಕುಮಾರ್, ವೆಂಕಯ್ಯನಾಯ್ಡು ಒಂದೇ ಒಂದು ಮಾತನ್ನು ಹೇಳಿಲ್ಲ. ರೆಡ್ಡಿಯ ಇಂತಹ ಬೆಂಬಲಿಗರೊಂದಿಗೆ ಇವತ್ತು ಕೈಜೋಡಿಸುತ್ತೀರಿ, ಅವರಿಗೆ ಮುಖ್ಯಮಂತ್ರಿ ಸ್ಥಾನ ಬಿಟ್ಟು ಕೊಡುತ್ತೀರಿ ಎಂದರೆ ಏನರ್ಥ?

ಪ್ರಶ್ನೆ 17. ನೈಸ್ ಕಂಪನಿ, ಬಾಬಾಬುಡನ್‌ಗಿರಿ ದರ್ಗಾ, ಮಂಗಳೂರು ಗಲಭೆ, ಬಳ್ಳಾರಿಯ ರಾದ್ಧಾಂತ..... ಇಂತಹ ಪ್ರಕರಣಗಳು ಮರುಕಳಿಸಬಾರದೆಂದು ಲಿಖಿತ ಒಪ್ಪಂದಕ್ಕೆ ಸಹಿ ಹಾಕುವಂತೆ ದೇವೇಗೌಡರು ರಾಜನಾಥ್ ಸಿಂಗ್, ಸುಷ್ಮಾ ಸ್ವರಾಜ್, ಅನಂತ್‌ಕುಮಾರ್‌ರನ್ನು ಒತ್ತಾಯಿಸಿದ್ದರು ಎಂದು ಜಾಹೀರಾತಿನಲ್ಲಿ ಹೇಳಲಾಗಿದೆ. ಹಾಗಾದರೆ ಈಗ ಇಂತಹ ಲಿಖಿತ ಒಪ್ಪಂದವಾಗಿದೆಯೇ? ಅದನ್ನು ಬಹಿರಂಗಪಡಿಸುತ್ತೀರಾ?

ಪ್ರಶ್ನೆ 18. ಅಧಿಕಾರ ಹಂಚಿಕೆ ಕುರಿತು 20 ತಿಂಗಳ ಹಿಂದೆ ಕುಮಾರಸ್ವಾಮಿ-ಯಡಿಯೂರಪ್ಪ ಚರ್ಚಿಸಿದ್ದರು. ಆದರೆ ಮುಖ್ಯಮಂತ್ರಿ ಸ್ಥಾನದ ಹಸ್ತಾಂತರ ಕುರಿತಂತೆ ಒಂದು ತಿಂಗಳ ಹಿಂದೆ ಅಂತಹದ್ದೇ ಚರ್ಚೆ ಸಾಧ್ಯವಾಗದೆ ಇಬ್ಬರೂ ಜಗಳವಾಡಿಕೊಂಡಿದ್ದರು. ಆದರೆ ಈಗ ಇದ್ದಕ್ಕಿದ್ದಂತೆ ಮಾತುಕತೆ ನಡೆದು ಮರುಮೈತ್ರಿಗೆ ಇಬ್ಬರು ಸಿದ್ಧರಾಗಿದ್ದಾರೆ. ಇದು ಸಾಧ್ಯವಾಗಿದ್ದು ಹೇಗೆ? ಯಾವ ಅಂಶ ಇದಕ್ಕೆ ಪ್ರೇರೇಪಣೆಯಾಯಿತು? ಈ ಒಪ್ಪಂದದ ನಿಜವಾದ 'ಮೌಲ್ಯ'ವೆಷ್ಟು ಎಂದು ಪ್ರಶ್ನಿಸಬಹುದೇ?

ಪ್ರಶ್ನೆ 19. ಯಡಿಯೂರಪ್ಪ ಆ ಮಠಕ್ಕೆ, ಈ ಮಠಕ್ಕೆ, ಆ ಸಮಾಧಿಗೆ, ಈ ಸ್ಮಾರಕಕ್ಕೆ ಕೋಟ್ಯಂತರ ರೂಪಾಯಿಗಳನ್ನು ಸಚಿವ ಸಂಪುಟದ ಒಪ್ಪಿಗೆ ಇಲ್ಲದೆ ನೀಡಿದ್ದನ್ನು ಸಹಿಸಿಕೊಂಡಿದ್ದೀರಿ ಎನ್ನಲಾಗಿದೆ. ಪ್ರಶ್ನೆ ಏನೆಂದರೆ ಮುಂದೆಯೂ ಹೀಗೆ ಸಹಿಸಿಕೊಂಡಿರುತ್ತೀರಾ?

ಪ್ರಶ್ನೆ 20. ಅಂದು ಕುಮಾರಸ್ವಾಮಿಯವರು ಚಕ್ರವ್ಯೂಹದಲ್ಲಿ ಸಿಕ್ಕಿಕೊಂಡಿದ್ದ ಅಭಿಮನ್ಯು ಎಂದು ಬಣ್ಣಿಸಲಾಗಿದೆ. ಈಗ ಅವರನ್ನು ಹೇಗೆ ವರ್ಣಿಸಬಹುದು? ದಾಳಗಳನ್ನೇ ಸೃಷ್ಟಿಸಿದ ಶಕುನಿ ಎಂದರೆ ಹೇಗೆ?

ಪ್ರಶ್ನೆ 21. ನಿಮ್ಮ ಪಕ್ಷದ ಪ್ರಣಾಳಿಕೆಯಲ್ಲಿ ಕೋಮುವಾದಿ ಬಿಜೆಪಿಗೆ ರಾಜ್ಯವನ್ನು ಕೊಡುವುದಿಲ್ಲ ಎಂದು ಹೇಳಲಾಗಿತ್ತು ಎಂದು ಜಾಹೀರಾತಿನಲ್ಲಿ ಸಾರಲಾಗಿದೆ. ಹಾಗಾದರೆ ಈಗ ನೀವು ಮಾಡಿರುವುದು ಜನದ್ರೋಹದಲ್ಲವೇ? ನಿಮಗೆ ಮತ ನೀಡಿದ ಜನರಿಗೆ ಎಸಗಿರುವ ವಚನ ಭ್ರಷ್ಟತೆ ಅಲ್ಲವೇ?

ಈ ಎಲ್ಲ ಪ್ರಶ್ನೆಗಳಿಗೆ ಗೌಡರಾಗಲಿ, ಕುಮಾರಸ್ವಾಮಿಯಾಗಲಿ ಉತ್ತರಿಸುವರಾ?

-ಗೌರಿ ಲಂಕೇಶ್



ಕಿಲ್ಲರ್ ಶ್ಯಾಮ್ ಮತ್ತು ಶೂಟರ್ ಕವಿರಾಜ್ ಸೆರೆ ಸಿಕ್ಕಿದ್ದು ಹೇಗೆ?



ಸೀರಿಯಲ್ ಕಿಲ್ಲರ್ ಶ್ಯಾಮ್ ಮತ್ತು ರವಿಪೂಜಾರಿಯ ಶಾರ್ಪ್ ಶೂಟರ್ ಕವಿರಾಜ್ ಎಂಬ ಇಬ್ಬರು ಮಹಾನ್ ಪಾತಕಿಗಳನ್ನು ಒಂದೇ ಏಟಿಗೆ ಹಡಿದು ಹಾಕುವುದು ಸಣ್ಣ ಮಾತೆ? ಶ್ರದ್ಧೆ ಮತ್ತು ಕಠಿಣ ಪರಿಶ್ರಮವಿದ್ದರೆ ಎಂಥಾ ಪಾತಕಿಯನ್ನೂ ಹಿಡಿಯಬಹುದೆಂಬುದನ್ನು ತೋರಿಸಿಕೊಟ್ಟಿದ್ದಾರೆ ಇನ್ಸ್‌ಪೆಕ್ಟರ್ ಉಮೇಶ್. ಇದು ನಿಜಕ್ಕೂ ಉಮೇಶ್ ಪಾಲಿನ ಪ್ರೈಜ್‌ಕ್ಯಾಚ್!

ಕಲಾಸಿಪಾಳ್ಯದ ಇನ್ಸ್‌ಪೆಕ್ಟರ್ ಎಸ್.ಕೆ. ಉಮೇಶ್ ಪಾಲಿಗಿದು ನಿಜಕ್ಕೂ ಪ್ರೈಜ್ ಕ್ಯಾಚೇ!

ಸೀರಿಯಲ್ ಕಿಲ್ಲರ್ ಶ್ಯಾಮ್ ಮತ್ತು ರವಿ ಪೂಜಾರಿಯ ಶಾರ್ಪ್ ಶೂಟರ್ ಕವಿರಾಜ್ ಎಂಬ ಇಬ್ಬರು ಮಹಾನ್ ಪಾತಕಿಗಳನ್ನು ಒಂದೇ ಏಟಗೆ ಉಮೇಶ್ ಹಡಿದು ಹಾಕಿದ್ದು ಸಣ್ಣ ಮಾತೆ?


ಅತ್ತ ಆಂಧ್ರದ ಪೊಲೀಸರು, ಇನ್ನೊಂದೆಡೆ ತಮಿಳುನಾಡು ಪೊಲೀಸ್ ಪಡೆ, ಮಗದೊಂದೆಡೆ ಕೋಲಾರದ ಪೊಲೀಸರು ಸೇರಿದಂತೆ ಬೆಂಗಳೂರಿನ ನಾಲ್ಕು ಪೊಲೀಸ್ ತಂಡಗಳು ಶ್ಯಾಮ್ ಮತ್ತು ಕವಿರಾಜ್ ಬೆನ್ನಿಗೆ ಬಿದ್ದಿದ್ದವು. ಈ ಪೈಕಿ ಕೋಲಾರ ಮತ್ತು ಬೆಂಗಳೂರಿನ ಒಂದೆರಡು ಪೊಲೀಸ್ ತಂಡಗಳಿಗಷ್ಟೇ ಶ್ಯಾಮ್‌ನನ್ನು ಹಿಡಿಯುವುದು ಮುಖ್ಯವಾಗಿತ್ತೇ ಹೊರತು ಆಂಧ್ರ ಮತ್ತು ತಮಿಳುನಾಡು ಪೊಲೀಸರೆಲ್ಲ ನಿದ್ದೆಗೆಟ್ಟು ಹುಡುಕುತ್ತಿದ್ದದ್ದು ರವಿ ಪೂಜಾರಿಯ ಶೂಟರ್ ಕವಿರಾಜ್‌ನನ್ನು!

ಬಾಲಿವುಡ್‌ನ ಡೈರೆಕ್ಟರ್ ಮಹೇಶ್‌ಭಟ್‌ನ ಆಫೀಸಿಗೇ ಶೂಟರುಗಳನ್ನು ನುಗ್ಗಿಸಿ ಹಾವಳಿಯೆಬ್ಬಿಸಿದ್ದ ಇಂಟರ್‌ನ್ಯಾಷನಲ್ ಪಾತಕಿ ರವಿ ಪೂಜಾರಿ ಕೇವಲ ಬೆಂಗಳೂರಿನ ಶಬನಮ್ ಡೆವಲಪರ್ಸ್ ಮೇಲಷ್ಟೇ ದಾಳಿ ನಡೆಸಿದ್ದರೆ ಆಂಧ್ರ-ತಮಿಳುನಾಡು ಪೊಲೀಸರು ತಲೆ ಕೆಡಿಸಿಕೊಳ್ಳುತ್ತಿರಲಿಲ್ಲ. ತನ್ನ ಬಂಟ ಕವಿರಾಜ್‌ನನ್ನು ಛೂಬಿಟ್ಟು ಶಬನಂ ಅಡ್ಡೆಯ ಇಬ್ಬರು ಮುಗ್ಧರ ಹೆಣ ಕೆಡವಿದ ಬೆನ್ನಲ್ಲೇ ರವಿ ಪೂಜಾರಿ ಚೆನ್ನೈನ ಓರ್ವ ಬಿಲ್ಡರ್‌ಗೆ ಧಮಕಿ ಕೊಟ್ಟ. ತಮಿಳು ಚಿತ್ರರಂಗದ ಓರ್ವ ನಟ ಸೇರಿದಂತೆ ಇಬ್ಬರು ಹೀರೋಗಳಿಗೆ ಥ್ರೆಟ್ ಕಾಲ್ ಮಾಡಿ ತಲಾ ಎರಡೆರಡು ಕೋಟಿಯ ಡಿಮ್ಯಾಂಡಿಟ್ಟಿದ್ದ. ರವಿ ಪೂಜಾರಿಯ ಹಾವಳಿ ಚೆನ್ನೈಗಷ್ಟೇ ಮುಗಿಯಲಿಲ್ಲ, ಹೈದರಾಬಾದಿಗೂ ವಿಸ್ತರಿಸಿತು. ಅಲ್ಲಿನ ಇಬ್ಬರು ಮುಸ್ಲಿಂ ಬಿಲ್ಡರ್‌ಗಳು, ತಿರುಪತಿ ಮೂಲದ ಇನ್ನೋರ್ವ ಫಿಲ್ಮ್ ಪ್ರೊಡ್ಯೂಸ್‌ಗೂ ಇದೇ ಮಾದರಿಯಲ್ಲಿ ಪೂಜಾರಿ ಹಾವಳಿಯಿಟ್ಟ.

ಹಕೀಕತ್ತೆಂದರೆ ಇದ್ಯಾವುದೂ ದೊಡ್ಡ ಸುದ್ದಿಯಾಗಲಿಲ್ಲ. ಒಮ್ಮೆ ರವಿ ಪೂಜಾರಿಯ ಹೆಸರಲ್ಲಿ ಬಿಲ್ಡರ್‌ಗಳಿಗೆ, ಚಿತ್ರನಟರಿಗೆ ಬೆದರಿಕೆ ಕರೆ ಬರುವುದು ಸುದ್ದಿಯಾಗಿಬಿಟ್ಟರೆ ಮಿಕ್ಕೆಲ್ಲ ಕ್ರಿಮಿನಲ್‌ಗಳು ಅದರ ಲಾಭ ಪಡೆಯುವ ಸಾಧ್ಯತೆ ಕಂಡೇ ಆಂಧ್ರ-ತಮಿಳುನಾಡಿನ ಪೊಲೀಸರು ಇದ್ಯಾವುದಕ್ಕೂ ಪ್ರಚಾರ ಕೊಡಲಿಲ್ಲ.

ಆತಂಕ ಹೇಗಿತ್ತೆಂದರೆ, ಇತ್ತ ಶಬನಂ ಡೆವಲಪರ್ಸ್ ಶೂಟೌಟ್ ಕೇಸಿಗೆ ಜಾಮೀನು ಗಿಟ್ಟಿಸಿದ ಕವಿರಾಜ್ ತಾನು ಹೊರಬಿದ್ದ ಒಂದೇ ತಿಂಗಳಲ್ಲಿ ಕೋಲಾರ ಜೈಲಿನಿಂದ ಸೀರಿಯಲ್ ಕಿಲ್ಲರ್ ಶ್ಯಾಮ್‌ನನ್ನು ಎಸ್ಕೇಪ್ ಮಾಡಿಸಿದ್ದಕ್ಕೂ ಅತ್ತ ಚೆನ್ನೈ ಮತ್ತು ಹೈದ್ರಾಬಾದಿನ ಬಿಲ್ಡರ್‌ಗಳಿಗೆ ರವಿ ಪೂಜಾರಿಯಿಂದ ಥ್ರೆಟ್ ಕಾಲ್ ಬರುವುದಕ್ಕೂ ಸರಿಹೋಗಿತ್ತು!

ಶ್ಯಾಮ್ ಕೋಲಾರ ಜೈಲಿಂದ ಎಸ್ಕೇಪಾಗಿದ್ದು ಕಳೆದ ಆಗಸ್ಟ್ 27 ರ ಬೆಳಿಗ್ಗೆಯಾದರೆ ಇದಾಗಿ ವಾರಕ್ಕೇ ಶಬನಂ ಧಣಿ ಗುರಪ್ಪನಪಾಳ್ಯದ ಮಾಜಿ ಕೌನ್ಸಿಲರ್ ಸಮೀವುಲ್ಲಾನ ಶಿಷ್ಯನೊಬ್ಬನನ್ನು ಕವಿರಾಜ್ ಗ್ಯಾಂಗ್ ಅಟ್ಟಾಡಿಸಿತು. ಅದು ಸಮೀವುಲ್ಲಾನಿಗೆ ಬಿಸಿ ಮುಟ್ಟಿಸಲು ಕವಿರಾಜ್ ಹೂಡಿದ ನಾಟಕವಾಗಿತ್ತು. ತನ್ಮೂಲಕ ಹೆದರಿದ ಸಮೀವುಲ್ಲಾ ಎರಡು ಕೋಟಿ ಬಿಚ್ಚುತ್ತಾನೆಂದೇ ರವಿ ಪೂಜಾರಿ ಲೆಕ್ಕ ಹಾಕಿದ್ದ.



ಇನ್ಸ್‌ಪೆಕ್ಟರ್ ಉಮೇಶ್‌ರ ಪ್ರೈಜ್ ಕ್ಯಾಚ್



ಮಾರುವೇಷದಲ್ಲಿ ಇನ್ಸ್‌ಪೆಕ್ಟರ್ ಉಮೇಶ್

ಆದರೆ ಸಮೀವುಲ್ಲಾ ಸಾಮಾನ್ಯನಲ್ಲ. ತನ್ನ ಹೆಣ ಬಿದ್ದರೂ ನಯಾಪೈಸೆ ಬಿಚ್ಚುವುದಿಲ್ಲ ಎಂದೇ ಹಠಕ್ಕೆ ಬಿದ್ದು ಐದು ಮಂದಿ ಬಂದೂಕುಧಾರಿಗಳನ್ನು ತನ್ನ ರಕ್ಷಣೆಗಿಟ್ಟುಕೊಂಡ. ಆವತ್ತು ಸಮೀವುಲ್ಲಾನ ಶಿಷ್ಯನನ್ನು ಅಟ್ಟಾಡಿಸಿದ ಕವಿರಾಜ್ ಗ್ಯಾಂಗ್‌ನಲ್ಲಿ ಕಿಲ್ಲರ್ ಶ್ಯಾಮ್ ಕೂಡ ಇದ್ದ!


ಶ್ಯಾಮ್ ಪಾಲಿಗೆ ಕೋಲಾರ ಜೈಲೆಂಬುದು ಅಭಯಾರಣ್ಯವಾಗಿತ್ತು. ಆಗಸ್ಟ್ 27 ರ ಬೆಳಿಗ್ಗೆ ಜೈಲಿನ ಪಕ್ಕದಲ್ಲೇ ಕವಿರಾಜ್ ಮತ್ತು ಮಾಲೂರಿನ ಲೋಕೇಶ್ ವ್ಯಾಗನ್ R ಗಾಡಿಯನ್ನು ನಿಲ್ಲಿಸಿಕೊಂಡಿದ್ದರು. ಜೈಲಿನ ಸಿಬ್ಬಂದಿಯ ವಿಶ್ವಾಸ ಗಳಿಸಿದ್ದ ಶ್ಯಾಮ್ ಮೆಡಿಕಲ್ ಸ್ಟೋರಿಗೆ ಹೋಗಿ ಔಷಧಿ ತರುತ್ತೇನೆಂದು ನಂಬಿಸಿ ಸೀದಾ ಬಂದವನೇ ಕವಿರಾಜ್ ನಿಲ್ಲಿಸಿಕೊಂಡಿದ್ದ ಕಾರ್ ಹೊಕ್ಕುಬಿಟ್ಟ. ಆ ಹೊತ್ತಿಗಾಗಲೇ ಶ್ಯಾಮ್‌ನ ಹೆಂಡತಿ ಸುಮತಿ ತಾನಿದ್ದ ಗಣಗಲು ಗ್ರಾಮದಿಂದ ಹೊರಬಿದ್ದು ಬೆಂಗಳೂರಿನಲ್ಲಿ ಕಾಯುತ್ತಿದ್ದಳು. ಅವಳನ್ನು ಹತ್ತಿಸಿಕೊಂಡಿದ್ದೇ ಕವಿರಾಜ್ ಮತ್ತು ಶ್ಯಾಮ್ ತಮಿಳುನಾಡಿನ ತೇಕಡಿ, ಮನ್ನಾರ್, ಊಟಿ, ಕೊಡೈಕೆನಾಲ್, ಚೆನ್ನೈ ಯಾತ್ರೆಗೆ ಹೊಂಟುಬಿಟ್ಟರು. ಅದು ಒಂದು ವಾರದ ಟೂರ್. ಅದಾಗಿದ್ದೇ ಬೆಂಗಳೂರಿಗೆ ಬಂದ ಶ್ಯಾಮ್-ಕವಿರಾಜ್ ಸಮೀವುಲ್ಲಾನ ಶಿಷ್ಯನನ್ನು ಅಟ್ಟಾಡಿಸಿದ್ದಾರೆ. ಮಾಜಿ ಮಂತ್ರಿ ರಾಮಲಿಂಗಾರೆಡ್ಡಿಗೂ ಬೆದರಿಕೆ ಹಾಕಿದ್ದು ಗೊತ್ತಾಗುತ್ತಿದ್ದಂತೆ ಪೊಲೀಸ್ ಕಮೀಷನರ್ ಅಚ್ಯುತರಾವ್, ಗೋಪಾಲ್ ಹೊಸೂರ್, ಡಿಸಿಪಿ ಶರತ್‌ಚಂದ್ರ ಗಾಬರಿಗೆ ಬಿದ್ದಿದ್ದಾರೆ.

ಈ ಪೈಕಿ ಶರತ್‌ಚಂದ್ರ ಕಲಾಸಿಪಾಳ್ಯದ ಇನ್ಸ್‌ಪೆಕ್ಟರ್ ಎಸ್.ಕೆ. ಉಮೇಶ್‌ರನ್ನು ಕರೆದು ನೀವೂ ಒಂದು ಕಣ್ಣಿಡಿ ಎಂದಿದ್ದಾರೆ. ಅಷ್ಟಂದಿದ್ದೇ ಉಮೇಶ್ ಕೇಳಬೇಕೆ? ಸದ್ಯ ಇಡೀ ಬೆಂಗಳೂರಿನ ಪೊಲೀಸ್ ಅಧಿಕಾರಿಗಳಲ್ಲಿ ಅಂಡರ್‌ವರ್ಲ್ಡ್ ಪಾಲಿಗೆ ಸಿಂಹಸ್ವಪ್ನ ಅಂತಿದ್ದರೆ ಈ ಸಾಲಿನಲ್ಲಿ ಮೊದಲಿಗೆ ಉಮೇ[...] ನಿಲ್ಲುತ್ತಾರೆ. ಸಣ್ಣದೊಂದು ಕ್ಲೂ ಸಿಕ್ಕರೂ ಉಮೇ[...] ಅದರ ಬುಡದ ತನಕ ಕೆದಕದೇ ಬಿಡುವುದಿಲ್ಲ. ಶ್ಯಾ[...] ವಿಷಯದಲ್ಲಿ ಅವರಿಗಿದ್ದ ಕ್ಲೂ ಎಂದರೆ ಕೋ[...] ಜೈಲಲ್ಲಿದ್ದಾಗ ಆತನನ್ನು ನೋಡಲು ಪದೇ[...] ಕೋಡಳ್ಳಿ ಚಂದ್ರಶೇಖರ್ ಎಂಬಾತ ಬರುತ್ತಿದ್ದದ್ದು ವ[...] ಮಾಲೂರಿನ ಲೋಕೇಶ್ ಎಂಬಾತ ಜೈಲಲ್ಲಿದ್ದ[...] ದಿನ ಶ್ಯಾಮ್‌ಗೆ ಆತ್ಮೀಯನಾಗಿದ್ದದ್ದು!


ಈ ಕೋಡಳ್ಳಿ ಚಂದ್ರಶೇಖರ್‌ನ ಸಂಬಂಧಿಗ[...] ಪರನಹಳ್ಳಿ ವಿಜಿ ಮತ್ತು ಆನಂದ ಎಂಬುವವ[...] ಹಳೇ ಕ್ರಿಮಿನಲ್‌ಗಳೆ. ಶ್ಯಾಮ್ ಎಸ್ಕೇಪಾದಾಗಿನಿಂದ[...] ಇವರಿಬ್ಬರೂ ಕಣ್ಮರೆಯಾಗಿದ್ದು ಉಮೇಶ್ ಲೆಕ್ಕಾ[...] ವನ್ನು ನಿಜವಾಗಿಸಿತ್ತು. ಇದೇ ಹೊತ್ತಿಗೆ ಸಿಕ್ಕ ಮತ್ತೊ[...] ಮಾಹಿತಿಯೆಂದರೆ ಕವಿರಾಜ್ ಮತ್ತು ಶ್ಯಾಮ್ ಎಸ್ಕೇ[...] ಕಾರು ವರ್ತೂರಿನ ಮುನಿರಾಜ್‌ಗೆ ಸೇರಿದ್ದೆಂಬು[...]

ಈ ಮುನಿರಾಜು ಪುಡಿ ಲ್ಯಾಂಡ್ ಡೀಲರ್. [...] ಕೈಹಾಕಿದ ಆಸ್ತಿ ಲಫಡೆಯೊಂದನ್ನು ಸೆಟಲ್ ಮಾಡ[...] ಕವಿರಾಜ್ ಒಪ್ಪಿಕೊಂಡಿದ್ದ. ಅದಕ್ಕೆಂದು ಐದು ಲ[...] ಅಡ್ವಾನ್ಸ್ ಅನ್ನೂ ಪಡೆದಿದ್ದ. ಈ ಹೊತ್ತಿಗಾಗ[...] ಕೋಲಾರ ಇನ್ಸ್‌ಪೆಕ್ಟರ್ ಕೃಷ್ಣಮೂರ್ತಿ ಮ[...] ಹುಳಿಮಾವು ಇನ್ಸ್‌ಪೆಕ್ಟರ್ ಬಾಬು ಶ್ಯಾಮ್ ಹ[...] ಕೋಟೆಯ ಗಣಗಲು ಗ್ರಾಮಕ್ಕೆ ಬಂದು ವಿಚಾರಿ[...] ಶ್ಯಾಮ್ ಗಮನಕ್ಕೆ ಬಂತು. ಆದರೆ ಉಮೇ[...] ಮತ್ತೊಂದು ಕ್ಲೂ ಹಿಡಿದು ವರ್ತೂರು, ಕೋ[...] ಮುದುಕೂರು, ಸರ್ಜಾಪುರ ವ್ಯಾಪ್ತಿಯಲ್ಲಿ ರೌಂಡಿ[...] ಆರಂಭಿಸಿಬಿಟ್ಟರು.

ಮುದುಕೂರು ನಾಗೇಶನೆಂಬ ಮತ್ತೊಬ್ಬ ರಿಯ[...] ಎಸ್ಟೇಟ್ ಕ್ರಿಮಿಯೂ ಶ್ಯಾಮ್‌ಗೆ ತನ್ನ ಕಾರು ಕೊಟ[...] ವೈಟ್‌ಫೀಲ್ಡ್‌ನಿಂದ ಹೊಸಕೋಟೆ ಮಧ್ಯದ ತಿಮ್ಮಶೆ[...] ಕ್ರಾಸ್, ಕೋಡಳ್ಳಿ, ಮಾಕನಹಳ್ಳಿ, ವಾಗಟ, ಮಾಲೂ[...] ಟೇಕಲ್ ಈ ಸುತ್ತಮುತ್ತಲೇ ಆ ಕಾರು ಸುತ[...] ಕೊಂಡಿತ್ತು. ಹೊಸಕೋಟೆಯ 'ಎಚ್' ಕ್ರಾ[...] ಕ್ಯಾಲನೂರು ಮತ್ತು ಚಿಂತಾಮಣಿಯಲ್ಲಿ ಶ್ಯಾಮ[...] ಲಿಂಕುಗಳಿದ್ದದ್ದನ್ನು ಹೇಗೋ ಪತ್ತೆಹಚ್ಚಿದ ಉಮೇ[...] ಅಕ್ಟೋಬರ್ 5 ರ ಹೊತ್ತಿಗೆ ಮಹತ್ವದ ಇನ್ನೊ[...] ಸುಳಿವು ಸಿಕ್ಕಿದೆ. ಅದು ದೇವನಗುಂದಿ ಪೆಟ್ರೋ[...] ಸ್ಥಾವರದ ಸುತ್ತಮುತ್ತ ಶ್ಯಾಮ್ ಓಡಾಡುತ್ತಿದ್ದಾನೆ[...] ಸುದ್ದಿ. ಪೆಟ್ರೋಲ್ ಕಲಬೆರಕೆ ದಂಧೆಗೆ ಕೈಯಿ[...] ಒಂದಷ್ಟು ದುಡ್ಡು ಮಾಡುವುದು ಈ ಜೋಡಿ[...] ಉದ್ದೇಶವಾಗಿತ್ತು. ಅದಕ್ಕೆಂದು ನರಸಾಪುರದ ಪ[...] ಪೆಟ್ರೋಲ್ ಖದೀಮನೊಬ್ಬ[...] ಶ್ಯಾಮ್ ಭೇಟಿಯಾಗಿ[...] ಜೊತೆಗೇ ಹೊಸಕೋಟೆಯ ಹ[...] ಕಳ್ಳ ಗುಳ್ಳೇನಾಗ ಎಂಬುವವನ[...] ಶ್ಯಾಮ್ ಜೊತೆ ಹಾಕಿಕೊಂಡ[...]



ಇನ್ಸ್‌ಪೆಕ್ಟರ್ ಉಮೇಶ್



ಕವಿರಾಜ್ ತಂದೆ ಧನಭರತ್‌ರಾಜ್

ಪಾಸ್‌ಪೋರ್ಟ್ ದುಬೈಗೋ, ಬ್ಯಾಂಕಾಕ್‌ಗೋ?

ಕ್ರೌರ್ಯ ಮತ್ತು ಪೈಶಾಚಿಕತೆಯಲ್ಲಿ ದಂಡುಪಾಳ್ಯದ ಹಂತಕರ ಸಮಕ್ಕೆ ನಿಲ್ಲಬಲ್ಲ ಕಿಲ್ಲರ್ ಶ್ಯಾಮ್‌ಗೆ ಈಗಾಗಲೇ ಏಳು ಪ್ರಕರಣಗಳಲ್ಲಿ ಜೀವಾವಧಿ ಶಿಕ್ಷೆಯಾಗಿದೆ. ಗ್ರಿಂಡ್ಲೇಸ್ ಬ್ಯಾಂಕ್ ಅಧಿಕಾರಿ ಸುಪರ್ಣಾ ಮರ್ಡರ್ ಮತ್ತು ತುಮಕೂರಿನಲ್ಲಿ ಒಂದೇ ದಿನಕ್ಕೆ ಮೂವರನ್ನು ಕೊಲೆಗೈದ ಕೇಸುಗಳಲ್ಲಿ ಇವತ್ತಲ್ಲ ನಾಳೆ ಮರಣದಂಡನೆ ಕಟ್ಟಿಟ್ಟಬುತ್ತಿ.

ಹೇಗೂ ನೇಣುಶಿಕ್ಷೆ ತಪ್ಪದು. ಸಾವು ಸನ್ನಿಹಿತ. ಜೈಲಿಂದ ಎಸ್ಕೇಪಾಗಿ ಒಂದಷ್ಟು ಮಂದಿ ಬಿಲ್ಡರ್‌ಗಳ ಹೆಣ ಕೆಡವಿದರೆ ರವಿ ಪೂಜಾರಿ ಖಂಡಿತ ಕೋಟಿ ಲೆಕ್ಕದಲ್ಲೇ ದುಡ್ಡು ಕೊಡುತ್ತಾನೆ. ದುಬೈಗೋ, ಬ್ಯಾಂಕಾಕ್‌ಗೋ ಆತನೇ ಪಾಸ್ ಪೋರ್ಟ್ ವ್ಯವಸ್ಥೆಯನ್ನೂ ಮಾಡುತ್ತಾನೆ. ಪೊಲೀಸರಿಗೆ ಸಿಕ್ಕಿಬೀಳದ ಹಾಗೇ ಉಪಾಯವಾಗಿ ವಿದೇಶಕ್ಕೆ ಹಾರಿಬಿಟ್ಟರೆ ಜೀವಾವಧಿಯೂ ಇಲ್ಲ, ಗಲ್ಲುಶಿಕ್ಷೆಯೂ ಇಲ್ಲ!

ಇದು ಶ್ಯಾಮ್‌ನ ಲೆಕ್ಕಾಚಾರವಾಗಿತ್ತು. ಇಂಥಾದ್ದೊಂದು ಮಾಸ್ಟರ್ ಪ್ಲಾನ್ ಅನ್ನು ಆತನ ತಲೆಗೆ ತುಂಬಿ ಎಸ್ಕೇಪ್ ಆಗುವ ಯೋಜನೆಯನ್ನೂ ಹೇಳಿಕೊಟ್ಟವನು ಶೂಟರ್ ಕವಿರಾಜ್.

ಹಾಕಿದ ಪ್ಲಾನ್ ಸರಿಯಾಗೇ ಇತ್ತು. ಸಮೀವುಲ್ಲಾ ದುಡ್ಡು ಬಿಚ್ಚದೇ ಹೋದರೂ ರಾಮಲಿಂಗಾರೆಡ್ಡಿ ಖಂಡಿತ ದುಡ್ಡು ಬಿಚ್ಚುತ್ತಾನೆಂಬ ನಿರೀಕ್ಷೆಯಿತ್ತು. ಎಂಬೆಸ್ಸಿ ಬಿಲ್ಡರ್‌ನ ಖದೀಮ ಜೀತು ಮೀರ್ವಾನಿ ಮತ್ತು ಬಿಲ್ಡರ್ ತೇಜರಾಜ್ ಗುಲೇಚರನ್ನು ಮುಂದಿನ ಟಾರ್ಗೆಟ್ ಮಾಡಲು ರವಿ ಪೂಜಾರಿಯಿಂದಲೇ ಇಷಾರೆ ಸಿಕ್ಕಿತ್ತು. ಬೆಂಗಳೂರಿನ ನಂತರ ಚೆನ್ನೈ ಮತ್ತು ಹೈದರಾಬಾದ್‌ಗಳಲ್ಲಿ ಬಿಲ್ಡರ್‌ಗಳನ್ನು ಸುಲಿಯುವ ಎಸ್ಟಿಮೇಟ್ ಕೂಡ ಸಿದ್ಧವಾಗಿತ್ತು. ಎಣಿಸಿದಂತೆ ಎಲ್ಲವೂ ಆಗಿದ್ದರೆ ಚೆನ್ನೈ, ಹೈದ್ರಾಬಾದ್ ಮತ್ತು ಬೆಂಗಳೂರುಗಳಲ್ಲಿ ಕನಿಷ್ಠ ಒಬ್ಬೊಬ್ಬ ಬಿಲ್ಡರ್‌ನದ್ದಾದರೂ ಹೆಣ ಬೀಳುತ್ತಿತ್ತು!

ಆದರೆ ವಿಧಿ ಇನ್ಸ್‌ಪೆಕ್ಟರ್ ಉಮೇಶ್ ರೂಪದಲ್ಲಿ ಮುಳುವಾಯಿತು. ಬಹುಶಃ ಕವಿರಾಜ್ ಜೊತೆಗಿಲ್ಲದೇ ಹೋಗಿದ್ದರೆ ಶ್ಯಾಮ್ ಸಿಕ್ಕಿ ಬೀಳುತ್ತಿರಲಿಲ್ಲ. ಕವಿರಾಜ್ ಮೂಲತಃ ಮುಂಬಯಿಯವನಾದರೂ ಚೆನ್ನಾಗಿ ಕನ್ನಡ ಮಾತಾಡುತ್ತಾನೆ. ಈತನ ತಂದೆ ಧನಭರತ್‌ರಾಜ್ ಈ ಹಿಂದೆ ಎನ್‌ಜಿಎಫ್‌ನಲ್ಲಿ ಸೆಕ್ಯೂರಿಟಿ ಗಾರ್ಡ್ ಆಗಿದ್ದು ಅಲ್ಲಿಂದ ನಿವೃತ್ತಿ ಪಡೆದು ಸದ್ಯ ಪ್ರೆಸ್‌ಕ್ಲಬ್‌ನಲ್ಲಿ ಸೆಕ್ಯೂರಿಟಿ ಗಾರ್ಡ್ ಆಗಿದ್ದಾನೆ. ಈತನನ್ನು ಫಾಲೋ ಮಾಡಿಬಿಟ್ಟರೆ ಕವಿರಾಜ್‌ನ ತಾಯಿ ಮತ್ತು ಆಕೆಯ ಜೊತೆಗಿರುವ ಕವಿರಾಜ್‌ನ ಪತ್ನಿಯೂ ಪತ್ತೆಯಾಗುತ್ತಾಳೆ.


ಇದ್ಯಾವುದನ್ನೂ ಲೆಕ್ಕ ಹಾಕದೇ ಶ್ಯಾಮ್ ಕವಿರಾಜ್‌ನನ್ನು ನಂಬಿಬಿಟ್ಟ ಮತ್ತು ಆ ಕಾರಣಕ್ಕೇ ಸಿಕ್ಕಿಬಿದ್ದ.

ಶ್ಯಾಮ್-ಕವಿರಾಜ್ ಎಲ್ಲೆಲ್ಲಿ ಕಾಲಿಡುತ್ತಾರೋ ಆ ಜಾಗಕ್ಕೆ ಇನ್ಸ್‌ಪೆಕ್ಟರ್ ಉಮೇಶ್ ಪಡೆ ಬಂದೇ ಬರುತ್ತಿತ್ತು. ತನ್ನ ನೆಟ್‌ವರ್ಕ್ ಹೇಗೋ ಉಮೇಶ್‌ಗೆ ಗೊತ್ತಾಗಿಬಿಟ್ಟಿದೆ ಎಂಬ ವಾಸನೆ ಶ್ಯಾಮ್‌ನಂಥ ಪಳಗಿದ ಪಾತಕಿಯ ಮೂಗಿಗೆ ಬಡಿಯಲು ಎಷ್ಟು ಹೊತ್ತು?

ಇದಾಗಿದ್ದೇ ಶ್ಯಾಮ್ ಎಷ್ಟು ಹುಷಾರಾದನೆಂದರೆ ಕಾರು ಬಿಟ್ಟು ಕೆಳಗಿಳಿಯುವುದನ್ನೇ ನಿಲ್ಲಿಸಿಬಿಟ್ಟ. ಮಾಲೂರು ಮತ್ತು ದೇವನಗುಂದಿ ನಡುವೆ ಐನೂರೆಕರೆಯ ನಿರ್ಜನ ನೀಲಗಿರಿ ಕಾಡಿದೆ. ಜನ ಅದನ್ನು ಮಾರಸಂದ್ರ ಫಾರೆಸ್ಟ್ ಅನ್ನುತ್ತಾರೆ. ಹಗಲು ಎಲ್ಲೆಲ್ಲೋ ಸುತ್ತುವುದು. ಸಂಜೆಯಾಗುತ್ತಿದ್ದಂತೆ ಆ ಕಾಡನ್ನು ಹೊಕ್ಕಿ ಬಂಡೆಗಳ ನಡುವೆ ಮಲಗಿ ಬೆಳಿಗ್ಗೆ ಎದ್ದು ಪರಾರಿಯಾಗುವುದೇ ದಿನಚರಿಯಾಯಿತು. ಆದರೆ ಇನ್ಸ್‌ಪೆಕ್ಟರ್ ಉಮೇಶ್ ಅದೆಂಥಾ ಜಾಲ ಹರಡಿದ್ದರೆಂದರೆ ಕೆಂಪು ಕ್ವಾಲೀಸ್ ಗಾಡಿಯೊಂದು ಮಾರಸಂದ್ರ ಫಾರೆಸ್ಟ್ ಹೊಕ್ಕಿದ ಸುದ್ದಿ ಹೇಗೋ ಅವರ ಕಿವಿ ಮುಟ್ಟಿತ್ತು!

ಹಾಗಂತ ದುಡುಕಲಿಲ್ಲ. ಹಳ್ಳಿಗಳಲ್ಲಿ ಮಾವಿನ ತೋಟದ ಕಾಂಟ್ರಾಕ್ಟ್ ಹಿಡಿಯುವ ಮುಸ್ಲಿಂ ವ್ಯಾಪಾರಿಯೊಬ್ಬನ ವೇಷ ಧರಿಸಿದ ಉಮೇಶ್ ಮಾರಸಂದ್ರ ಫಾರೆಸ್ಟ್ ಸುತ್ತಮುತ್ತ ಒಂದು ವಾರ ಕಾಲ ಓಡಾಡಿದ್ದಾರೆ. ಅಕ್ಟೋಬರ್ ಹದಿನೈದರ ರಾತ್ರಿ ಸರಿಸುಮಾರು ಒಂದು ಡಜನ್ ವೇಷಧಾರಿ ಪೊಲೀಸರನ್ನು ಕಟ್ಟಿಕೊಂಡು ಕಾಡಿನ ಅಂಚಿನಲ್ಲಿದ್ದ ಮೋರಿಯೊಂದರ ಒಳಗೆ ಹೊಂಚು ಹಾಕಿ ಕೂತಿದ್ದಾರೆ.

ಇನ್ನೇನು ಶ್ಯಾಮ್ ಗ್ಯಾಂಗ್ ಸಿಕ್ಕಿಬೀಳಬೇಕೆನ್ನುವಷ್ಟರಲ್ಲಿ ಎಂಥಾ ಯಡವಟ್ಟಾಯಿತೆಂದರೆ; ಮೋರಿಯ ಕಾಮಗಾರಿಗೆಂದು ಬಂದಿದ್ದ ಕೂಲಿಗಳು ಅವಿತುಕೊಂಡಿದ್ದವರನ್ನು ನೋಡಿದ್ದೇ ಕಿರುಚಿಬಿಟ್ಟರು!



ಪಾತಕಿಗಳಿಬ್ಬರೂ ಸಿಕ್ಕಿಬಿದ್ದ ಕವಿರಾಜ್‌ನ ಮನೆ

ಇದರ ವಾಸನೆ ಹತ್ತಿದ್ದೇ ಶ್ಯಾಮ್-ಕವಿರಾಜ್ ನೇರವಾಗಿ ತಮಿಳುನಾಡಿಗೆ ಪರಾರಿಯಾದರು. ಅಲ್ಲಿಗೆ ಇದೀ ಲಿಂಕೇ ಮಿಸ್ಸಾಗಿತ್ತು. ಆನಂತರ ಸೇಲಂನ ಟ್ರಾವೆಲ್ಸ್ ಒಂದರಲ್ಲಿ ಕ್ವಾಲೀಸ್ ಬುಕ್ ಮಾಡಿ ದಾರಿ ಮಧ್ಯೆ ಡ್ರೈವರ್ ಪ್ರಜ್ಞೆ ತಪ್ಪಿಸಿ ಆತನನ್ನು ಹಳ್ಳಕ್ಕೆಸೆದರು. ಗಾಡಿ ಸಮೇತ ಬೆಂಗಳೂರಿಗೆ ಬಂದವರು ದಿನಕ್ಕೊಂದು ನಂಬರ್ ಪ್ಲೇಟ್ ಬದಲಿಸುತ್ತಿದ್ದರು. ಆದರೆ ಉಮೇಶ್ ರಂಗೋಲಿಯ ಕೆಳಗೇ ನುಸುಳಿ, ಶ್ಯಾಮ್‌ಗಿದ್ದ ಒಂದೊಂದೇ ಲಿಂಕುಗಳನ್ನು ವಾಚ್ ಮಾಡಿದ್ದಾರೆ. ಪರಮನಹಳ್ಳಿಯ ವಿಜಿ ಮತ್ತು ಆನಂದರ ಬೆನ್ನಿಗೆ ಬಿದ್ದಿದ್ದ ಉಮೇಶ್‌ರ ಬಾತ್ಮಿದಾರನೊಬ್ಬ ಹೇಗೋ ಕವಿರಾಜ್‌ನ ವಿಶ್ವಪ್ರಿಯ ಲೇಔಟ್‌ನ ಹೊಸ ಮನೆಯನ್ನು ನೋಡಿಕೊಂಡಿದ್ದ.

ಅಲ್ಲಿಂದಲೇ ಕವಿರಾಜ್‌ನನ್ನು ಫಾಲೋ ಮಾಡಿದ ಉಮೇಶ್‌ರ ಎಲ್ಲಾ ಶ್ರಮಕ್ಕೆ ಫಲ ಸಿಕ್ಕಿದ್ದು ಅಕ್ಟೋಬರ್ 21 ರಂದು. ಮೈಸೂರು ರಸ್ತೆಯ ದುಬಾಸಿಪಾಳ್ಯದ ರೈಲ್ವೇ ಲೆವೆಲ್ ಕ್ರಾಸಿಂಗ್ ಬಳಿ ಲ್ಯಾಂಡ್ ಡೀಲರ್ ಒಬ್ಬನಿಗಾಗಿ ಶ್ಯಾಮ್ ಗ್ಯಾಂಗ್ ಹೊಂಚು ಹಾಕುತ್ತಿತ್ತು. ಇನ್ನೇನು ಕವಿರಾಜ್ ಬಂದು ಶ್ಯಾಮ್ ತಂಡದ ಜೊತೆ ಸೇರಬೇಕು, ಅಷ್ಟರಲ್ಲೇ ಇನ್ಸ್‌ಪೆಕ್ಟರ್ ಉಮೇಶ್ ತಂಡ ಸುತ್ತುವರಿದಿತ್ತು.


ಅದು ಉಮೇಶ್ ಪಾಲಿನ ಪ್ರೈಜ್ ಕ್ಯಾಚಾಗಿತ್ತು!

ಶ್ಯಾಮ್ ಮತ್ತು ಕವಿರಾಜ್ ಮಾತ್ರವಲ್ಲದೇ ಪರಮನಹಳ್ಳಿಯ ವಿಜಿ, ಆನಂತ ಮತ್ತು ಮಾರುತಹಳ್ಳಿಯ ಪ್ರಕಾಶ್ ಇನ್ಸ್‌ಪೆಕ್ಟರ್ ಉಮೇಶ್ ಬೀಸಿದ ಬಲೆಗೆ ಬಿದ್ದರು. ಶ್ರದ್ಧೆ ಮತ್ತು ಕಠಿಣ ಪರಿಶ್ರಮವಿದ್ದರೆ ಎಂಥಾ ಪಾತಕಿಯನ್ನೂ ಹಿಡಿಯಬಹುದೆಂಬುದನ್ನು ತೋರಿಸಿಕೊಟ್ಟಿದ್ದಾರೆ ಇನ್ಸ್‌ಪೆಕ್ಟರ್ ಉಮೇಶ್.

■ ರಾ. ಸೋಮನಾಥ್

ರೌಡಿಗಳಿಂದ ರೌಡಿಗಳಿಗಾಗಿ





ಮುಹೂರ್ತ ಹೀಗೂ ಉಂಟೆ?

ಬೆಕ್ಕಿನಕಣ್ ರಾಜೇಂದ್ರನನ್ನು ಕೊಂದ ರೌಡಿ ಒಂಟೆ ಮತ್ತು ಮಾರ್ಕೆಟ್ ವೇಡಿಗೂ ಶಿವರಾಜ್‌ಕುಮಾರ್ ಅಭಿನಯದ ಮಾದೇಶ ಎಂಬ ಸಿನಿಮಾಕ್ಕೂ ಏನು ಸಂಬಂಧ?

'ಮಾದೇಶ'ದ ಮುಹೂರ್ತದಲ್ಲೇ 'ಇವತ್ತಿನಿಂದ ರೌಡಿಗಳಾದ ಒಂಟೆ ಮತ್ತು ವೇಡಿ ಶಸ್ತ್ರತ್ಯಾಗ ಮಾಡುತ್ತಾರೆಂದೂ ಇನ್ನು ಮುಂದೆ ಮನುಷ್ಯರಾಗಿ ಬದುಕುತ್ತಾರೆಂದೂ ಅವರನ್ನು ಪತ್ರಕರ್ತರೆಲ್ಲರೂ ಆಶೀರ್ವಾದಿಸಬೇಕೆಂದೂ ಏಕೆ ಬನ್ನವತ್ತಳೆ ಸಲ್ಲಿಸುತ್ತಾನೆ?

ಮುಹೂರ್ತಕ್ಕೆ, ಬಂದ ಪತ್ರಕರ್ತರಿಗೂ, ಇದ್ಯಾವುದೂ ಅರ್ಥವಾಗದೇ ಪೆಚ್ಚುಬಿದ್ದ ನಟ ಶಿವಣ್ಣನಿಗೂ ಇವತ್ತಿಗೂ ಪ್ರಶ್ನೆ ಕಾಡುತ್ತಲೇ ಇದೆ. ಅಕ್ಟೋಬರ್ 5ರ ಬೆಳಿಗ್ಗೆ ಕಂಠೀರವ ಸ್ಟುಡಿಯೋದಲ್ಲಿ ಶಿವರಾಜ್ ಅಭಿನಯದ 'ಮಾದೇಶ'ದ ಮುಹೂರ್ತಕ್ಕೆಂದು ಸ್ವತಃ ಪಾರ್ವತಮ್ಮ ರಾಜ್‌ಕುಮಾರ್ ಹಾಜರಿದ್ದರು. ಪುನೀತ್, ರಾಘವೇಂದ್ರ ರಾಜ್‌ಕುಮಾರ್, ಗೀತಾ ಶಿವರಾಜ್‌ಕುಮಾರ್ ಎಲ್ಲರೂ ನೋಡು ನೋಡುತ್ತಿದ್ದಂತೆಯೇ ದೈತ್ಯಕಾರದ ವ್ಯಕ್ತಿಯೊಬ್ಬ ರೌಡಿಗಳಾದ ಒಂಟೆ-ವೇಡಿಯನ್ನು ತಬ್ಬಿ ಮುದ್ದಾಡುತ್ತಲೇ ಇನ್ನು ಮುಂದೆ ಇವರ್‍ಯಾರೂ ರೌಡಿಗಳಲ್ಲ, ನಾಳೆಯಿಂದಲೇ ನಾಗರಿಕರಾಗುತ್ತಾರೆ. ಹಾಗಂಥ ನಾನೇ ಪೋಲೀಸ್ ಅಧಿಕಾರಿಯೊಬ್ಬರ ಬಳಿ ಕರೆದೊಯ್ದು ಆಣೆ ಮಾಡಿಸಿದ್ದೀನಿ. ಇವರಿಬ್ಬರಿಗೂ ನಿಮ್ಮ ಆಶೀರ್ವಾದ ಬೇಕು ಎಂದು ಪತ್ರಕರ್ತರೆದುರು ಹಲ್ಲು ಗಿಂಜಿದ.

ನೆರೆದ ಪತ್ರಕರ್ತರ್‍ಯಾರಿಗೂ ಏನಾಗುತ್ತಿದೆ ಎಂಬುದೇ ಕನ್‌ಫ್ಯೂಸು. ಬೆಕ್ಕಿನ್‌ಕಣ್ ರಾಜೇಂದ್ರನನ್ನು ಕೊಂದು ನಿನ್ನೆ ಮೊನ್ನೆಯ ತನಕ ಜೈಲು ಕಳೆದವನು ಒಂಟೆ ಉರ್ಫ್ ರೋಹಿತ್. ಈತ ಮತ್ತೊಬ್ಬ ರೌಡಿ ಸೈಲೆಂಟ್ ಸುನೀಲನ ರೈಟ್‌ಹ್ಯಾಂಡ್. ಜೊತೆಗಿದ್ದ ವೇಡಿಯೂ ಬೆಕ್ಕಿನ್‌ಕಣ್ ಕೊಲೆ ಕೇಸಿನಲ್ಲಿದ್ದವನೆ. ಇಬ್ಬರ ಮೇಲೂ ಒಂದು ಡಜನ್ ಕೇಸುಗಳಿವೆ. ಕಣ್ಣಿಗೆ ಬಿದ್ದರೆ ಪೊಲೀಸರೇ ಎಳೆದೊಯ್ಯುತ್ತಾರೆ. ಇಂಥವರನ್ನು 'ಮಾದೇಶ'ದ ಮುಹೂರ್ತಕ್ಕೆ ಹಾಜರಾಗುತ್ತಾರೆಂದರೆ, ಅವರಿಗೂ ಈ ಸಿನಿಮಾಕ್ಕೂ ಏನು ಸಂಬಂಧ?

ಸ್ವತಃ ಶಿವಣ್ಣನಿಗೇ ನೆರೆದ ರೌಡಿಗಳನ್ನು ಕಂಡು ಗಾಭರಿಯಾಗಿತ್ತು. ಒಂಟೆ-ವೇಡಿಯ ಜೊತೆ ಕಮ್ಮಿಯೆಂದರೂ ಎರಡು ಡಜನ್ ಪೋರ್ಕಿಗಳಿದ್ದರು. ಅನೇಕರ ಮುಖದಲ್ಲಿ ರೇಜರ್ ಮಾರ್ಕು. ಅರ್ಧಕ್ಕರ್ಧ ಕುಡಿದು ಚಿತ್ತಾಗಿದ್ದರು. ಕುಡಿದ ಕಳಪೆ ವಿಸ್ಕಿಯ ಗಬ್ಬು 'ತಲೆ ಚಕ್ಕರ್' ತರಿಸುತ್ತಿತ್ತು. ಉತ್ತರ ಮಾತ್ರ ಯಾರಿಗೂ ಸಿಗಲಿಲ್ಲ. ಕುತೂಹಲ ತಾಳದೇ ರಿಪೋರ್ಟರ್ ಒಬ್ಬ ಇವರಿಬ್ಬರೂ ಮಾದೇಶದಲ್ಲಿ ಆಕ್ಟ್ ಮಾಡ್ತಾರಾ? ಎಂದು ಕೇಳಿಬಿಟ್ಟ. ಪಕ್ಕದಲ್ಲೇ ಇದ್ದ ಧೈತ್ಯ ಡೈರೆಕ್ಟರ್ ರವಿ ಸ್ರೀವಸ್ತ ಇಲ್ಲಾ ಇಲ್ಲಾ ಆಕ್ಟ್ ಮಾಡಲ್ಲ ಅಂದ.

ಹಾಗಾದ್ರೆ ಇವರೇ ಸಿನಿಮಾದ ಪ್ರೊಡ್ಯೂಸರ್‌ಗಳಾ? ಎಂದು ಇನ್ನೊಬ್ಬ ಪತ್ರಕರ್ತ ಪ್ರಶ್ನೆಯಿಟ್ಟರೆ ರವಿಸ್ರೀವತ್ಸ 'ನೋನೋ...!' ಎಂದ. ಮತ್ತೆ ಫೈನಾನ್ಸಿಯರ್‌ಗಳಾ? ಎಂದು ಇನ್ನಾರೋ ಕೇಳಿದ್ದಕ್ಕೂ ಅದೇ ಉತ್ತರ ಕೊಟ್ಟ. ಕೊನೆಗೂ ರೌಡಿಗಳಾದ ಒಂಟೆ ಮತ್ತು ಮಾರ್ಕೆಟ್ ವೇಡಿಗೂ ಮಾದೇಶ ಚಿತ್ರಕ್ಕೂ ಏನು ಸಂಬಂಧ ಎಂಬುದು ಚಿದಂಬರ ರಹಸ್ಯವಾಗೇ ಉಳಿಯಿತು.

ಅದು 'ಮಾದೇಶ'ದ ನಿರ್ದೇಶಕ ರವಿಸ್ರೀವತ್ಸನ ಹುಟ್ಟುಗುಣ ಮತ್ತು ಜಾಯಮಾನ. ದೇಹ ಬೆಳೆಸಿದ್ದರ ರವಷ್ಟಾದರೂ ಬುದ್ಧಿ ಬೆಳೆಸಿದ್ದರೆ ರವಿಸ್ರೀವತ್ಸ ಇಂಥ ಪೇಚಿಗೆ ಸಿಲುಕುತ್ತಿರಲಿಲ್ಲ. ಈತನಕ ಈತನ ಯಾವೊಂದು ಚಿತ್ರವೂ ಹಿಟ್ಟಾಗಿಲ್ಲ. ಗಂಡಹೆಂಡತಿಯಂಥ ಪಕ್ಕಾ ಬ್ಲೂಫಿಲ್ಮ್ ಜಾತಿಯ ಸಿನಿಮಾ ತೆಗೆದು ಅದನ್ನು ಟೀಕಿಸಿದ ಪತ್ರಕರ್ತರೊಬ್ಬರಿಗೆ ಕೊಲೆ ಬೆದರಿಕೆ ಹಾಕಿ ಫಿಲ್ಮ್ ಛೇಂಬರ್‌ನಿಂದ ಛೀಮಾರಿ ಹಾಕಿಸಿಕೊಂಡ. ಪತ್ರಕರ್ತರಿಂದಲೂ ಬಹಿಷ್ಕಾರಕ್ಕೀಡಾದ. ಆನಂತರ 'ರಾಜೀವ್ ಅಲ್ಲಾ ಗಾಂಧಿ ಅಲ್ಲಾ' ಎಂಬ ಗಬ್ಬು ಚಿತ್ರ ತೆಗೆದು ಅದಕ್ಕೆ ನೆಟ್ಟಗೊಂದು ಹೆಸರಿಡಲಿಕ್ಕೂ ಆಗದೇ ಮುಖ ಕೆಡಿಸಿಕೊಂಡ.

ಡೈರೆಕ್ಷನ್ ಗೊತ್ತಿಲ್ಲ, ಬುದ್ಧಿ ವಿವೇಕ ಮೊದಲೇ ಇಲ್ಲ. ಇಂಥವನನ್ನು ನಂಬಿ ಮಾದೇಶ ಎಂಬ ಚಿತ್ರಕ್ಕೆ ಕೋಟಿ ಲೆಕ್ಕದಲ್ಲಿ ದುಡ್ಡು ಸುರಿಯಲು ಗೋವರ್ಧನ ಮೂರ್ತಿ ಎಂಬ ಪ್ರೊಡ್ಯೂಸರ್ ಕಂ ಲ್ಯಾಂಡ್ ಡೀಲರ್‌ಗಾದರೂ ಬುದ್ಧಿ ಬೇಕಲ್ಲವೆ?

ಹಕೀಕತ್ತೇನೆಂದರೆ ಈ ಗೋವರ್ಧನ ಮೂರ್ತಿಗೆ ಸಿನಿಮಾ ಗೆಲ್ಲುತ್ತೋ ಮಲಗುತ್ತೋ ಎಂಬುದೇ ಬೇಕಿಲ್ಲ. ಹುಟ್ಟಾ 'ಹಕ್ಕಿ' ಶೋಕಿಲಾಲ.

ಸಿನಿಮಾ ನಟಿಯೆಂದರೆ ಸಾಕು ಕೇಳಿದಷ್ಟು ದುಡ್ಡು ಬಿಚ್ಚುತ್ತಾನೆ. ಕನಿಷ್ಠ ವಾರಕ್ಕೊಮ್ಮೆಯಾದರೂ ಸಿಕ್ಕ 'ಹಕ್ಕಿ'ಯ ಜೊತೆ ಊಟಗೆ ಹೋಗುತ್ತಾನೆ. ಈತನ ಅಣ್ಣ ಚನ್ನಕೇಶವ ದೊಡ್ಡಗುಬ್ಬಿ ಸುತ್ತಮುತ್ತಲ ದಾನಶೂರ ಕರ್ಣ. ಅಣ್ಣನಿಗೆ ತೀರ ವಿರುದ್ಧ ಬುದ್ಧಿಯ ಗೋವರ್ಧನ ಮೂರ್ತಿ ಈ ಹಿಂದೆ ಲಲ್ಲೇಶ್ ರೆಡ್ಡಿ ಎಂಬಾತನ ಜೊತೆ ಸೇರಿ ಸ್ಟೂಡೆಂಟ್ ಎಂಬ ಚಿತ್ರ ನಿರ್ಮಿಸಿದ. ಮದನ್‌ಮಲ್ಲು ಮಹಾತ್ಮೆಯಲ್ಲಿ ಸ್ಟೂಡೆಂಟ್ ತೋಪಾಗಿ ಒಂದೂವರೆ ಕೋಟಿ ಕೈ ಕಚ್ಚಿತು.

ಬೆನ್ನಲ್ಲೇ ಲಲ್ಲೇಶ್ ರೆಡ್ಡಿಗೂ ಗೋವರ್ಧನ ಮೂರ್ತಿಗೂ ಕಿತ್ತಾಟ ಬಂತು.

ಈಗ ಸ್ರೀವಸ್ತನನ್ನು ಮುಂದಿಟ್ಟುಕೊಂಡು 'ಮಾದೇಶ' ನಿರ್ಮಿಸುತ್ತಿದ್ದಾನೆ. ಹೆಸರಿಗಷ್ಟೇ ಗೋವರ್ಧನ ಮೂರ್ತಿ ನಿರ್ಮಾಪಕನಾದರೂ ಇದೀ ಚಿತ್ರದ ಅಸಲೀ ಸೂತ್ರಧಾರ ಬಾಬುರೆಡ್ಡಿ. ಈತನೂ ಲ್ಯಾಂಡ್ ಕಸುಬಿನವನೆ. ರೌಡಿ ಸೈಲೆಂಟ್ ಸುನೀಲ ಮತ್ತು ಒಂಟೆ ಗ್ಯಾಂಗ್ ಜೈಲಲ್ಲಿದ್ದಷ್ಟೂ ದಿನ ಜೈಲಿಗೆ ಬಿರಿಯಾನಿ ಕಳಿಸುತ್ತಿದ್ದದ್ದೇ ಈ ಬಾಬುರೆಡ್ಡಿ. ಈಗ 'ಮಾದೇಶ' ಎಂಬ ಸಿನಿಮಾಕ್ಕೆ ಕೈಯಿಟ್ಟು ಮುಹೂರ್ತಕ್ಕೆ ಬಂದ ಪತ್ರಕರ್ತರ ಮುಂದೆ ಒಂಟೆ, ವೇಡಿಯಂಥ ರೌಡಿಗಳನ್ನು ನಿಲ್ಲಿಸಿ 'ಶಸ್ತ್ರತ್ಯಾಗ'ದ ಭಜನೆ ಮಾಡುತ್ತಿದ್ದಾರೆಂದರೆ, ಅದರ ಹುನ್ನಾರವಾದರೂ ಏನಿದ್ದೀತು?


ಮಾದೇಶ ಎಂಬ ಚಿತ್ರಕ್ಕೂ ಬೆಕ್ಕಿನಕಣ್ ರಾಜೇಂದ್ರನ ಹಂತಕರಿಗೂ ಏನು ಸಂಬಂಧ?

ಶಿವಣ್ಣನಂಥ ನಟನೊಬ್ಬನಿಗೆ ಇದೆಲ್ಲಾ ಬೇಕಿತ್ತಾ? ರೌಡಿಗಳ ಕಪಿಮುಷ್ಠಿಯಲ್ಲಿ ಕಲೆ ಅರಳುತ್ತಾ? ■

'ಮಾದೇಶ' ಚಿತ್ರದ ಮುಹೂರ್ತದಲ್ಲಿ ನೆರೆದಿರುವ ರೌಡಿ ಒಂಟೆ ಮತ್ತು ಗ್ಯಾಂಗ್



ಅತ್ಯಾಚಾರಿ ರಾಜಶೇಖರ ನಾಯಕ



ಸಂಸದರ ದೊಡ್ಡ ಮಗ ಭಗವಂತರಾಯ ನಾಯಕ ಆದ್ವಾಡಿ ಕೆಲಸ ಮಾಡುವಾಗ ಅವರ ಎರಡನೆ ಮಗ ರಾಜಶೇಖರ ನಾಯಕ ಸುಮ್ಮನೆ ಕೂಡಲಿಕ್ಕೆ ಸಾಧ್ಯವೆ? ಹೇಳಿಕೇಳಿ ಎಂ.ಪಿ.ಯ ಮಕ್ಕಳು. ಸಾಕಷ್ಟು ದುಡ್ಡು, ಅಧಿಕಾರಗಳು ಕೂಡ ಮಾಡುವ ಅಂತಸ್ತು ಇದ್ದಾಗ ಇವರ ತಲೆ ಮೈಮೇಲೆ ಕೂಡಲು ಸಾಧ್ಯವಿರುವುದಾದರೂ ಹೇಗೆ?


ಈ ದ್ವಿತೀಯ ಸುಪುತ್ರನ ಕಾಮಲೀಲೆಗಳು ಶುರುವಾಗಿದ್ದು ಮಾನ್ವಿಯ ಸರಕಾರಿ ಡಿಗ್ರಿ ಕಾಲೇಜಿನಲ್ಲಿ ಓದುತ್ತಿರುವಾಗಲೇ. ರಾಜಶೇಖರನ ಪುಂಡಾಟಿಕೆಗೆ ಓಡಿಹೋದ ಬಾಲೆಯರೆಷ್ಟೋ? ನಾಡಗದಿನ್ನಿ, ಗಣೇಕಲ್ಲುಗಳಲ್ಲಿ ಇವನ ಕಾಮಾತುರ ಪ್ರಸಂಗಗಳು ಹಲವಾರು. ಸಂಸದರ ಸ್ವಗ್ರಾಮವಾದ ಅರಕೇರಾದ ಬಹುತೇಕ ಶಿಕ್ಷಕಿಯರು ಈ ಮಹಾಶಯನ ಬಲಾತ್ಕಾರಕ್ಕೆ ಒಳಗಾಗಿ, ಒಳಗೊಳಗೆ ಸತ್ತು ಹೋಗಿದ್ದಾರೆ. ಅಂಗನವಾಡಿಯ ಕಾರ್ಯಕರ್ತರು, ಡಿ.ಸಿ.ಸಿ. ಬ್ಯಾಂಕಿನ ಕೆಲ ಮಹಿಳಾ ಸದಸ್ಯರು, ಜೊತೆಗೆ ಗ್ರಾಮ ಪಂಚಾಯತಿಯ ಅಧ್ಯಕ್ಷರು ರಾಜಶೇಖರನ ಕಾಮಕ್ಕೆ ಬಲಿಯಾಗಿದ್ದಾರೆ, ಬಲಿಯಾಗುತ್ತಲೇ ಇದ್ದಾರೆ.

ಲಿಂಗಸೂಗೂರಿನ ಸರಕಾರಿ ಆಸ್ಪತ್ರೆಯಲ್ಲಿ ನರ್ಸ್ ಆಗಿ ಕೆಲಸ ಮಾಡುತ್ತಿದ್ದ ಮಂಗಳಾ ನಾಯಕಳನ್ನು ಮದುವೆಯಾಗುವುದಾಗಿ ನಂಬಿಸಿ, ಆಕೆ ತುಂಬು ಗರ್ಭಿಣಿಯಾದಾಗ ಅವಳನ್ನು ಹಾಡುಹಗಲೇ ಸಂಚಿನಿಂದ ಕೊಲೆಮಾಡಿಸಿದ್ದಂತೂ ಜಗಜ್ಜಾಹೀರಾದ ಸಂಗತಿ. ಈ ಕಾರಣಕ್ಕಾಗಿ ರಾಜಶೇಖರ ನಾಯಕ ಜೈಲಿಗೂ ಹೋಗಿಬಂದಿದ್ದಾನೆ.

ಅರಕೇರಿಯ ತುಂಗಭದ್ರ ಗ್ರಾಮೀಣ ಬ್ಯಾಂಕ್ ಮ್ಯಾನೇಜರ್ ಮನೆಗೆ ನುಗ್ಗಿ ಆತನ ಹೆಂಡತಿಯ ಮೇಲೆ ಅತ್ಯಾಚಾರ ಮಾಡಿದ್ದೂ ಅಲ್ಲದೆ ಅವಳೊಂದಿಗೆ ನಿರಂತರ ಸಂಪರ್ಕ ಹೊಂದಿದ್ದರಿಂದ ಆ ಮ್ಯಾನೇಜರ್ ಇದೀಗ ಮನೋರೋಗಿಯಾಗಿ ಬಳ್ಳಾರಿ ಸೇರುವ ಪರಿಸ್ಥಿತಿ ಬಂದಿದೆ. ಇಲ್ಲಿಯ ಸರಕಾರಿ ಶಾಲೆಯಲ್ಲಿ ಕೆಲಸ ಮಾಡುತ್ತಿದ್ದ ಒಂದಿಬ್ಬರು ಶಿಕ್ಷಕಿಯರಂತೂ ಅತ್ಯಾಚಾರಕ್ಕೆ ಒಳಗಾಗಿ ಇಲ್ಲಿಂದ ಹೋದರೆ ಸಾಕು ಎಂದು ದೂರದ ಊರಿಗೆ ವರ್ಗವಾಗಿ ಹೋಗಿದ್ದಾರೆ.

ಊರಿನ ನಾಲ್ಕಾರು ಜನ ಮರ್ಯಾದಸ್ಥ ಮನೆತನದ ಹುಡುಗಿಯರ ಮೇಲೆ ರಾಜಶೇಖರ ತನ್ನ ಪುಂಡಾಟಿಕೆ ನಡೆಸಿದ್ದರಿಂದ ಅವರು ನೊಂದುಕೊಂಡು ಉರಲು ಹಾಕಿಕೊಂಡಿದ್ದಾರೆ. ಕೆಲವರು ಬಾವಿಯ ಪಾಲಾಗಿದ್ದಾರೆ. ಖಾನಾವಳಿಯ ಹುಡುಗಿಯೊಬ್ಬಳಂತೂ ತನ್ನ ಕುತ್ತಿಗೆಯನ್ನು ಈಳಿಗೆಯಿಂದ ಕೋಯ್ದುಕೊಳ್ಳುವ ಹತಾಶ ಆತ್ಮಹತ್ಯೆ ಯತ್ನ ಮಾಡಿದ್ದಾಳೆ.

ಬೀದಾದಿ ದನಗಳಂತೆ ಸಿಕ್ಕ ಸಿಕ್ಕ ಹೆಣ್ಣುಮಕ್ಕಳ ಮೇಲೆ ಎರಗುತ್ತ ನಡೆದಿರುವ ರಾಜಶೇಖರನ ಅನಾಹುತ ನಡವಳಿಕೆಯನ್ನು ಖಂಡಿಸಿ, ಇದು ಸರಿಯಲ್ಲ ಎಂದು ದೇವದುರ್ಗದ ವಿರೂಪಾಕ್ಷಪ್ಪ ಗುರಿ ಅವರ ಮಗನಾದ ಬೂದೆಪ್ಪ ಸಾಹು ಒಮ್ಮೆ ಪ್ರತಿಭಟಿಸಿದ್ದಕ್ಕೆ ಚಪ್ಪಲಿಯ ಸೇವೆ ಮಾಡಿಸಿಕೊಳ್ಳಬೇಕಾಯಿತು.



ವೆಂಕಟೇಶ್ ನಾಯ್ಕ

ರಾಯಚೂರು

ಸಂಸದನ ಕೀಚಕ ಪುತ್ರರು

ರಾಯಚೂರಿನ ಕಾಂಗ್ರೆಸ್ ಸಂಸದ ವೆಂಕಟೇಶ್ ನಾಯಕ್ ನಾಲ್ಕು ಬಾರಿ ಪಾರ್ಲಿಮೆಂಟಿಗೆ ಗೆದ್ದು ಹೋಗಿ ಕಡಿದು ಕಟ್ಟೆ ಹಾಕಿದ್ದು ಏನೂ ಇಲ್ಲ. ಈತ ಒಂದೇ ಒಂದು ಒಳ್ಳೇ ಕೆಲಸ ಮಾಡಿದ್ದು ದುರ್ಬೀನು ಹಾಕಿ ಹುಡುಕಿದರೂ ಸಿಗುವುದಿಲ್ಲ. ಆದರೆ ಮಾಡಿರುವ ಒಂದೇ ಕೆಟ್ಟ ಕೆಲಸ ಏನೆಂದರೆ ಸ್ತ್ರೀ ಪೀಡಕ ಮಕ್ಕಳಿಗೆ ಜನ್ಮ ಕೊಟ್ಟಿರುವುದು. ಭಗವಂತರಾಯ ಹಾಗೂ ರಾಜಶೇಖರ ನಾಯ್ಕರೆಂಬ ಕೀಚಕ ಪುತ್ರರ ಹೆಂಗಸರ ಶಿಕಾರಿ ಮಾತ್ರ ಈಗ ಇಡೀ ರಾಜ್ಯಕ್ಕೇ ಗೊತ್ತಾಗಿದೆ. ಇವರ ಕೀಚಕ ಪ್ರವರ ಇಲ್ಲಿದೆ....

■ ವಿಶ್ವಾರಾಧ್ಯ ಸತ್ಯಂಪೇಟೆ

ರಾಯಚೂರಿನ ಕಾಂಗ್ರೆಸ್ ಸಂಸದ ವೆಂಕಟೇಶ್ ನಾಯಕ್ ನಾಲ್ಕು ಬಾರಿ ಪಾರ್ಲಿಮೆಂಟಿಗೆ ಗೆದ್ದು ಹೋಗಿ ಕಡಿದು ಕಟ್ಟೆ ಹಾಕಿದ್ದು ಏನೂ ಇಲ್ಲ. ಈತ ಒಂದೇ ಒಂದು ಒಳ್ಳೇ ಕೆಲಸ ಮಾಡಿದ್ದು ದುರ್ಬೀನು ಹಾಕಿ ಹುಡುಕಿದರೂ ಸಿಗುವುದಿಲ್ಲ. ಆದರೆ ಮಾಡಿರುವ ಒಂದೇ ಕೆಟ್ಟ ಕೆಲಸ ಏನೆಂದರೆ ಸ್ತ್ರೀ ಪೀಡಕ ಮಕ್ಕಳಿಗೆ ಜನ್ಮ ಕೊಟ್ಟಿರುವುದು. ಭಗವಂತರಾಯ ಹಾಗೂ ರಾಜಶೇಖರ ನಾಯ್ಕರೆಂಬ ಕೀಚಕ ಪುತ್ರರ ಹೆಂಗಸರ ಶಿಕಾರಿ ಮಾತ್ರ ಈಗ ಇಡೀ ರಾಜ್ಯಕ್ಕೇ ಗೊತ್ತಾಗಿದೆ.

ಇವರಿಬ್ಬರು ಹಡಬೆಗಳ ಅತ್ಯಾಚಾರ, ಅನಾಚಾರ, ಹೆಂಗಸರ ಶೋಷಣೆಗಳ ಒಂದೊಂದು ಘಟನೆಗೂ ಕೇವಲ ಒಂದೇ ವರ್ಷ ಶಿಕ್ಷೆಯಾದರೂ ಕನಿಷ್ಠ 200 ವರ್ಷ ಜೈಲಾಗಬಹುದು.... ಅಷ್ಟಿದೆ ಇವರ ನೀಚ ಕೆಲಸಗಳ ಪಟ್ಟಿ.

ಈಗ ಭಗವಂತರಾಯನ ವಿರುದ್ಧ ಅತ್ಯಾಚಾರದ ದೂರು ಕೊಟ್ಟಿರುವ ಕನ್ಯಾಕುಮಾರಿ ಹೇಳುತ್ತಿರುವುದರಲ್ಲಿ ಒಂದಕ್ಷರವೂ ಸುಳ್ಳಿಲ್ಲ. ಆದರೆ ಈ ಹೆಣ್ಣುಮಗಳು ಅಷ್ಟೇನು ಮುಗ್ಧೆಯಲ್ಲ...!

ಈ ಕೇಸಿನ ಹಿನ್ನೆಲೆ ಅಷ್ಟು ವಿಚಿತ್ರವೂ, ಸಂಕೀರ್ಣವೂ ಆಗಿದೆ.

ಲಂಕೇಶ್ ಕಚೇರಿಗೆ ಬಂದಿದ್ದಳು

ಕಳೆದ ಏಪ್ರಿಲ್ ತಿಂಗಳ ಮೊದಲ ವಾರದ ಒಂದು ಸಂಜೆ 7 ಗಂಟೆ ಸುಮಾರಿಗೆ ಮಹಿಳೆಯೊಬ್ಬಳು ಕೈಗೂಸಿನೊಂದಿಗೆ 'ಲಂಕೇಶ್' ಕಚೇರಿಗೆ ಬಂದಳು. ತನಗೆ ಕೊಲೆ ಬೆದರಿಕೆ ಇದೆಯೆಂದೂ, ರಕ್ಷಣೆಯ ಭರವಸೆ ನೀಡಿದರೆ ರಾಯಚೂರು ಸಂಸದನ ಮಕ್ಕಳ ಅನಾಚಾರಗಳ ಬಗ್ಗೆ ಹೇಳುವುದಾಗಿಯೂ ತಿಳಿಸಿದ್ದಳು. ಕೊನೆಗೆ ಆಕೆಯನ್ನು ಖಾಸಗಿಯಾಗಿ ಕೂರಿಸಿಕೊಂಡು ಮಾತಾಡಿಸಿದಾಗ ಆಕೆ ಏನು ಹೇಳಿದ್ದಳೋ ಅದೇ ಇವತ್ತಿನ ರೇಪ್ ಕೇಸಾಗಿ ಬದಲಾಗಿದೆ. ಉಪ್ಪಾರಪೇಟೆ ಸ್ಟೇಷನ್‌ನಲ್ಲಿ ಭಗವಂತರಾಯನ ವಿರುದ್ಧದ ದೂರಾಗಿ ಹೊರಬಿದ್ದಿದೆ.

ಅವತ್ತು ತನಗಾದ ವಂಚನೆಗಳ ಬಗ್ಗೆ ತನ್ನ ಬದುಕಿನಲ್ಲಿ ತೆಗೆದುಕೊಂಡ ಆತುರದ ನಿರ್ಧಾರಗಳ ಬಗ್ಗೆ ವ್ಯಥೆ ಪಟ್ಟುಕೊಂಡು ಮಾತನಾಡಿದ್ದ ಕನ್ಯಾಕುಮಾರಿ ಕೊನೆಗೆ ಹೇಳಿದ್ದಿಷ್ಟು:

"ಇದನ್ನೆಲ್ಲಾ ಪತ್ರಿಕೇಲಿ ಬರೀರಿ ಅಂತ ಕೇಳೋಕೆ ನಾನು ಬಂದಿಲ್ಲ, ನಾನೀಗ ಗಂಡನನ್ನು ದೂರ ಮಾಡಿಕೊಂಡಿದ್ದೀನಿ. ಭಗವಂತರಾಯ ನನ್ನ ಕೈ ಬಿಟ್ಟಿದ್ದಾನೆ. ಈ ಮಗು ಬೇರೆ ಇದೆ, ನನಗೆ ಏನಾದರು ಜೀವನಾಂಶ ಕೊಡಿಸಿ ಸಹಾಯ ಮಾಡಿ."

-ಹೀಗೆ ಅಲವತ್ತುಕೊಂಡ ಕನ್ಯಾಕುಮಾರಿ ಸ್ಥಿತಿ ಬಗ್ಗೆ ಮರುಕ ಪಟ್ಟುಕೊಂಡ ನಾವು 'ಪರಿಹಾರ ಕೊಡಿಸಿ ಸೆಟಲ್ ಮಾಡಿಸೊ ಮಧ್ಯವರ್ತಿ ಕೆಲಸ ನಾವು ಮಾಡೋಕಾಗಲ್ಲ, ಬೇಕಿದ್ದರೆ ಕಾಂಗ್ರೆಸ್ ನಾಯಕರಾದ ಬಿ.ಕೆ. ಹರಿಪ್ರಸಾದ್ ಹಾಗೂ ಧರಂಸಿಂಗ್‌ರಿಗೆ ನಿಮ್ಮ ಬಗ್ಗೆ ಹೇಳಬಹುದು' ಎಂದಿದ್ದೆವು. ಅದೇರೀತಿ ಅವರಿಗೆ ವಿಷಯ ತಿಳಿಸಿದೆವು. ಹೋಗಿ ಮಾತನಾಡುವಂತೆಯೂ ಈಕೆಗೆ ಹೇಳಿದ್ದೆವು. ಆಮೇಲೇನಾಯಿತೆಂಬ ಬಗ್ಗೆ ನಮಗೇನೂ ಗೊತ್ತಾಗಲಿಲ್ಲ, ಅವತ್ತಿನ ಕನ್ಯಾಕುಮಾರಿ ಹತ್ತಿರ ಇದ್ದ ಮೊಬೈಲ್ ನಂಬರ್ 9844323073 ಈಗ ಬೇರಿನ್ಯಾರ ಕೈಲೋ ಇದೆ. ಅದು ಬಿಡಿ, ಆದರೆ ಇವತ್ತು ಗೊತ್ತಾಗುತ್ತಿರುವುದೇನೆಂದರೆ ಇದೇ ಭಗವಂತನ ಹತ್ತಿರ ಆಕೆ ಮತ್ತೆ ಹೋಗಿ ಹೋಟೆಲ್‌ನಲ್ಲಿ ಮೊಕ್ಕಾಂ ಮಾಡಿದ್ದಾಳೆ. ಈಗ ಗರ್ಭಿಣಿಯಾಗಿದ್ದೇನೆಂದು, ಅವತ್ತು ಹೋಟೆಲ್‌ನಲ್ಲಿ ಅತ್ಯಾಚಾರ ಆಯಿತೆಂತಲೂ ದೂರು ಕೊಟ್ಟಿದ್ದಾಳೆ.

ಇದರಲ್ಲಿ ಒಂದು ಸತ್ಯಾಂಶ ಇರಲೂಬಹುದು. ಯಾರೇ ಮಹಿಳೆ ತನಗೆ ಸಮ್ಮತಿಯಿರದಿದ್ದ ಸಮಾಗಮವನ್ನು ಅತ್ಯಾಚಾರವೆಂತಲೇ ದೂರು ನೀಡಬಹುದು ಸ್ವತಃ ತನ್ನ ಗಂಡನ ವಿರುದ್ಧ ಸಹ!

ಇದು ಕಾನೂನು.

ಆದರೆ ಕನ್ಯಾಕುಮಾರಿ ಮತ್ತೆ ಭಗವಂತರಾಯ ಹತ್ತಿರಕ್ಕೇ ಹೋಗಿದ್ದು ಮಾತ್ರ ಆಕೆಯ ಅಸಹಾ[...] ಕತೆಗೂ, ಈ ನೀಚನ ಮನೋಭಾವಕ್ಕೂ ಸಾ[...] ಯಾಗಿದೆ.

ಈ ಭಗವಂತನ ಹೆಂಗಸರ ಶಿಕಾರಿಯ ತೆವ[...] ಇತಿಮಿತಿ ಎಂಬುದಿಲ್ಲ, ಕನ್ಯಾಕುಮಾರಿಗೆ ಇ[...] ಕರಾಳಮುಖ ಏನೆಂದು ಗೊತ್ತಾಗುವಷ್ಟರಲ್ಲಿ ಪರಿ[...] ಆಕೆಯ ಕೈಮೀರಿ ಹೋಗಿತ್ತು ಅಷ್ಟೆ.

ಭಗವಂತನ ರಾಕ್ಷಸಾವತಾರ

ಇವನ ರಾಸಲೀಲೆಗಳನ್ನು ಬರೆಯಲು ಯಾ[...] ವರ್ಷಗಳಿಂದ ಆರಂಭಿಸಬೇಕು ಎಂಬ ಬಗ್ಗೆ[...] ಕೊಂಚ ದಿಗಿಲಾಗುತ್ತದೆ. ಏಕೆಂದರೆ ಭಗವಂತರಾ[...] ನಾಯಕ ಹಾಗೂ ರಾಜಶೇಖರ ನಾಯಕರ ಕ[...] ಹರುಕ ಪುರಾಣವನ್ನು ಹೇಳುತ್ತ ಹೋದರೆ ಇದ[...] ಸಂಚಿಕೆಯೇ ಸಾಕಾಗುವುದಿಲ್ಲ, ಆದ್ದರಿಂದ ಇಲ್ಲಿ ಹಲ[...] ಸಂಗತಿಗಳ ಬಗ್ಗೆ ಮಾತ್ರ ವರದಿ ಮಾಡಿದ್ದೇವೆ.


ಜಿಲ್ಲಾ ಯುವ ಕಾಂಗ್ರೆಸ್‌ನ ಅಧ್ಯ[...] ನಾದ ಭಗವಂತರಾಯ ನಾಯ[...] ಒಂಥರ ವಿಕೃತ ಕಾಮಿ. ಈ ಮಹಾ[...] ಶಯನಿಗೆ ಬೆಳಗಾಂವನ ಸತೀ[...] ಜಾರಕಿಹೊಳಿ ಅವರ ಸಹೋದ[...] ಲಕ್ಷ್ಮಿಯೊಂದಿಗೆ ವಿವಾಹವಾಗಿ ಇಬ್ಬ[...] ಮಕ್ಕಳೂ ಇದ್ದಾರೆ. ಆದರೂ ಈತ[...] ಕಾಮದ ತೆವಲು ಮಾತ್ರ ತಹಬದಿ[...] ಬಂದಂತಿಲ್ಲ, ಭಗವಂತರಾಯ ಒಂದ[...] ರೀತಿಯಲ್ಲಿ ನಿಶಾಚರ ಪ್ರಾಣಿ. ಜ[...] ವೆಲ್ಲ ಮಲಗಿರಲು ಇವನೊಬ್ಬನೆ ಎದ[...] ತನ್ನ ಕಾರುಬಾರು ಶುರುವಿಟ[...] ಕೊಳ್ಳುತ್ತಾನೆ. ಆಂಧ್ರ ಬಾರ್ಡರ್[...] ಹೊಂದಿಕೊಂಡಿರುವ ಗದ್ವಾ[...] ರಸ್ತೆಯಲ್ಲಿರುವ 30 ಎಕರೆ ತೋಟ[...] ಗೆಸ್ಟ್‌ಹೌಸ್ ಮುಂದೆ ನಿಂತರೆ ಸಾಕ[...] ಅದು ಈತನ ಪಲ್ಲಂಗ ಪುರಾಣಗಳ[...] ಹೇಳತೊಡಗುತ್ತದೆ. ಇಲ್ಲಿ ಮಲ[...] ಎದ್ದು ಹೋಗದೆ ಇರುವ ಚೆಲುವೆಯರ್‍ಯಾರು ಇಲ್ಲವೆಂದ[...] ನೀವು ಉತ್ಪ್ರೇಕ್ಷಿತ ಮಾತೆಂದು ಖಂಡಿತ ಭಾವಿ[...] ಬೇಕಾಗಿಲ್ಲ. ಈ ಮಹಾಶಯ ಹಗಲು ಹೊತ್[...] ತಿರುಗಾಡುವುದೇ ಹುಡುಗಿಯರನ್ನು ಪಟಾಯಿಸುವುದ[...] ಈತನ ಕಾಮದ ಕಣ್ಣಿಗೆ ಬಿದ್ದ ಚೆಲುವೆ ಅ[...] ಮದುವೆಯಾಗಿದ್ದರೂ ಸೈ, ಮದುವೆಯಾಗದಿದ್ದರ[...] ಸೈ. ಅವರನ್ನು ಹೇಗಾದರೂ ಮಾಡಿ ತನ್ನ ತೋಳತ[...] ಯಲ್ಲಿ ಇಟ್ಟುಕೊಳ್ಳದೆ ಹೋದರೆ ಈ ಕಿರಾತಕನ[...] ಸಮಾಧಾನವೇ ಇರುವುದಿಲ್ಲ.

ಮಾಜಿ ಮಂತ್ರಿ ಭೋಸರಾಜರ ಖಾಸಾ ಶಿಷ್ಯರೆಂದ[...] ಕರೆಯಲ್ಪಡುವ ರಮೇಶ್ ಬೋಸರಾಜರ ಹೆಂಡ[...] ರಾಯಚೂರಿನಲ್ಲಿ ನಡೆಸುವ ಬ್ಯೂಟಿ ಪಾರ್ಲರ್ ಮೂಲಕವೇ ಅಮಾಯಕ ಹುಡುಗಿಯರಿಗೆ ಬಲೆಬೀ[...] ಭಗವಂತರಾಯನ ಖೆಡ್ಡಾಕ್ಕೆ ಕೆಡವಿ ಹಾಕುವುದ[...] ಸುಮಾರು ವರ್ಷಗಳಿಂದ ನಡೆಯುತ್ತಾ ಬಂದಿದೆ. ಹೆಸರಿ[...] ಮಾತ್ರ ಬ್ಯೂಟಿ ಪಾರ್ಲರ್ ಎಂಬ ಬೋರ್ಡು ತಗು[...] ಹಾಕಿದ್ದರೂ ಇಲ್ಲಿ ನಡೆಯುವ ಡಿಂಗ್ ಡಾಂಗ್ ದಂ[...] ಎಲ್ಲರಿಗೂ ಗೊತ್ತಿರುವಂಥದೇ ಆಗಿದೆ. ಈ ಬ್ಯೂಟಿ ಪಾರ್ಲರ್‌ನಲ್ಲಿ ನಡೆಯುವ ಡೀಲಿಂಗ್‌ಗಳಲ್ಲಿ ಹಲವಾರ[...] ಹುಡುಗಿಯರ- ಮಹಿಳೆಯರ ಮಾನ ಹರಾಜಾ[...] ಹೋಗಿದೆ.

ಭಗವಂತರಾಯನ ಮನೆಯಲ್ಲಿ ಖೋಟಾನೋಟುಗಳು

ಭಗವಂತರಾಯ ನಾಯಕ ಇಂಥ ಕಾಮತೀಟೆಯ ತೆವಲಿಗೆ ಬಿದ್ದು ಹೆಂಡತಿಯನ್ನು ಯಾಮಾರಿಸಲು ಸ್ವತಃ ತನ್ನ ಮನೆಯನ್ನು ತಾನೇ ಕಳವು ಮಾಡಿಸಲು ಹೋಗಿ ಫಜೀತಿಗೆ ಸಿಕ್ಕಿಹಾಕಿಕೊಂಡ ಘಟನೆಯೊಂದು ಹಲವು ತಿಂಗಳ ಹಿಂದೆ ನಡೆಯಿತು. ಅಂದು ತನ್ನ ಮನೆಯಲ್ಲಿ ನಡೆದ ಧಕಾಯತಿಯಲ್ಲಿ ಒಂದು ಕೋಟಿ ನಗದು ಹಾಗೂ 100 ತೊಲ ಬಂಗಾರ ಕಳುವಾಗಿ ಹೋಗಿದೆ ಎಂದು ಸದರ ಬಜಾರ ಪೋಲೀಸರಿಗೆ ಅರ್ಜಿ ಗುಜರಾಯಿಸಿದ ಭಗವಂತರಾಯ.

ಪೋಲೀಸರು ಕೂಡಲೇ ಕಾರ್ಯಪ್ರವೃತ್ತರಾಗಿ ಭಗವಂತರಾಯ ನಾಯಕನ ಮನೆ ಕೊಳ್ಳೆ ಹೊಡೆದ ಆಂಧ್ರದ ಕೆಲವು ಧಕಾಯಿತರನ್ನು ಬಂಧಿಸಿದರು. ಆ ಧಕಾಯಿತರನ್ನು ವಿಚಾರಿಸಲಾಗಿ ಅವರು ಕನ್ನ ಮಾಡಿದ್ದ ಒಂದು ಕೋಟಿ ನಗದು ಹಣದ ಬಹುತೇಕ ನೋಟುಗಳು ನಕಲಿ ಎಂದು ಗೊತ್ತಾಯಿತು. ಆಗ ಭಗವಂತರಾಯ ತನ್ನ ಬಾಲ ಮುದುರಿಕೊಂಡ. ಕೊನೆಗೂ ಆ ಪೋಲಿಸ್ ಠಾಣೆಯ ಪಿ.ಎಸ್.ಐ.ಮಂಜುನಾಥ ಹಾಗೂ ಸರ್ಕಲ್ ಇನ್ಸ್‌ಪೆಕ್ಟರ್ ರಮೇಶ್ ಮೇಟಿಯವರ ಕೈ-ಬಾಯಿಗಿಷ್ಟು ತುರುಕಿ ತಾವು ಕೊಟ್ಟ ಕಂಪ್ಲೇಟ್ ಮೇಲೆ ತಾನೇ ಎಳ್ಳುನೀರು ಬಿಟ್ಟುಕೊಂಡ.




ಕೀಚಕ ಭಗವಂತ

ಹೈದರಾಬಾದ್ ಕರ್ನಾಟಕದ ಸುಪುತ್ರರು

ಭಗವಂತ, ಸೂರ್ಯಕಾಂತ, ಗುತ್ತೇದಾರ etc ಹಾಗೇ ಲೆಕ್ಕಾ ಹಾಕುತ್ತಾ ಹೋದರೆ ಹೈದರಾಬಾದ್ ಕರ್ನಾಟಕದ ರಾಜಕೀಯ ನಾಯಕರುಗಳ ಮಕ್ಕಳ ಪುಂಡಾಟಿಕೆಗಳ ದೊಡ್ಡ ಪಟ್ಟಿಯನ್ನೇ ತಯಾರಿಸಬಹುದು.

ರಾಯಚೂರು ಸಂಸದ ವೆಂಕಟೇಶ್ ನಾಯಕನ ಕೀಚಕ ಮಕ್ಕಳ ಕತೆ ಈಗ ಬಯಲಿಗೆ ಬಂದಿದೆ. ಕಳೆದ ವರ್ಷ ಬೀದರಿನ ಶಾಸಕ ಗುರುಪಾದಪ್ಪ ನಾಗಮಾರಪಲ್ಲಿ ಪುಂಡ ಮಗ ಸೂರ್ಯಕಾಂತ ಬೆಂಗಳೂರಿನ ಪಬ್ ಒಂದರಲ್ಲಿ ಗುಂಡು ಹಾರಿಸಿ ಗಲಾಟೆ ಮಾಡಿಕೊಂಡಿದ್ದ. ಹುಡುಗೀರ ಶೋಕಿ, ರೌಡಿ ಗ್ಯಾಂಗ್ ಜೊತೆ ತಿರುಗುವುದು ಅವನಿಗಿದ್ದ ಚಾಳಿಯಾಗಿತ್ತು. ಗುರುಪಾದಪ್ಪನ ಇನ್ನೊಬ್ಬ ಮಗ ಉಮಾಕಾಂತನ ಪುಂಡಾಟಿಕೆಗೆ ನಕ್ಸಲರು ಬಂದು ಬಡಿದು ಪಾಠ ಕಲಿಸಬೇಕಾಯಿತು. ಅವರ ಮತ್ತೊಬ್ಬ ಮಗ ರಮಾಕಾಂತ ಬೀದರ್ ಟೌನಿನಲ್ಲೇ ಕೆಲ ತಿಂಗಳ ಹಿಂದೆ ಕೊಲೆಯಾದ.



ರಮಾಕಾಂತ ನಾಗಮಾರಪಲ್ಲಿ

ಇನ್ನು ಖರ್ಗೆ ಅಳಿಯ ರಾಧಾಕೃಷ್ಣನ ದಂಧೆಗಳು, ಲೀಲಾ ವಿನೋದಗಳೆಲ್ಲಾ ಜಗಜ್ಜಾಹೀರಾಗಿವೆ. ಆಳಂದ ಶಾಸಕ ಮಾಲೀಕಯ್ಯ ಗುತ್ತೇದಾರ್ ಸ್ವತಃ ಸುಪಾರಿ ಕಿಲ್ಲಿಂಗ್, ಅಕ್ರಮ ಸಾರಾಯಿ ದಂಧೆಕೋರನಾಗಿದ್ದಾನೆ. ಇವನ ಸಂಬಂಧಿ ಪದ್ಮಾವತಿ ಗಂಡನನ್ನೇ ಕೊಲ್ಲಿಸಿ ಈಗ ಜೈಲಿನಲ್ಲಿದ್ದಾಳೆ.


ಉತ್ತರ ಕರ್ನಾಟಕ ಹಿಂದುಳಿದಿದೆ, ಅಭಿವೃದ್ಧಿಯಾಗಿಲ್ಲ ಎಂದೆಲ್ಲಾ ತುತ್ತೂರಿ ಊದುತ್ತಾ ತಿರುಗುವ ಈ ನಾಯಕಮಣಿಗಳು ಅಧಿಕಾರ ಸಿಕ್ಕ ತಕ್ಷಣ ಕೋಟಿಗಟ್ಟಲೆ ಲೂಟಿ ಹೊಡೆಯುತ್ತಾ ತಮ್ಮ ಮಕ್ಕಳನ್ನು ಪುಂಡಾಟಿಕೆ ಬಿಡುತ್ತಾರೆ. ಪಾಳೆಗಾರಿಕೆ, ದರ್ಪ, ಅನಾಚಾರಗಳನ್ನು ಚಾಲೂ ಮಾಡುವ ಈ ಪುಂಡಪುತ್ರರು ಸಮಾಜ ಕಂಟಕರಾಗಿ ಬದಲಾಗುತ್ತಿದ್ದಾರೆ. ಜನ ಎಚ್ಚೆತ್ತುಕೊಳ್ಳದೆ ಹೋದರೆ ಅಲ್ಲಿ ಯಾರಿಗೂ ಉಳಿಗಾಲವಿರುವಂತಿಲ್ಲ.

ರಾಯಚೂರಿನಲ್ಲಿರುವ ಮಂತ್ರಾಲಯ ರಸ್ತೆಯ ಈತನ ಮನೆಯ ಅಕ್ಕ - ಪಕ್ಕ ಮರ್ಯಾದಸ್ಥರು ಬಾಳುವೆ ಮಾಡುವುದು ನಿಜಕ್ಕೂ ಕಷ್ಟವಾಗಿದೆ. ರಾಯಚೂರು ಜಿಲ್ಲಾ ಪಂಚಾಯ್ತಿಯಲ್ಲಿ ಕೆಲಸ ಮಾಡುವ ಒಬ್ಬಾಕೆ ಭಗವಂತರಾಯನ ಹೆಂಡತಿ ತೌರಿಗೆ ಹೋಗುವುದೇ ತಡ ಆಕೆ ನೇರ ಈತನ ಗೃಹ ಪ್ರವೇಶವನ್ನೇ ಮಾಡುತ್ತಾಳೆ. ಇದನ್ನು ನೋಡಿ ನೋಡಿ, ಸಾಕಾಗಿ ಸಮೀಪದ ಸಂಬಂಧಿ ಹಾಗೂ ಮಾಜಿ ಮಂತ್ರಿ ಅಮರೇಶನಾಯಕ ತನ್ನ ಮನೆಯನ್ನೇ ಬೇರೆ ಕಡೆ ಶಿಫ್ಟ್ ಮಾಡಿದ್ದಾಗಿದೆ.

ಜಿಲ್ಲಾಪಂಚಾಯತಿ, ತಾಲೂಕು ಪಂಚಾಯತಿ, ಮಂಡಲ ಪಂಚಾಯತಿ ಹೋಗಲಿ ಸರಕಾರಿ, ಅರೆ ಸರಕಾರಿ ದವಾಖಾನೆಯಲ್ಲಿ ಕೆಲಸ ಮಾಡುವ ಹಲವಾರು ಮಹಿಳೆಯರು ಈತನ ತೆಕ್ಕೆಯಲ್ಲಿ ಬಿದ್ದಿರುವ ಸಂಗತಿ ನಿಜಕ್ಕೂ ನಾಗರಿಕ ಸಮಾಜಕ್ಕೊಂದು ಕಳಂಕ. ಈತನ ಇಂಥ ಕಚಡಾ ಕೆಲಸಗಳಿಗೆಲ್ಲ ಅಮರೇಗೌಡ ಹಂಚಿನಾಳ, ಲಾಲಪ್ಪ, ಜಿಲ್ಲಾ ಕಾಂಗ್ರೆಸ್ ಯೂತ್ ಸೆಕ್ರೆಟರಿ, ವಸಂತಕುಮಾರ, ಕೆ.ಶಾಂತಪ್ಪ, ಎ.ಪಿ.ಎಂ.ಸಿ ಮಾಜಿ ಅಧ್ಯಕ್ಷ, ರಾಯಚೂರು ನಗರಸಭೆಯ ಸದಸ್ಯ ಜಯಣ್ಣ ಜಿ.ಶಿವಮೂರ್ತಿ ಹಾಗೂ ದೇವದುರ್ಗದ ಸಿ.ಎಸ್. ಪಾಟೀಲ, ಮಾನಪ್ಪ ವಜ್ಜಲ ಮುಂತಾದವರ ಸಹಕಾರ ಇರುವುದು ಎಲ್ಲರಿಗೂ ಗೊತ್ತಿರುವ ಬಹಿರಂಗ ಸತ್ಯ.


ಹಣುಮಂತಗೌಡ

ಭಗವಂತನಾಯಕನ ಇಂತಹ ಪಲ್ಲಂಗ ಪುರಾಣಗಳು ಬೆಂಗಳೂರಿನ ಜಯನಗರ ಬಡಾವಣೆಯಲ್ಲಿರುವ ಮನೆಯವರೆಗೂ ವಿಸ್ತರಿಸಿವೆ. ಅಲ್ಲಿ ಭಗವಂತ ವಿ.ಐ.ಪಿ.ಗ್ಯಾಂಗ್‌ಗಾಗಿಯೇ, ಅವರ ಎಲ್ಲಾ ತೆವಲುಗಳನ್ನು ಪೂರೈಸಲು ಸದಾ ಸನ್ನದ್ಧವಾಗಿರುವ ಪಡೆಯೊಂದು ಇದೆ. ಮಕ್ಕಳ ಈ ಹೊಲಸು ಪುಂಡಾಟಿಕೆಯನ್ನು ಗಮನಿಸಿಯೂ ಸುಮ್ಮನಿರುವ ವೆಂಕಟೇಶ್ ನಾಯಕ ಎಂಬ ಸಂಸದನ ಲೀಲೆಗಳೂ ಹಲವಾರು. ಹೀಗಾಗಿ ತಂದೆ ತನ್ನ ಮಕ್ಕಳಿಗೆ ಏನಂತ ಬುದ್ಧಿ ಹೇಳಬಹುದು? ಹಾಗಾಗಿ ಜನಗಳೇ ಈ ಪೋಲಿಪುಂಡರಿಗೆ ಸರಿಯಾದ ಶಿಕ್ಷೆ ವಿಧಿಸಬೇಕು.


ಭೋಸರಾಜ

ಕನ್ಯಾಕುಮಾರಿಯ ಕಥಾನಕವೂ ಭಗವಂತರಾಯನ ಮಗುವೂ

ಈಗ ರಾಜ್ಯ ಮಹಿಳಾ ಆಯೋಗಕ್ಕೆ ಭಗವಂತ ರಾಯ ನಾಯಕನ ಪ್ರಹಸನವನ್ನು ವಿವರಿಸಿ, ನ್ಯಾಯ ಕೇಳಲು ಹೋಗಿ ನಿಂತಿರುವ ಕನ್ಯಾಕುಮಾರಿ ರಾಯಚೂರಿನ ಶರಣಪ್ಪ ಕಾಮರೆಡ್ಡಿ ಎಂಬ ಮಾಜಿ ಜಿ.ಪಂ. ಸದಸ್ಯರ ಮಗಳು. ಈಕೆಯ ತಾಯಿಯ ಚಾರಿತ್ರ್ಯದ ಸಂಗತಿಗಳೇನೇ ಇರಲಿ ಭಗವಂತರಾಯ ನಾಯಕ ಕನ್ಯಾಕುಮಾರಿಯನ್ನು ನಂಬಿಸಿ ಮೋಸ ಮಾಡಿದ್ದಂತೂ ಸತ್ಯ.

ಪಂಜಾಬಿನ ಫರೀದ್‌ಕೋಟ್ ವಿಶ್ವವಿದ್ಯಾಲಯದ ಉದ್ಯೋಗಿ ಮಲ್ಲಿಕಾರ್ಜುನ ಎಂಬುವವರ ಪತ್ನಿಯಾಗಿದ್ದ ಈ ಕನ್ಯಾಕುಮಾರಿ ಒಮ್ಮೆ ರಾಯಚೂರಿಗೆ ಬಂದಿದ್ದಾಗ ಭಗವಂತರಾಯನ ಕಣ್ಣಿಗೆ ಕಾಣಿಸಿದ್ದಳು. "ನಿನ್ನ ಗಂಡನಿಗೆ ಬೇರೆ ಕೆಲಸ ಕೊಡಿಸುತ್ತೇನೆ. ಆತನು ತನ್ನ ಕೆಲಸವನ್ನು ತೊರೆದು ಬರುವಂತೆ ಸೂಚಿಸು" ಎಂದು ಹೇಳಿದ್ದನಂತೆ ಈ ಭಗವಂತ. ನಾಯಕನ ಈ ಹಸಿ ಸುಳ್ಳನ್ನು ಸತ್ಯವೆಂದು ನಂಬಿದ ಕನ್ಯಾಕುಮಾರಿ ಗಂಡನನ್ನು ಬೆಂಗಳೂರಿಗೆ ಕರೆಸಿಕೊಂಡಳು. ಇವರಿಬ್ಬರು ಬೆಂಗಳೂರಿನ ರಾಜಾಜಿ ನಗರದಲ್ಲಿ ಮನೆಯನ್ನೂ ಮಾಡಿಕೊಂಡಿದ್ದರು. ಅವರಿಗೆ ಒಂದು ಮಗುವೂ ಇತ್ತು.

ಮಲ್ಲಿಕಾರ್ಜುನನಿಗೆ ಕೆಲಸ ಕೊಡಿಸುವ ನೆವದಲ್ಲಿ ಇಬ್ಬರ ಒಡನಾಟ ಜಾಸ್ತಿ ಆಯ್ತು. ಇದನ್ನು ಸರಿಯಾಗಿ ಬಳಸಿಕೊಂಡ ಭಗವಂತರಾಯ ಕನ್ಯಾಕುಮಾರಿ ತನ್ನ ಪಲ್ಲಂಗಕ್ಕೆ ಬರುವಂತೆ ಕಥೆಯೊಂದನ್ನು ಹೆಣೆದ. ತನಗೆ ಮದುವೆಯಾದರೂ ತನ್ನ ಸಾಂಸಾರಿಕ ಜೀವನ ಸರಿಯಾಗಿಲ್ಲ, ನೀನು ತನ್ನ ಜೊತೆ ಆಗುವುದಾದರೆ ನಿನ್ನೊಂದಿಗೆ ಮದುವೆಯಾಗಲು ಸಿದ್ಧ ಎಂದು ಪುರಾಣ ಹೊಡೆದ. ಈ ಮಾತನ್ನು ಸತ್ಯವೆಂದು ನಂಬಿದ ಕನ್ಯಾಕುಮಾರಿ ತನ್ನ ಗಂಡನಿಗೆ ಡೈವೋರ್ಸ್ ನೀಡಿ ಕಾವೇರಿ ಗೆಸ್ಟ್‌ಹೌಸ್ ನಲ್ಲಿಯೇ ಹರಿಕಥೆ ಆರಂಭಿಸಿದರು.

ಮೊದಲ ಗಂಡ ಮತ್ತು ಮೊದಲ ಮಗುವನ್ನು ಭಗವಂತರಾಯನಿಗೆಂದು ತೊರೆದಿದ್ದ ಕನ್ಯಾಕುಮಾರಿಗೆ ಈತನೊಂದಿಗೆ ಒಂದು ಗಂಡು ಮಗುವೂ ಆಯಿತು. ಆದರೆ ಆಗ ಅಳಿಯನ ಕುರುಡು ಬೆಳಗಾಗುತ್ತಲೇ ಬಯಲಾಯಿತು ಎಂಬಂತೆ ಭಗವಂತ ರಾಯ ನೆವ ಶುರುಮಾಡಿದ, ಇಲ್ಲದ ವರಾತ ತೆಗೆದ. ಮದುವೆ ಎಂಬುದು ಕನಸಿನ ಮಾತು ಎಂಬಂತಾದಾಗ ಕನ್ಯಾಕುಮಾರಿಗೆ ಎದೆ ಒಡೆದು ಹೋಯಿತು. ಈ ಬಗ್ಗೆ ಮೂರ್ನಾಲ್ಕು ಸಲ ಮಹಿಳಾ ಆಯೋಗಕ್ಕೆ ದೂರನ್ನು ಕೂಡಾ ನೀಡಿದ್ದಳು. ಇದು ತನ್ನನ್ನು ಮುಂದೆ ಹೈರಾಣಕ್ಕೆ ಕೆಡವುತ್ತದೆ ಎಂದು ಅರಿತ ಭಗವಂತ ರಾಯ ಅಸಹಾಯಕ ಹೆಣ್ಣುಮಗಳನ್ನು ಮತ್ತೆ ಮತ್ತೆ ನಂಬಿಸಿದ. ಅವಳಿಗದು ಅನಿವಾರ್ಯವೂ ಆಗಿತ್ತು. ಜುಲೈ 7 ರಂದು ಬೆಂಗಳೂರಿನ ಇಂಟರ್‌ನ್ಯಾಷನಲ್ ಹೋಟೆಲ್‌ನಲ್ಲಿ ಮತ್ತೆ ಇಬ್ಬರೂ ಒಂದಾದರು. ಅದರ ಫಲ ಮತ್ತೆ ಕನ್ಯಾಕುಮಾರಿಯ ಹೊಟ್ಟೆಯಲ್ಲಿ ಬೆಳೆಯ ತೊಡಗಿದೆ.

ಕತ್ತೆ ಬೆಳಗಾಗುತ್ತಲೇ ಕುದುರೆಯಾಗಲು ಸಾಧ್ಯವೆ? ಅಂದಂತೆ ಭಗವಂತರಾಯ ಹಿಂದೆ ಬಹಳಷ್ಟು ಜನರಿಗೆ ಕೊಟ್ಟಂತೆ ಕನ್ಯಾಕುಮಾರಿಗೂ ದೊಡ್ಡ ಚೊಂಬನ್ನೆ ಕೊಟ್ಟ. ಇದರಿಂದ ಕೆರಳಿದ ಕನ್ಯಾಕುಮಾರಿ ಇದೀಗ ಪೊಲೀಸ್ ಮಹಾನಿರ್ದೇಶಕರಿಗೆ, ಮಹಿಳಾ ಆಯೋಗಕ್ಕೆ ದೂರು ನೀಡಿದ್ದಾಳೆ. ಈಗಾಗಲೇ ಪಶ್ಚಿಮ ವಿಭಾಗದ ಡಿಸಿಪಿ ಕೆ.ವಿ.ಶರತ್ ಚಂದ್ರ ಭಗವಂತರಾಯನ ಡಿ.ಎನ್.ಎ.ಪರೀಕ್ಷೆ ಮಾಡಿಸುವುದಾಗಿ ಹೇಳಿದ್ದಾರೆ.


ಆದರೆ ಈಕೆಗೆ ಈಗಾಗಲೇ ಇರುವ ಮಗುವಿನ ಮುಖ ನೋಡಿದರೆ ಸಾಕು ಯಾವ ಪರೀಕ್ಷೆಗಳಿಲ್ಲದೆ, ತಕ್ಷಣವೇ ಇದು ಭಗವಂತರಾಯ ನಾಯಕ ಕೂಸೇ ಎಂದು ಸಾರಿ ಹೇಳಬಹುದು. ■

ರೇಲ್ವೆ ಕಾರ್ಮಿಕ ಸಂಘದ ಚುನಾವಣೆ: ನೈರುತ್ಯ ವಲಯದ ಚುನಾವಣಾ ಸಮೀಕ್ಷೆ

152 ವರ್ಷಗಳ ರೇಲ್ವೆ ಇಲಾಖೆಯ ಇತಿಹಾಸದಲ್ಲಿ ಇದೇ ಮೊದಲ ಬಾರಿಗೆ ಏಕಮಾತ್ರ ಕಾರ್ಮಿಕ ಸಂಘಟನೆಗೆ ಮಾನ್ಯತೆ ನೀಡುವ ಉದ್ದೇಶದಿಂದ ಚುನಾವಣೆ ನಡೆಯುತ್ತಿದೆ. ಇಡೀ ದೇಶದಾದ್ಯಂತ 16 ರೇಲ್ವೆ ವಲಯ ಮಟ್ಟದಲ್ಲಿ ನವೆಂಬರ್ 26 ರಿಂದ 28ರ ತನಕ ನಡೆಯುವ ಈ ಚುನಾವಣೆಯಲ್ಲಿ ಶೇ. 35ರಷ್ಟು ಕಾರ್ಮಿಕರ ಬೆಂಬಲ ಪಡೆಯುವ ಸಂಘಟನೆಗೆ ರೇಲ್ವೆ ಇಲಾಖೆಯ ಅಧಿಕೃತ ಕಾರ್ಮಿಕ ಸಂಘಟನೆ ಎಂಬ ಮುದ್ರೆ ಬೀಳಲಿದೆ. ಈ ಕಾರಣಕ್ಕೇನೇ ಕುತೂಹಲ ಕೆರಳಿಸಿದೆ.


ಆನಂದ್ ರಾವ್

ಎನ್‌ಡಿಎ ಸರ್ಕಾರ ಅಧಿಕಾರದಲ್ಲಿದ್ದಾಗ ಬಜೆಪಿಯು ತನ್ನ ಕಾರ್ಮಿಕ ಸಂಘಟನೆಯಾದ ಭಾರತೀಯ ಮಜ್ದೂರ್ ಸಂಘಕ್ಕೆ (ಬಿಎಮ್‌ಎಸ್) ರೇಲ್ವೆ ಕಾರ್ಮಿಕರನ್ನು ಸಂಘಟಿಸುವಂತೆ ಸೂಚನೆ ನೀಡಿತು. ಪರಿಣಾಮವಾಗಿ ಭಾರತೀಯ ರೇಲ್ವೆ ಮಜ್ದೂರ್ ಸಂಘ ಎಂಬ ಸಂಘಟನೆಯೊಂದು ತಲೆ ಎತ್ತಿತು. ಒಂದು ಸಂಸ್ಥೆಗೆ ಒಂದೇ ಯೂನಿಯನ್ ಎಂಬ ತತ್ವವನ್ನು ಮಜ್ದೂರ್ ಯೂನಿಯನ್ ಮೊದಲಿನಿಂದಲೂ ಪ್ರತಿಪಾದಿಸುತ್ತಾ ಬಂದಿತ್ತು, ಆದರೆ ಕಾಂಗ್ರೆಸ್‌ಗಾಗಲೀ, ಬಜೆಪಿಗ್ಗಾಗಲೀ ಇದು ಬೇಕಾಗಿರಲಿಲ್ಲ, ಕೊನೆಗೆ ಕಾರ್ಮಿಕನೊಬ್ಬ ಈ ಸಂಬಂಧ ಚೆನ್ನೈ ಹೈಕೋರ್ಟ್‌ನಲ್ಲಿ ದಾವೆಯೊಂದನ್ನು ಹೂಡಿದ. ಅದು ಇತ್ಯರ್ಥವಾಗಿ ಒಂದು ಸಂಸ್ಥೆಗೆ ಒಂದೇ ಯೂನಿಯನ್ನು ಎಂಬ ವಾದವನ್ನು ಎತ್ತಿ ಹಿಡಿಯಿತು. ನಂತರದಲ್ಲಿ ಸುಪ್ರಿಮ್ ಕೋರ್ಟ್ ಇದೇ ವಾದವನ್ನು ಎತ್ತಿ ಹಿಡಿಯಿತು. ಅದರ ಪರಿಣಾಮವೇ ಈ ಚುನಾವಣೆ.


ಜಯರಾಮ್

ನೈಋತ್ಯ ರೇಲ್ವೆ ವಲಯದಲ್ಲಿ ಚುನಾವಣಾ ಚಟುವಟಿಕೆ


ನೈಋತ್ಯ ರೇಲ್ವೇ ವಲಯದಲ್ಲಿ ಹುಬ್ಬಳ್ಳಿ, ಬೆಂಗಳೂರು ಹಾಗೂ ಮೈಸೂರು ಎಂಬ ಮೂರು ವಿಭಾಗಗಳು, ಹುಬ್ಬಳ್ಳಿ ಹಾಗೂ ಮೈಸೂರು ಕಾರ್ಯಾಗಾರಗಳು ಸೇರಿದಂತೆ ಹುಬ್ಬಳ್ಳಿಯ ಕೇಂದ್ರ ಕಚೇರಿಯಲ್ಲಿ ಕೆಲಸ ಮಾಡುತ್ತಿರುವ ಕಾರ್ಮಿಕರು ಸೇರಿ ಒಟ್ಟು 31,400 ಜನ ಕಾರ್ಮಿಕರು ಈ ಚುನಾವಣೆಯಲ್ಲಿ ಮತದಾನ ಮಾಡಲಿದ್ದಾರೆ. ಇದರಲ್ಲಿ ಹುಬ್ಬಳ್ಳಿ ವಿಭಾಗದ 10,000 ಕಾರ್ಮಿಕರ ಮತಗಳು, ಕಾರ್ಯಾಗಾರದ 3600, ಸ್ಟೋರ್‌ನ 320, ಕೇಂದ್ರ ಕಚೇರಿಯ 681 ಜನ ಕಾರ್ಮಿಕರ ಮತಗಳು ಈ ಚುನಾವಣೆಯಲ್ಲಿ ನಿರ್ಣಾಯಕ ಪಾತ್ರ ವಹಿಸಲಿವೆ. ನಂತರದ ಸ್ಥಾನ 9200 ಮತಗಳನ್ನು ಹೊಂದಿದ ಬೆಂಗಳೂರು ವಿಭಾಗಕ್ಕೆ ಮತ್ತು ಕೊನೆಯ ಸ್ಥಾನ 5700 ಮತಗಳನ್ನು ಹೊಂದಿದ ಮೈಸೂರು ವಿಭಾಗಕ್ಕೆ. ಹೀಗಾಗಿ ಎಲ್ಲರ ಚಿತ್ತ ಈಗ ಹುಬ್ಬಳ್ಳಿಯತ್ತ ಎಂಬಂತಾಗಿದೆ.


ಎಸ್‌ಜೆ ನಾಯ್ಡು


ಡಿಎಸ್‌ಜೆ ನಾಯ್ಡು

ಹುಬ್ಬಳ್ಳಿ

ಇಲ್ಲಿ ಮೊದಲಿನಿಂದಲೂ ಕಾರ್ಮಿಕರ ನಡುವೆ ಕೆಲಸ ಮಾಡುತ್ತಾ ತನ್ನ ಛಾಪು ಮೂಡಿಸಿರುವ ಮಜ್ದೂರ್ ಯೂನಿಯನ್‌ಗೆ (ಎಸ್‌ಡಬ್ಲೂಆರ್‌ಎಮ್‌ಯು) ಈ ಚುನಾವಣೆಯಲ್ಲಿ ಮಹತ್ವದ ಪಾತ್ರ ನಿರ್ವಹಿಸುವ ಲಕ್ಷಣಗಳು ಕಾಣುತ್ತಿವೆ. ಹುಬ್ಬಳ್ಳಿ ವಿಭಾಗದಲ್ಲಿ ಯೂನಿಯನ್ ನೇತೃತ್ವ ವಹಿಸಿದವರಲ್ಲಿ ಸದ್ಯದ ವಲಯ ಕಾರ್ಯದರ್ಶಿ ಎ.ಎಂ. ಡಿಕ್ರೂಜ್. ಇದನ್ನು ಎತ್ತರಕ್ಕೆ ಬೆಳೆಸಿದ ಕೀರ್ತಿ ಇವರ ಅಣ್ಣ ದಿವಂಗತ ಎ.ಎಸ್. ಡಿಕ್ರೂಜ್‌ಗೆ ಸಲ್ಲಬೇಕು.


ಎಂ.ಸಿ. ರಾಮಪುರ್

ಕಾಂಗ್ರೆಸ್‌ನ ನೌಕರರ ಸಂಘ ಎಸ್‌ಡಬ್ಲೂಆರ್‌ಇಎಸ್‌ನ ಪ್ರಧಾನ ಕಾರ್ಯದರ್ಶಿ ಕೆ. ಆನಂದರಾವ್ ನಿವೃತ್ತಿ ಹೊಂದಿದರೂ ಕುರ್ಚಿ ಬಿಡದೇ ಕುಳಿತಿದ್ದಾನೆ. ಅಲ್ಲದೇ ಹೊಸದಾಗಿ ತಲೆ ಎತ್ತಿರುವ ಬಿಎಂಎಸ್‌ನ ಎನ್‌ಆರ್‌ಎಂಎಸ್ ಸಂಘದಲ್ಲಿ ತೂರಿಕೊಂಡವರೆಲ್ಲ ಒಂದ ಕಾಲದಲ್ಲಿ ಮಜ್ದೂರ್ ಯೂನಿಯನ್ನಿನಲ್ಲಿದ್ದುಕೊಂಡು ಅಧಿಕಾರದ ಗದ್ದುಗೆಗೇರಿ ಹೊಟ್ಟೆತುಂಬಿಸಿಕೊಂಡವರೇ. ಉದಾಹರಣೆಗೆ, ಪಿ.ಅಬ್ದುಲ್ ಘನಿ ಎಂಬುವವನು ಈ ಮೊದಲು ಯೂನಿಯನ್ನಿನಲ್ಲಿದ್ದು ಅಧಿಕಾರ ಅನುಭವಿಸಿ ಫ್ಲಾಟ್ ಬಿಸಿನೆಸ್ ಮಾಡುತ್ತಿದ್ದು ಇಂಥವನ ಅಧ್ಯಕ್ಷತೆಯಲ್ಲಿ ಆ ಸಂಘ ಚುನಾವಣೆಯನ್ನು ಎದುರಿಸಲು ಹೊರಟಿದೆ. ಇವನಲ್ಲದೇ ಎಚ್.ಎಮ್. ಕೊಪ್ಪದ್, ಜಯರಾಮ್, ಎಸ್.ಸಿ. ರಾಮಪೂರ್, ಡಿಎಸ್‌ಜೆ ನಾಯ್ಡು ಹಾಗೂ ಎಸ್.ಜೆ. ನಾಯ್ಡು ಸಹೋದರರು, ಸಂಘದ ಪ್ರಧಾನ ಕಾರ್ಯದರ್ಶಿ ಕೆ. ಆನಂದ್‌ರ ಖಾಸಾ ತಮ್ಮ ಕೆ. ದಾಸಿಯಂತಹ ಪುಡುಗ ದನಗಳೂ ಸೇರಿಕೊಂಡಿವೆ.

ಜಯರಾಮ್ ಯಾರು?

ಬಡ ಮಾಸ್ತರೊಬ್ಬರ ಮಗನಾದ ಜಯರಾಮ್ ಇಂದು ಒಂದೂವರೆ ಕೋಟಿ ರೂಪಾಯಿಗಳಿಗಿಂತಲೂ ಹೆಚ್ಚಿನ ಆಸ್ತಿಯ ಒಡೆಯನಾಗಿರುವುದಲ್ಲದೆ 2006ರಲ್ಲಿಯೇ ಬೆಂಗಳೂರಿನಲ್ಲಿ 85 ಲಕ್ಷ ಮೌಲ್ಯದ ವಾಣಿಜ್ಯ ಮಳಿಗೆಯೊಂದನ್ನು ಖರೀದಿಸಿದ್ದಾನೆ ಎಂದರೆ ಈತ ಕಾರ್ಮಿಕರನ್ನು ಹಾಗೂ ಇಲಾಖೆಯನ್ನು ಹೇಗೆ ಗೆಬರಿರಬೇಕು ಎಂಬುದು ಅರ್ಥವಾಗುತ್ತದೆ. ಇಷ್ಟೇ ಅಲ್ಲ ಎರಡು ವರ್ಷ ಪ್ರಧಾನ ಕಾರ್ಯದರ್ಶಿಯಾಗಿ, 10 ವರ್ಷ ಬೆಂಗಳೂರು ಡಿವಿಜನ್ ಕಾರ್ಯದರ್ಶಿಯಾಗಿದ್ದ ಈತ ಕಾರ್ಮಿಕರು ಸಸ್ಪೆಂಡಾದರೆ 5000 ರೂಪಾಯಿ, ಪ್ರಮೋಶನ್ ಬೇಕಾದರೆ 25,000 ರೂಪಾಯಿ, ಕೆಲಸ ಕಳೆದುಕೊಂಡರೆ 50,000 ರೂಪಾಯಿ, ಬೆಂಗಳೂರಿನಲ್ಲಿನ ರೇಲ್ವೆ ವಸತಿ ಗೃಹ ಬೇಕಾದರೆ 50,000 ರೂಪಾಯಿ - ಹೀಗೆ ಹಲವು ರೀತಿಯಲ್ಲಿ ರೇಟ್ ಫಿಕ್ಸ್ ಮಾಡಿ ಕಾರ್ಮಿಕರನ್ನು ದೋಚಿದಾತ. ಕಾರ್ಮಿಕರನ್ನು ಸುಲಿಯುವುದನ್ನೇ ಕಾಯಕ ಮಾಡಿಕೊಂಡಿರುವ ಇವನಿಗೆ ಈ ಬಾರಿ ತಕ್ಕ ಪಾಠ ಸಿಗಲಿದೆ.

ನಾಯ್ಡು ಸಹೋದರರು

ಡಿಎಸ್‌ಜೆ ನಾಯ್ಡು ಹಾಗು ಎಸ್‌ಜೆ ನಾಯ್ಡು ಎಂಬ ಸಹೋದರರು ಅಧಿಕಾರಿಗಳು ತಿನ್ನುವ ಎಂಜಲಿನಲ್ಲಿ ಶೆ. 50ರಷ್ಟನ್ನು ಪಾಲು ಪಡೆದು ಕಾರ್ಮಿಕರನ್ನು ಎಷ್ಟು ಉದ್ಧಾರ ಮಾಡಿದರೋ ಗೊತ್ತಿಲ್ಲ, ಆದರೆ ತಮ್ಮ ಉದರ ಅಭಿವೃದ್ಧಿಯನ್ನಂತೂ ಪುಷ್ಕಳವಾಗಿ ಮಾಡಿಕೊಂಡಿದ್ದಾರೆ. ಇತ್ತೀಚಿನ ದಿನಗಳಲ್ಲಿ 21 ಜನ ಗಾರ್ಡ್‌ಗಳಿಗೆ ಪ್ರಮೋಷನ್ ಕೊಡಿಸುವುದಕ್ಕೆ ಪ್ರತಿಯೊಬ್ಬರಿಂದ ಇವರು ತಿಂದದ್ದು ಐವತ್ತು ಸಾವಿರ. ಈ ಘನಂದಾರಿ ಕೆಲಸಕ್ಕಾಗಿ ಗಾರ್ಡ್ ಆರಟ್ಟಿ ಎಂಬ ಒಬ್ಬ ಏಜಂಟನನ್ನೇ ನೇಮಿಸಿಕೊಂಡಿದ್ದಾರೆ. ಈ ಏಜಂಟನ ಮನೆ ಬೆಂಡಿಗೇರಿಯಲ್ಲಿದ್ದು ಅದರ ಕಿಮ್ಮತ್ತೇ ಇಪ್ಪತ್ತೈದು ಲಕ್ಷ ಎಂದರೆ ಇನ್ನು ನಾಯ್ಡು ಸಹೋದರರು ಹೇಗೆ ಮೇಯ್ದಿರಬೇಕು? ಇವರ ಅಳಿಯ ಕುಮಾರ ನಾಯ್ಡು ಎಂಬಾತನಿಗೆ ಹುಬ್ಬಳ್ಳಿ ರೇಲ್ವೆ ಕಾರ್ಯಾಗಾರದಲ್ಲಿ ಕೆಲಸ ಕೊಡಿಸಿ ಅವನನ್ನು ಯೂನಿಯನ್ನಿನಲ್ಲಿ ಲೀಡರ್ ಬೇರೆ ಮಾಡಿದ್ದಾರೆ. ಅವನ ಅವಾಂತರಗಳೂ ಈಗ ಅನಾವರಣಗೊಳ್ಳಲಾರಂಭಿಸಿವೆ.

ಎಸ್.ಸಿ. ರಾಮಪುರ್


ಜಯರಾಮ ಶಿಷ್ಯ ರಾಮಪುರ್ ಹುಬ್ಬಳ್ಳಿಯ ವರ್ಕ್‌ಶಾಪ್‌ನ ಯೂನಿಯನ್‌ನಲ್ಲಿ ಪ್ರಧಾನ ಕಾರ್ಯದರ್ಶಿಯಾಗಿದ್ದವನು. ಇವನ ಖಾಸಾ ತಮ್ಮ ಎಲೆಕ್ಟ್ರಿಕಲ್ ಕಂಟ್ರಾಕ್ಟರ್. ಹೀಗಾಗಿ, ರೇಲ್ವೆಯ ಎಲ್ಲಾ ಎಲೆಕ್ಟ್ರಿಕಲ್ ಕಂಟ್ರಾಕ್ಟಗಳೂ ಇವನ ಪಾಲಿಗೆ ಸೇರುವಂತೆ ನೋಡಿಕೊಂಡ ಮಹಾಶಯ. ಬಳ್ಳಾರಿ ಹತ್ತಿರ ಭಾರಿ ಜಮೀನು ಖರೀದಿಸಿದ್ದಾನೆ, ದಾವಣಗೆರೆಯಲ್ಲಿ ಭವ್ಯ ಮನೆ ಏರಿಸಿದ್ದಾನೆ, ಕೆಲಸ ಕೊಡಿಸುತ್ತೇನೆಂದು ಹೇಳಿ ಅಮಾಯಕರಿಂದ ಎಡರೂವರೆ ಲಕ್ಷ ಗೆಬರಿದ್ದಾನೆ, ರೇಲ್ವೆ ನೇಮಕಾತಿ ಮಂಡಳಿಯ ಪರೀಕ್ಷೆಗೆ ಕುಳಿತುಕೊಳ್ಳುವ ಹುಡುಗರಿಗೆ ಟ್ಯೂಷನ್ ಹೇಳುತ್ತೇನೆಂದು ಅಲ್ಲಿಯೂ ಗೆಬರುತ್ತಾನೆ - ಹೀಗೆ ಇವನ ಘನಂದಾರಿ ಕೆಲಸಗಳ ಪಟ್ಟಿಯೂ ಬೆಳೆಯುತ್ತಾ ಹೋಗುತ್ತದೆ. ಇಂಥಹ ಮಹಾನುಭಾವರೆಲ್ಲ ಈಗ ಬಿಡ್ಡಿ ಸಂಘ ಸೇರಿದ್ದಾರೆ.

ಈ ಎಲ್ಲ ಖದೀಮರನ್ನು ನೋಡಿದರೆ ಕಮ್ಯುನಿಸ್ಟರೇ ಒಂದಿಷ್ಟು ವಾಸಿ ಎಂದು ಕಾಣುತ್ತದೆ. 700 ಜನ ಅಪ್ರೆಂಟಿಸ್‌ಗಳಿಗೆ ಕೆಲಸ ಕೊಡಿಸಿದ್ದು, ಬಯಪ್ಪನ ಹಳ್ಳಿಯಲ್ಲಿ 300 ಜನ ದಿನಗೂಲಿ ನೌಕರರನ್ನು ಕಾಯಂಗೊಳಿಸಿದ್ದು ಯೂನಿಯನ್‌ನ ಎ.ಎಮ್. ಡಿಕ್ರೂಜ್ ಪಾಲಿಗೆ ವರವಾಗಲಿದೆ. ಒಟ್ಟಿನಲ್ಲಿ ಜಿದ್ದಾಜಿದ್ದಿನ ಚುನಾವಣೆಯಲ್ಲಿ ಅಂತಿಮವಾಗಿ ಯಾರ ಕೈ ಮೇಲಾಗುತ್ತೋ ಕಾದುನೋಡಬೇಕಷ್ಟೆ.

ವರದಿಗಾರ

ಕರ್ನಾಟಕವನ್ನು ಗುಜರಾತ್ ಮಾಡುವುದೆಂದರೆ ಇದೇನಾ?

ಇಡೀ ದೇಶವನ್ನು ತಲ್ಲಣಗೊಳಿಸಿದ ಗುಜರಾತ್ ನರಮೇಧವನ್ನು ಹೇಗೆ ನಡೆಸಿದರೆಂಬುದನ್ನು, ಅದನ್ನು ನಡೆಸಿದ ಕ್ರಿಮಿನಲ್‌ಗಳೇ ಬಣ್ಣಬಣ್ಣವಾಗಿ ವರ್ಣಿಸಿರುವುದನ್ನು ತೆಹೆಲ್ಕಾ ಪತ್ರಿಕೆ ತನ್ನ ಗುಪ್ತ ಕ್ಯಾಮರಾಗಳಲ್ಲಿ ಸೆರೆಹಿಡಿದು ಬಯಲುಗೊಳಿಸಿದೆ. ಇದಾದ ಎರಡೇ ದಿನಗಳಲ್ಲಿ ನಮ್ಮ ರಾಜ್ಯದಲ್ಲಿ ಜೆಡಿಎಸ್ ಮತ್ತು ಕೋಮುವಾದಿ ಬಿಜೆಪಿ ನಡುವೆ ಮತ್ತೊಮ್ಮೆ ಅನೈತಿಕ ಮೈತ್ರಿ ಏರ್ಪಟ್ಟು ಕರ್ನಾಟಕವನ್ನು ಗುಜರಾತ್ ಮಾಡುತ್ತೇವೆ ಎಂದು ಬಹಿರಂಗವಾಗಿ ಆರ್ಭಟಿಸುತ್ತಿರುವ ಚೆಡ್ಡಿಗಳಿಗೆ ರಾಜ್ಯದ ಚುಕ್ಕಾಣಿ ಸಿಗುವ ಎಲ್ಲ ಸೂಚನೆಗಳು ಕಾಣುತ್ತಿವೆ. ಈ ಹೊತ್ತಿನಲ್ಲಿ ಈ ಪ್ರಶ್ನೆ ಮತ್ತಷ್ಟು ಅರ್ಥವನ್ನು ಪಡೆದುಕೊಂಡಿದೆ.



ಇಂಥದೊಂದು ಪ್ರಶ್ನೆ ಕರ್ನಾಟಕದ ಸಮಸ್ತ ಜನತೆಯ ಪಾಲಿಗೆ ಈಗ ಬಹು ಅರ್ಥಗರ್ಭಿತವಾಗಿದೆ. ಏಕೆಂದರೆ, ಮೊನ್ನೆ ತೆಹೆಲ್ಕಾ ಎಂಬ ಇಂಗ್ಲಿಷ್ ಪತ್ರಿಕೆಯು ಆರು ತಿಂಗಳುಗಳ ದೀರ್ಘ ಕಾರ್ಯಾಚರಣೆ ನಡೆಸಿ 2002ರಲ್ಲಿ ಇಡೀ ದೇಶವನ್ನು ತಲ್ಲಣಗೊಳಿಸಿದ ಗುಜರಾತ್ ರಕ್ತಪಿಪಾಸು ನರಮೇಧವನ್ನು ಹೇಗೆ ನಡೆಸಿದರೆಂಬುದನ್ನು, ಅದನ್ನು ನಡೆಸಿದ ಕ್ರಿಮಿನಲ್‌ಗಳೇ ಬಣ್ಣಬಣ್ಣವಾಗಿ ವರ್ಣಿಸಿರುವುದನ್ನು ಗುಪ್ತ ಕ್ಯಾಮರಾಗಳಲ್ಲಿ ಸೆರೆಹಿಡಿದು ಬಯಲುಗೊಳಿಸಿದೆ. ಇದಾದ ಎರಡೇ ದಿನಗಳಲ್ಲಿ ನಮ್ಮ ರಾಜ್ಯದಲ್ಲಿ ಜೆಡಿಎಸ್ ಮತ್ತು ಕೋಮುವಾದಿ ಬಿಜೆಪಿ ನಡುವೆ ಮತ್ತೊಮ್ಮೆ ಅನೈತಿಕ ಮೈತ್ರಿ ಏರ್ಪಟ್ಟು ಕರ್ನಾಟಕವನ್ನು ಗುಜರಾತ್ ಮಾಡುತ್ತೇವೆ ಎಂದು ಬಹಿರಂಗವಾಗಿ ಆರ್ಭಟಿಸುತ್ತಿರುವ ಚೆಡ್ಡಿಗಳಿಗೆ ರಾಜ್ಯದ ಚುಕ್ಕಾಣಿ ಸಿಗುವ ಎಲ್ಲ ಸೂಚನೆಗಳು ಕಾಣುತ್ತಿವೆ. ಈ ಹೊತ್ತಿನಲ್ಲಿ ಈ ಪ್ರಶ್ನೆ ಮತ್ತಷ್ಟು ಅರ್ಥವನ್ನು ಪಡೆದುಕೊಂಡಿದೆ.

2002ರ ಫೆಬ್ರವರಿಯಲ್ಲಿ ಸಂಘಪರಿವಾರದ ಕರಸೇವಕರು ಅಯೋಧ್ಯೆಯಿಂದ ಗುಜರಾತ್‌ಗೆ ಹಿಂತಿರುಗುತ್ತಿದ್ದಾಗ ಅವರು ಪ್ರಯಾಣಿಸುತ್ತಿದ್ದ ಸಬರಮತಿ ಎಕ್ಸ್‌ಪ್ರೆಸ್ ರೈಲಿನ ಕೆಲವು ಬೋಗಿಗಳಿಗೆ ಗೋಧ್ರಾ ಬಳಿ ಬೆಂಕಿಬಿದ್ದು ಅರವತ್ತು ಜನರು ಜೀವಂತವಾಗಿ ಸುಟ್ಟು ಹೋದರು. ವಾಸ್ತವದಲ್ಲಿ ಈ ರೈಲಿಗೆ ಬೆಂಕಿಯಿಟ್ಟವರ್ಯಾರು ಎಂಬ ಪ್ರಶ್ನೆಗೆ ಇಂದಿಗೂ ಉತ್ತರ ಸಿಕ್ಕಿಲ್ಲ. ಆದರೆ, ಈ ದುಷ್ಕೃತ್ಯವನ್ನು ಮುಸ್ಲಿಮರೇ ನಡೆಸಿದರೆಂದು ಆಪಾದಿಸಿ ಮರುದಿನವೇ ಸಂಘಪರಿವಾರ ಇಡೀ ಗುಜರಾತ್‌ಗೆ ಬೆಂಕಿ ಹಚ್ಚಿತು. ಆದಿವಾಸಿ, ದಲಿತ, ಹಿಂದುಳಿದ ಜಾತಿಗಳ ಯುವಕರ ಮನಸ್ಸಿನಲ್ಲಿ ಮುಸ್ಲಿಮರ ವಿರುದ್ಧ ಕಹಿ ತುಂಬಿ ಇಡೀ ರಾಜ್ಯದಾದ್ಯಂತ ಮುಸ್ಲಿಮರ ಬೇಟೆಗೆ ಇಳಿಸಿಬಿಟ್ಟಿತು. ಹೀಗೆ ಮುಸ್ಲಿಮರ ನರಬೇಟೆಗೆ ಹೊರಟ ರಾಕ್ಷಸ ತಂಡಗಳಿಗೆ ಖುದ್ದಾಗಿ ವಿಶ್ವಹಿಂದೂ ಪರಿಷತ್ತು, ಭಜರಂಗದಳ, ಆರ್‌ಎಸ್‌ಎಸ್‌ನಂತಹ ಚೆಡ್ಡಿ ಸಂಘಟನೆಗಳ ನಾಯಕರೇ ನೇತೃತ್ವ ವಹಿಸಿದ್ದರು. ಎಲ್ಲಕ್ಕಿಂತ ಮಿಗಿಲಾಗಿ, ಅಧಿಕಾರದಲ್ಲಿದ್ದ ನರೇಂದ್ರ ಮೋದಿ ನೇತೃತ್ವದ ಬಿಜೆಪಿ ಸರ್ಕಾರ ಈ ಗಲಭೆಕೋರರಿಗೆ ತನ್ನ ಸಂಪೂರ್ಣ ಬೆಂಬಲ ನೀಡಿತು. ಅಷ್ಟು ಹೇಳಿದರೆ ಸಾಕಾಗುವುದಿಲ್ಲ, ಪೊಲೀಸರು ಖುದ್ದಾಗಿ ಗಲಭೆಕೋರರೊಂದಿಗೆ ಸೇರಿಕೊಂಡು ಮುಸ್ಲಿಮರ ಹತ್ಯಾಕಾಂಡಗಳನ್ನು ನಡೆಸುವುದಕ್ಕೆ ಕೈಜೋಡಿಸಿದರು.

ಆನಂತರ ನಡೆದದ್ದು ಗುಜರಾತ್ ಮಾತ್ರವಲ್ಲ, ಇಡೀ ಇಂಡಿಯಾವನ್ನು ತಲ್ಲಣಗೊಳಿಸಿತು. ಅಹಮದಾಬಾದ್, ಗೋಧ್ರಾ, ವಡೋದರ - ಹೀಗೆ ಆ ರಾಜ್ಯದ ಎಲ್ಲ ನಗರಗಳು, ಹಳ್ಳಿಗಳು ಕೋಮುವಾದಿಗಳ ಕೈಯಲ್ಲಿ ಭಸ್ಮವಾದವು. ಮೂರು ಸಾವಿರಕ್ಕಿಂತ ಹೆಚ್ಚಿನ ಸಂಖ್ಯೆ ಮುಸ್ಲಿಮರನ್ನು — ಮಕ್ಕಳು ಮರಿ ಎನ್ನದೆ, ಮಹಿಳೆ ವೃದ್ಧರೆನ್ನದೆ — ಕಂಡಕಂಡಲ್ಲಿ ತುಂಡರಿಸಿ, ಸುಟ್ಟು ಹಾಕಲಾಯಿತು. ಸಾವಿರಾರು ಸಂಖ್ಯೆಯಲ್ಲಿ ಮುಸ್ಲಿಮ್ ಮಹಿಳೆಯರ ಗ್ಯಾಂಗ್ ರೇಪ್ ನಡೆಸಲಾಯಿತು. ಗರ್ಭಿಣಿಯರ ಹೊಟ್ಟೆ ಬಗೆಯಲಾಯಿತು. ಮಹಿಳೆಯರ ಖಾಸಗಿ ಅಂಗಗಳಲ್ಲಿ ಕಬ್ಬಿಣದ ರಾಡುಗಳನ್ನು ತೂರಿಸಿ ಕೊಲ್ಲಲಾಯಿತು. ಮುಸ್ಲಿಮರ ಮನೆ ಅಂಗಡಿಗಳನ್ನು ಸುಟ್ಟುಹಾಕಲಾಯಿತು. ಸಾವಿರಾರು ಕೋಟಿ ಮೌಲ್ಯದ ಅವರ ಆಸ್ತಿಪಾಸ್ತಿಗಳನ್ನು ನಾಶಪಡಿಸಲಾಯಿತು. ಎಲ್ಲಾ ಮುಗಿದ ಮೇಲೆ ಕೊನೆಗೆ ಮುಸ್ಲಿಮರಿಗೆ ಸಾಮಾಜಿಕ ಬಹಿಷ್ಕಾರ ಹಾಕಿ ಅವರನ್ನು ಸಾವಿರಾರು ಸಂಖ್ಯೆಯಲ್ಲಿ ರಾಜ್ಯದಿಂದ ಹೊರಗಟ್ಟಲಾಯಿತು. 'ಗುಜರಾತ್ ಸಮಾಚಾರ್' ಮತ್ತು 'ಸಂದೇಶ್' ಎಂಬ ಎರಡು ದಿನಪತ್ರಿಕೆಗಳು ಯಾವ ಯಾವ ಪ್ರದೇಶದಲ್ಲಿ ಮುಸ್ಲಿಮರು ವಾಸಿಸುತ್ತಿದ್ದಾರೆ, ಎಲ್ಲೆಲ್ಲಿ ಅವರ ಅಂಗಡಿ, ಹೋಟೆಲ್‌ಗಳಿವೆ ಎಂಬ ಮಾಹಿತಿಯನ್ನು ಪ್ರಕಟಿಸಿ ಗಲಭೆಕೋರರಿಗೆ ಅನುಕೂಲ ಮಾಡಿಕೊಟ್ಟವಲ್ಲದೆ, ಮುಸ್ಲಿಮರ ವಿರುದ್ಧ ಗಲಭೆಕೋರರನ್ನು ಬಹು ಕ್ರಿಯಾಶೀಲವಾಗಿ ಪ್ರಚೋದಿಸಿದವು.

ಮುಖ್ಯಮಂತ್ರಿ ನರೇಂದ್ರ ಮೋದಿ ಈ ಎಲ್ಲಾ ಘಟನಾವಳಿಗಳನ್ನು ಬಹಿರಂಗವಾಗಿ ಸಮರ್ಥಿಸಿಕೊಂಡ. ಕಗ್ಗೊಲೆ ನಡೆಸಿದ ಎಲ್ಲಾ ಕೊಲೆಗಾರರಿಗೆ ರಕ್ಷಣೆ ನೀಡುವ ಭರವಸೆ ಕೊಟ್ಟ, ನಂತರ ದೇಶದ ಮೂಲೆಮೂಲೆಯಿಂ ಆತನ ವಿರುದ್ಧ ಎದ್ದಿದ್ದ ಬಂಡಾಯಗಳಿಗೆ ಮಣಿದು ಕಗ್ಗೊಲೆಸುವುದಕ್ಕಾ ಕೊಲೆಗಡುಕರ ಮೇಲೆ ಒಂದಿಷ್ಟು ಕೇಸುಗಳನ್ನು ಬುಕ್ ಮಾಡಿಸಿದ. ಅದರಲ್ಲಿಯೂ ಎಷ್ಟೊಂದು ಜಾಣಾಕ್ಷತೆಯನ್ನು ಪ್ರದರ್ಶಿಸಿದ್ದ ಎಂದರೆ, ಈ ಹತ್ಯಾಕಾಂಡಗಳನ್ ನಡೆಸುವ ತಂಡಗಳಿಗೆ ನೇತೃತ್ವ ವಹಿಸಿದ್ದ ಸಂಘಪರಿವಾರದ ನಾಯಕರು ಕೇಸುಗಳಲ್ಲಿ ಸಿಕ್ಕಿಹಾಕದಂತೆ ಎಚ್ಚರಿಕೆ ವಹಿಸಿದ. ಹಾಕಿದ್ದ ಕೇಸುಗಳೂ ಸಾಕ್ಷ್ಯಾಧಾರಗಳಿಲ್ಲದಂತೆ ಬಿದ್ದುಹೋಗುವ ಮಾದರಿಯಲ್ಲಿ ಎಫ್‌ಐಆರ್‌ಗಳನ್ ತಯಾರು ಮಾಡಲು ಆದೇಶಿಸಿದ. ಕೊನೆಗೆ, ಗುಜರಾತ್ ಹತ್ಯಾಕಾಂಡವನ್ ಚುನಾವಣಾ ಪ್ರಚಾರದ ಬಹುಮುಖ್ಯ ಅಜೆಂಡಾವನ್ನಾಗಿ ಮಾಡಿಕೊಂಡು ಹಿಂದೂಗಳ ಓಟುಗಳನ್ನು ಸದೃಢೀಕರಿಸಿಕೊಂಡ. ಪರಿಣಾಮವಾಗಿ ನಂತರ ನಡೆದ ಚುನಾವಣೆಯಲ್ಲಿ ಭಾರಿ ಅಂತರದೊಂದಿಗೆ ಗೆದ್ದುಬಂದ. ಒಂದೇ ಮಾತಿನಲ್ಲಿ ಹೇಳಬೇಕೆಂದರೆ, ಜನತೆಯಿಂದ ಚುನಾಯಿತಗೊಂಡ ಸರ್ಕಾರವೊಂದು ಖುದ್ದಾಗಿ ಸಂಘಪರಿವಾರದಂತಹ ರಕ್ತಪಿಪಾಸು ರಣಹದ್ದುಗಳ ಜೊತೆ ಕೈಮಿಲಾಯಿಸಿದರೆ ಉಂಟಾಗಬಹುದಾದ ಬರ್ಬರ ಸಾಮಾಜಿಕ ಸಂಕ್ಷೋಭೆಗೆ ಗುಜರಾತ್ ಒಂದು ಜೀವಂತ ನಿದರ್ಶನವಾಗಿ ನಿಂತಿತು.

ಐದು ವರ್ಷಗಳ ಹಿಂದೆ ಗುಜರಾತ್‌ನಲ್ಲಿ ನಡೆದ ಈ ಭಯಾನಕ ಹತ್ಯಾಕಾಂಡಗಳನ್ನು ಮರೆಸುವುದಕ್ಕೆ ಬಿಜೆಪಿ ಮತ್ತು ಸಂಘಪರಿವಾರಗಳು ಶಕ್ತಿಮೀರಿ ಪ್ರಯತ್ನ ನಡೆಸಿದವು. ಆದರೆ ಅದರ ರೌದ್ರತೆ ಮಾತ್ರ ಇನ್ನೂ ಜನಮನಸ್ಸಿನಿಂದ ಸಂಪೂರ್ಣ ವಾಗಿ ಅಳಿಸಿಲ್ಲ. ಮಾತ್ರವಲ್ಲ ಆ ಕರಾಳ ದಿನಗಳನ್ನು ನಾಡಿನ ಪ್ರಜ್ಞಾವಂತ ಮನಸ್ಸುಗಳು ಮ ಮತ್ತೆ ಜ್ಞಾಪಿಸಿಕೊಳ್ಳುತ್ತಿವೆ ಜ್ಞಾಪಿಸಿಕೊಳ್ಳುವ ಅಗತ್ಯವೂ ಇದೆ.

ಈಗ ತೆಹೆಲ್ಕಾ ಸತತ ಆರು ತಿಂಗಳುಗಳ ಕಾಲ ಕಾರ್ಯಾಚರಣೆ ನಡೆಸಿ, ಕಗ್ಗೊಲೆಗಳಲ್ಲಿ ನೇರವಾಗಿ ಭಾಗಿಯಾದ, ಕೊಲೆಗಡುಕ ತಂಡಗಳಿಗೆ ನೇತೃತ್ವ ವಹಿಸಿದ್ದ ಸಂಘಪರಿವಾರದ ಮುಖಂಡರುಗಳು ತಾವು ನಡೆಸಿದ ಹತ್ಯಾಕಾಂಡಗಳ ವರ್ಣನೆ ಮಾಡುತ್ತಿರುವುದನ್ ಗುಪ್ತ ಕ್ಯಾಮರಾ ಬಳಸಿ ಸೆರೆಹಿಡಿದು ಈ ದೇಶದ ಜನತೆಯ ಮುಂದಿಡು ಮೂಲಕ ಗುಜರಾತ್ ನರಮೇಧವನ್ನು ಮತ್ತೊಮ್ಮೆ ಜ್ಞಾಪಿಸಿದೆ. (ವಿವರಗಳಿ ಬಾಕ್ಸ್ ನೋಡಿ). ಸಂಘಪರಿವಾರವೇ ಖುದ್ದಾಗಿ ಈ ನರಮೇಧವನ್ನು ನಡೆಸಿತು ಎಂಬ ಬಗ್ಗೆಯಾಗಲೀ, ಅಂದಿನ ನರೇಂದ್ರ ಮೋದಿ ನೇತೃತ್ವದ ಬಿಜೆಪಿ ಸರ್ಕಾರ ಕೊಲೆಗಡುಕರಿಗೆ ಸಂಪೂರ್ಣ ಬೆಂಬಲ ನೀಡಿದ್ದು ಮಾತ್ರವಲ್ಲ ಪೊಲೀಸರೂ ಮುಸ್ಲಿಮರನ್ನು ಕೊಲ್ಲುವ ಕಾಯಕದಲ್ಲಿ ನಿರತರಾಗಿದ್ದರು ಎಂಬ ಬಗ್ಗೆಯಾಗಲೀ ಪ್ರಾಯಶಃ ಯಾರಿಗೂ ಅನುಮಾನವಿರಲಿಲ್ಲ, ಆದರೆ, ತೆಹೆಲ್ಕಾದ ಈ ಗುಪ್ತ ಕಾರ್ಯಾಚರಣೆ ಈಗ ಅದನ್ನು ಮತ್ತೊಮ್ಮೆ ಸಾಬೀತುಮಾಡಿದೆಯಷ್ಟೆ.

ಮಹಾರಾಣಾ ಪ್ರತಾಪನೋ, ರಕ್ತಪಿಪಾಸು ರಾಕ್ಷಸನೋ?

ತೆಹೆಲ್ಕಾ ಸೆರೆಹಿಡಿದಿರುವ ಸಂಘಪರಿವಾರದ ನಾಯಕರ ವಿಡಿಯೋ ಟೇಪ್‌ಗಳನ್ನು ನೋಡುತ್ತಿದ್ದರೆ ಇವರು ಮನುಷ್ಯರೋ ಅಥವಾ ರಾಕ್ಷಸರೋ ಎಂಬ ಅನುಮಾನ ಕಾಡದಿರದು. ಗುಜರಾತ್ ನರಮೇಧದಲ್ಲಿ ತತ್ತರಿಸಿದ ಪ್ರದೇಶಗಳಲ್ಲಿ ಅಹಮದಾಬಾದ್‌ನ ನರೋಡ ಪಾಟಿಯ ಎಂಬ ಬಡಾವಣೆಯೂ ಒಂದು. ಕರ್ನಾಟಕದಿಂದ ವಲಸೆ ಹೋಗಿರುವ ಮುಸ್ಲಿಮರೇ ಹೆಚ್ಚಾಗಿ ವಾಸಿಸುತ್ತಿದ ಈ ಪ್ರದೇಶ ಗಲಭೆಕೋರರ ದಾಳಿಗೆ ತುತ್ತಾಗಿ ಅಕ್ಷರಶಃ ಭಸ್ಮವಾಯಿತು.

ಈ ದಾಳಿಯ ನೇತೃತ್ವ ವಹಿಸಿದ್ದ ಬಾಬು ಭಜರಂಗಿ ಎಂಬ ಭಜರಂಗದಳದ ನಾಯಕ ತಾನು ಹೇಗೆ ಗರ್ಭಿಣಿಯ ಹೊಟ್ಟೆಯನ್ನು ಸೀಳಿದೆ, ಹೇಗೆ ಮುಸ್ಲಿಮರ ಮಕ್ಕಳನ್ನು ತುಂಡುತುಂಡಾಗಿ ಕತ್ತರಿಸಿ ಉರಿಯುವ ಬೆಂಕಿಗೆ ಹಾಕಿದೆ, ಮುಸ್ಲಿಮರ ಮನೆಗಳಲ್ಲಿದ್ದ ಎಲ್‌ಪಿಜಿ ಸಿಲಿಂಡರ್‌ಗಳನ್ನು ಬಳಸಿ ಹೇಗೆ ಅವರ ಮನೆಗಳನ್ನು ಸುಟ್ಟುಹಾಕಿದೆ ಎಂಬುದನ್ನೆಲ್ಲಾ ವಿವರಿಸಿದ್ದಾನೆ. ಎಲ್ಲಕ್ಕಿಂತ ಮಿಗಿಲಾಗಿ ಮುಖ್ಯಮಂತ್ರಿ ನರೇಂದ್ರ ಮೋದಿ ತಮ್ಮ ಈ ಘನಂದಾರಿ ಕೆಲಸಗಳಿಗೆ ಹೇಗ ಬೆಂಬಲವಾಗಿ ನಿಂತಿದ್ದರು ಎಂಬುದನ್ನು ಹೇಳಿಕೊಂಡಿದ್ದಾನೆ. ಇಸ್ಲಾಮ್



ನನ್ನೆದುರು ಡಿಸಿಪಿ ಐವರು ಮುಸ್ಲಿಮರಿಗೆ ಗುಂಡಿಕ್ಕಿದರು:

"ಅಹ್ಮದಾಬಾದ್ ಝೋನ್ ನಾಲ್ಕರ ಡೆಪ್ಯುಟಿ ಕಮೀಷನರ್ ಆಫ್ ಪೊಲೀಸ್ ಆಗಿದ್ದ ಎಸ್.ಕೆ. ಘಡ್ವಿಯವರನ್ನು ಅಂದು ನಾನು ಅಹ್ಮದಾಬಾದ್‌ನಲ್ಲಿ ಭೇಟಿಯಾದೆ. ನಾನು ವಿಹಿಂಪದವನೆಂದು ತಿಳಿದ ಕೂಡಲೇ ನನಗೆ ಮುಸಲ್ಮಾನರೇ ಹೆಚ್ಚಾಗಿ ವಾಸಿಸುವ ಪ್ರದೇಶವನ್ನು ತೋರಿಸುವಂತೆ ಕೇಳಿಕೊಂಡರು. ಕನಿಷ್ಠ ನಾಲ್ವರು ಮುಸ್ಲಿಮರನ್ನು ಕೊಂದು ಹಾಕುವ ಖಾತರಿ ನೀಡಿದರೆ ನಾನು ನಿಮ್ಮನ್ನು ಅಲ್ಲಿಗೆ ಕರೆದುಕೊಂಡು ಹೋಗುತ್ತೇನೆ ಎಂದು ನಾನವರಿಗೆ ಹೇಳಿದೆ. ಕೂಡಲೇ ಅವರು ಅದಕ್ಕೆ ಒಪ್ಪಿದರು. ನಾನವರನ್ನು ದರಿಯಾಪುರ ಎಂಬ ಅಲ್ಪಸಂಖ್ಯಾತರ ಮನೆಗಳು ಸರಿಯಾಗಿ ಕಾಣುವ ಸ್ಥಳಕ್ಕೆ ಕರೆದುಕೊಂಡು ಹೋದೆ. ಅಲ್ಲಿ ನೋಡುತ್ತಿದ್ದಂತೆ ಡಿಸಿಪಿ ಘಡ್ವಿ ನನ್ನ ಕಣ್ಣ ಮುಂದೆಯೇ ಐವರು ಮುಸ್ಲಿಮರನ್ನು ಹಿಡಿದು ಅವರ ಮೇಲೆ ಗುಂಡು ಹಾರಿಸಿ ಕೊಂದು ಹಾಕಿದರು."

-ರಮೇಶ್ ದವೆ, ವಿಶ್ವಹಿಂದೂ ಪರಿಷತ್ ಮುಖಂಡ



ಹಾಥ್ ಕಾಟೆ, ಪೈರ್ ಕಾಟೆ, ಫಿರ್ ಜಲಾದಿಯೆ

"ನಾನು ಗುಲ್ಬರ್ಗಾ ಸೊಸೈಟಿಗೆ ಹೋದಾಗ ಅಲ್ಲಿ ಅವರು (ಎಹ್ಸಾನ್ ಜಾಫರಿ) ಬಾಗಿಲು ತೆರೆಯಲು ನಿರಾಕರಿಸಿದರು. ತನಗೆ ಹಾಗೂ ತನ್ನಲ್ಲಿ ಆಶ್ರಯ ಪಡೆದವರಿಗೆ ಏನೂ ಮಾಡಬೇಡಿ ಎಂದು ನಮ್ಮನ್ನು ಪರಿಪರಿಯಾಗಿ ಬೇಡಿದರು. ಎಲ್ಲ ಆಮಿಷಗಳನ್ನು ಒಡ್ಡಿದರು. ತಮ್ಮನ್ನು ಬಿಟ್ಟುಬಿಟ್ಟರೆ ಹಣ ಕೊಡುವುದಾಗಿಯೂ ಅಂಗಲಾಚಿದರು. ಹಾಗಾದರೆ ಹಣ ಕೊಡಿ. ನಿಮ್ಮನ್ನು ಬಿಡುತ್ತೇವೆ ಎಂದದು ನಾವು ಹೇಳಿದೆವು. ಆಗ ಅವರು ಹೊರಗೆ ಬಂದರು. ಅವರ ರಕ್ಷಣೆಗಾಗಿ ಸೋನಿಯಾ ಗಾಂಧಿಯವರಿಗೆ ಕರೆ ಮಾಡಿದರು. ನರೇಂದ್ರ ಮೋದಿಗೆ ಫೋನ್ ಮಾಡಿದರು. ಆದರೂ ಅವರನ್ನು ನಾವು ಬಿಡಲಿಲ್ಲ. ನಾವೆಲ್ಲರೂ ತಲವಾರುಗಳಿಂದ ಅವರ ಕೈಕಾಲುಗಳನ್ನು ಕತ್ತರಿಸಿದೆವು. ಬಳಿಕ ಅವರ ದೇಹವನ್ನು ತುಂಡು ತುಂಡು ಮಾಡಿ ನಾವು ತೆಗೆದುಕೊಂಡು ಹೋಗಿದ್ದ ಕಟ್ಟಿಗೆಗಳನ್ನು ರಾಶಿ ಹಾಕಿ ಅಲ್ಲೇ ಬೆಂಕಿ ಕೊಟ್ಟೆವು. ಅದರೊಂದಿಗೆ ರಾವಣನ ಲಂಕಾದನ್ನು ಮುಗಿಸಿಬಿಟ್ಟೆವು."

(ಗುಲ್ಬರ್ಗಾ ಸೊಸೈಟಿ ಹತ್ಯಾಕಾಂಡದ ಆರೋಪಿಗಳು (ಗುಲ್ಬರ್ಗಾ ಸೊಸೈಟಿಯಲ್ಲಿ ಕಾಂಗ್ರೆಸ್ ನಾಯಕ ಎಹ್ಸಾನ್ ಜಾಫರಿ ಹಾಗೂ ಅವರ ಮನೆಯಲ್ಲಿ ಆಶ್ರಯ ಪಡೆದಿದ್ದ 40 ಮಂದಿ ಮುಸ್ಲಿಮರ ಮಾರಣಹೋಮ ನಡೆದಿತ್ತು)

-ಮದನ್ ಧನ್‌ರಾಜ್ ಶವಲ್ ಹಾಗೂ ಮಂಗೀಲಾಲ್ ಜೈನ್



ಮೋದಿ ಹೂಹಾರ ಹಾಕಿದರು:

"ಅಲ್ಲಿ ನಮ್ಮ ಕೆಲಸ (ಮುಸ್ಲಿಮರ ಕಗ್ಗೊಲೆ ಹಾಗೂ ಮುಸ್ಲಿಮ್ ಮಹಿಳೆಯರ ಮೇಲೆ ಅತ್ಯಾಚಾರ) ಮುಗಿದನಂತರ ಅಲ್ಲಿಗೆ ಬಂದು ಮೋದಿ ನಮಗೆಲ್ಲ ಹೂಹಾರ ಹಾಕಿ ಜೈಶ್ರೀರಾಂ ಎಂಬ ಘೋಷಣೆಗಳನ್ನು ಕೂಗಿ ನಮಗೆ ಪ್ರೋತ್ಸಾಹ ನೀಡಿದರು. ಅದೇ ಹೂವಿನ ಹಾರ ಮತ್ತೆ ನನ್ನ ಪಾಲಿಗೆ ಕೈಕೋಳವಾಯಿತು.

-ಸುರೇಶ್, ನರೋಡ ಹತ್ಯಾಕಾಂಡದ ಇನ್ನೊಬ್ಬ ಪ್ರಮುಖ ಆರೋಪಿ




ಗರ್ಭಿಣಿಯ ಹೊಟ್ಟೆ ಸೀಳಿದ್ದು ನಾನೇ

"ಗುಜರಾತ್‌ಗಾಗಿ ನರೇಂದ್ರ ಮೋದಿ ಮಾಡಿದ್ದನ್ನು ಬೇರೆ ಯಾವ ಮುಖ್ಯಮಂತ್ರಿಯೂ ಮಾಡಲಾರ. ನಾವು ನರೋಡಾದಲ್ಲಿ ಮುಸಲ್ಮಾನರನ್ನು ಕೊಂದು ಹಾಕಿದ ಒಂದು ದಿನದ ಬಳಿಕ ಅಲ್ಲಿಗೆ ಬಂದ ನರೇಂದ್ರ ಮೋದಿ ನಮ್ಮನ್ನು ಪ್ರೋತ್ಸಾಹಿಸುವ ಮಾತುಗಳನ್ನಾಡಿದರು. ಆನಂತರ ನಮ್ಮನ್ನು ಅಲ್ಲಿಂದ ತಪ್ಪಿಸಿ ಕೆಲವು ದಿನಗಳ ಕಾಲ ಅಬೂಮೌಂಟ್‌ನಲ್ಲಿ ಇರಿಸಿದರು. ಆ ಬಳಿಕ ನಮ್ಮನ್ನು ಪೊಲೀಸರ ವಶದಿಂದ ಬಿಡಿಸಿದರು. ನರೋಡಾದಲ್ಲಿ ನಡೆದ ಮುಸ್ಲಿಮರ ಹತ್ಯಾಕಾಂಡದ ಪ್ರಮುಖ ಹೀರೋ ನಾನೇ. ಅಲ್ಲಿ ಗರ್ಭಿಣಿ ಮುಸ್ಲಿಮ್ ಮಹಿಳೆಯ ಹೊಟ್ಟೆ ಸೀಳಿ ಕೊಲೆ ಮಾಡಿದ್ದು ನಾನೇ. ನಾವು ಪೆಟ್ರೋಲ್ ಬಾಂಬ್ ಮತ್ತು ರಾಕೆಟ್ ಲಾಂಚರ್‌ಗಳನ್ನು ಕೂಡ ಸಜ್ಜುಗೊಳಿಸಿ ಇಟ್ಟಿದ್ದೆವು. ನಾವು ಮುಸ್ಲಿಮ್ ಬಾಹುಳ್ಯದ ಪ್ರದೇಶಗಳಲ್ಲಿ ಪೆಟ್ರೋಲ್ ಬಾಂಬ್‌ಗಳನ್ನು ಬಳಸಿದೆವು. ನಾವು ರಾಜ್ಯದ ಗೃಹ ಸಚಿವ ಗೋವರ್ಧನ್ ಝಡಾಫಿಯಾರನ್ನು ಸಂಪರ್ಕಿಸಿ ವಿಷಯ ತಿಳಿಸುತ್ತಿದ್ದೆವು. ಅವರು ನಮಗೆ ಅವಿತುಕೊಳ್ಳಲು ತಿಳಿಸಿದರು."

-ಬಾಬೂ ಭಜರಂಗಿ, ಭಜರಂಗದಳ ನಾಯಕ

ಪ್ರಚಾರ ಶವವನ್ನು ಸುಡುವುದು ಸಮ್ಮತವಲ್ಲ, ಹಾಗಾಗಿ ಮುಸ್ಲಿಮರು ಅದನ್ನು ಹೂಳುತ್ತಾರೆ. ಈ ಕಾರಣಕ್ಕಾಗಿಯೇ ಅವರನ್ನು ಜೀವಂತವಾಗಿ ಸುಟ್ಟೆವು ಎಂದು ಹೇಳಿ ಈತ ಬೆನ್ನು ತಟ್ಟಿಕೊಂಡಿದ್ದಾನೆ. ಈ ಬರ್ಬರ ಕೊಲೆಗಳನ್ನು ಮಾಡಿದ ನಂತರ ತಾನೂ ಮಹಾರಾಣಾ ಪ್ರತಾಪನಂತೆ ಪರಾಕ್ರಮಿ ಎಂಬ ಹೆಮ್ಮೆಯುಂಟಾಯಿತಂತೆ!



ಈತ ತನ್ನ ಮನದಾಳದ ಆಸೆಯನ್ನೂ ತೆಹೆಲ್ಕಾದವರೆದುರು ಹೇಳಿಕೊಂಡಿದ್ದಾನೆ. ಅದೇನೆಂದರೆ, ಈತನಿಗೆ ಮರಣದಂಡನೆ ಶಿಕ್ಷೆಯಾದರೂ ಸಮಸ್ಯೆಯಿಲ್ಲವಂತೆ. ಆದರೆ, ಶಿಕ್ಷೆ ನೀಡುವ ಮೊದಲು ಈತನಿಗೆ ಎರಡು ದಿನಗಳ ಅವಕಾಶ ಕೊಡಬೇಕಂತೆ. ಆಗ ಈತ ಮುಸ್ಲಿಮರೇ ವಾಸಿಸುವ ಪ್ರದೇಶವಾದ ಜುಹಾಪುರಕ್ಕೆ ಹೋಗಿ 25 ರಿಂದ 50 ಸಾವಿರ ಮುಸ್ಲಿಮರನ್ನು ಕೊಂದು ಹಾಕುತ್ತಾನಂತೆ! ಈತನನ್ನು ಮಹಾರಾಣಾ ಪ್ರತಾಪ್ ಎನ್ನಬೇಕೆ ಅಥವಾ ರಕ್ತದಾಹಿ ರಾಕ್ಷಸ ಎನ್ನಬೇಕೆ?

ಕಾಂಗ್ರೆಸ್‌ನ ಮಾಜಿ ಸಂಸದ ಏಶನ್ ಜಫ್ರಿಯವರನ್ನು ಕೊಂದ ತಂಡದಲ್ಲಿದ್ದ ಚಾವಲ್ ಎಂಬ ವ್ಯಕ್ತಿ ಈ ಕಗ್ಗೊಲೆಯನ್ನು ಹೇಗೆ ನಡೆಸಲಾಯಿತೆಂದು ವಿವರವಾಗಿ ವರ್ಣಿಸಿದ್ದಾನೆ. ಹೇಗೆ ಜಫ್ರಿಯನ್ನು ಮನೆಯಿಂದ ಹೊರಗೆಳೆದು ಮನಸೋಯಿಚ್ಛೆ ಥಳಿಸಲಾಯಿತೆಂದೂ, ಆತ ಬಗೆಬಗೆಯಾಗಿ ಬೇಡಿಕೊಂಡರೂ ಕೇಳದೆ ಅವರ ಕೈಕಾಲುಗಳನ್ನು ಹೇಗೆ ಮುರಿಯಲಾಯಿತೆಂದೂ, ನಂತರ ಅವರ ದೇಹವನ್ನು ಸಣ್ಣ ಸಣ್ಣ ತುಂಡುಗಳಾಗಿ ಹೇಗೆ ಕತ್ತರಿಸಲಾಯಿತೆಂದೂ, ಕೊನೆಗೆ ತಾವು ಒಯ್ದಿದ್ದ ಕಟ್ಟಿಗೆಗಳನ್ನು ರಾಶಿ ಹಾಕಿ ಜಫ್ರಿಯವರನ್ನು ಜೀವಂತವಾಗಿ ಸುಟ್ಟದ್ದನ್ನೂ ವರ್ಣಿಸಿದ್ದಾನೆ. ಜಫ್ರಿಯವರ ಪುತ್ರಿ ಹಿಂದೂ ಮಹಿಳೆಯ ವೇಷ ಧರಿಸಿಕೊಂಡು ತಾನು ಜಫ್ರಿಯ ಮನೆಯಲ್ಲಿ ಕೆಲಸಕ್ಕಿರುವ ಆಳು ಎಂದು ಹೇಳಿಕೊಂಡು ತಮ್ಮಿಂದ ತಪ್ಪಿಸಿಕೊಂಡು ಹೋಗಿದ್ದನ್ನೂ ಆತ ವಿವರಿಸಿದ್ದಾನೆ.

ಮಂಗಿಲಾಲ್ ಜೈನ್ ಎಂಬ ಇನ್ನೊಬ್ಬ ಭಜರಂಗದಳದ ನಾಯಕ ಎರ್ಡಿ ಎಂಬ ಪೊಲೀಸ್ ಇನ್ಸ್‌ಪೆಕ್ಟರ್ ತಮಗೆ 2-3 ತಾಸುಗಳು ಸಮಯವನ್ನು ಕೊಟ್ಟು ಈ ಅವಧಿಯಲ್ಲಿ ಏನು ಬೇಕಾದರೂ ಮಾಡಿ ಮುಗಿಸುವಂತೆ ಹೇಳಿದ್ದನ್ನೂ, ಇದೇ ರೀತಿ ಪೊಲೀಸರು ಎಲ್ಲಾ ಕಡೆ ಸಮಯ ಕೊಟ್ಟಿದ್ದನ್ನೂ ಹೇಳಿಕೊಂಡಿದ್ದಾನೆ. ರಿಚರ್ಡ್ ಮತ್ತು ರಾಥೋಡ್ ಎಂಬ ಇಬ್ಬರು ವಿಎಚ್‌ಪಿ ನಾಯಕರು ಹಂದಿಯನ್ನು ಸಾಯಿಸಿ ಅದನ್ನು ಮಸೀದಿಯ ಮೇಲೆ ನೇತು ಹಾಕಿ ಕೇಸರಿ ಬಾವುಟವನ್ನು ಹಾರಿಸಿದ್ದನ್ನು ವಿವರಿಸಿದ್ದಾರೆ.

ಇವು ಸಂಘಪರಿವಾರದ ರಾಕ್ಷಸ ಸಾಗರದ ಕೆಲವು ಹನಿಗಳು ಮಾತ್ರ. ಹೇಳುತ್ತಾ ಹೋದರೆ ಇದೇ ಒಂದು ದೊಡ್ಡ ರಕ್ತಸಿಕ್ತ ಮಹಾಕತೆಯಾಗುತ್ತದೆ.



ಕರ್ನಾಟಕದ ಜನತೆಯ ಮುಂದೊಂದು ಪ್ರಶ್ನೆ...

ಈಗ ಕರ್ನಾಟಕದ ಜನತೆಯ ಎದುರು ಕೆಲವು ಪ್ರಶ್ನೆಗಳಿವೆ. ಇಲ್ಲಿಯೂ ಕೂಡ ಆರ್‌ಎಸ್‌ಎಸ್, ಭಜರಂಗದಳ, ವಿಶ್ವಹಿಂದೂ ಪರಿಷತ್ತು, ಶ್ರೀರಾಮ ಸೇನೆಯಂತಹ ಸಂಘಪರಿವಾರದ ಸಂಘಟನೆಗಳು ಮತ್ತು ಅವುಗಳಿಗೆ ರಾಜಕೀಯ ರಕ್ಷಾಕವಚ ತೊಡಿಸುತ್ತಿರುವ ಬಿಜೆಪಿ ಕರ್ನಾಟಕವನ್ನು ಗುಜರಾತ್ ಮಾಡುತ್ತೇವೆ ಎಂದು ಬಹಿರಂಗವಾಗಿ ಹೇಳಿದ್ದಾರೆ. ಇಲ್ಲಿ ಬಿಜೆಪಿಗೆ ಇದುವರೆಗೆ ಸಂಪೂರ್ಣ ಅಧಿಕಾರ ಸಿಕ್ಕಿಲ್ಲ, ಆದರೂ ಕರ್ನಾಟಕವನ್ನು ಗುಜರಾತ್ ಮಾಡುವತ್ತ ಈಗಾಗಲೇ ಹೆಜ್ಜೆ ಇಟ್ಟಾಗಿದೆ. ಕರಾವಳಿಯಲ್ಲಿ ಅವರು ತಮ್ಮ ಸಾಮಾಜಿಕ ತಳಹದಿಯನ್ನು ವಿಸ್ತರಿಸುತ್ತಾ ಮುಸ್ಲಿಮರ ಮೇಲೆ ದಾಳಿಗಿಳಿದಿರುವುದು, ಬಾಬಾಬುಡನ್‌ಗಿರಿಯ ವಿಚಾರವನ್ನು ದೊಡ್ಡ ವಿವಾದವನ್ನಾಗಿ ಮಾರ್ಪಡಿಸಿ ಹಿಂದೂ-ಮುಸ್ಲಿಮ್ ಮನಸ್ಸುಗಳ ನಡುವೆ ದ್ವೇಷದ ವಿಷ ಬಿತ್ತುತ್ತಿರುವುದು ಅವರು ಕರ್ನಾಟಕವನ್ನು ಗುಜರಾತ್ ಮಾಡುವ ಕಡೆಗೆ ಇಟ್ಟಿರುವ ಹೆಜ್ಜೆಗಳು.

ಈಗ ಜೆಡಿಎಸ್ ಮತ್ತು ಬಿಜೆಪಿ ನಡುವೆ ಮತ್ತೊಮ್ಮೆ ಅನೈತಿಕ ಮೈತ್ರಿ ಏರ್ಪಟ್ಟು ಬಿಜೆಪಿಗೆ ಅಧಿಕಾರ ಹಸ್ತಾಂತರವಾಗುತ್ತಿದೆ. ಹಾಗೇನಾದರೂ ಆದರೆ, ಈ ಹೆಜ್ಜೆಗಳು ದಾಪುಗಾಲಾಗಿ ಬಿಜೆಪಿ ಮತ್ತು ಸಂಘಪರಿವಾರ ರಾಜ್ಯಕ್ಕೆ ಬೆಂಕಿ ಹಚ್ಚಲಿವೆ. ಶಾಂತಿಯುತ ಕನ್ನಡ ನಾಡಿನಲ್ಲಿ ರಕ್ತದೋಕುಳಿ ಆರಂಭವಾಗಲಿದೆ. ಇನ್ನು ಗುಜರಾತ್‌ನಲ್ಲಿ ನರೇಂದ್ರ ಮೋದಿ ನೇತೃತ್ವದ ಬಿಜೆಪಿಗೆ ಸಿಕ್ಕಂತೆ ಇಲ್ಲಿಯೂ ಬಿಜೆಪಿಗೆ ಸ್ಪಷ್ಟ ಬಹುಮತ ಸಿಕ್ಕಿತೆಂದರೆ ಖಂಡಿತವಾಗಿಯೂ ಅವರು ಕರ್ನಾಟಕವನ್ನು ಗುಜರಾತ್ ಮಾಡಿಯೇ ತೀರುತ್ತಾರೆ. ಗುಜರಾತ್ ಮಾಡುವುದೆಂದರೆ, ಅಲ್ಪಸಂಖ್ಯಾತ ಸಮುದಾಯಗಳ ಮಾರಣಹೋಮ, ಮಹಿಳೆಯರ ಮೇಲೆ ಸಾಮೂಹಿಕ ಅತ್ಯಾಚಾರ, ದಮನಿತ ಸಮುದಾಯಗಳ ಆಸ್ತಿಪಾಸ್ತಿ ನಾಶ, ಮಕ್ಕಳು ವೃದ್ಧರ ಹತ್ಯಾಕಾಂಡ.

ಈಗ ಹೇಳಿ, ಸಂಘಪರಿವಾರದ ದುಷ್ಟ ಶಕ್ತಿಗಳ ಪ್ರಚಾರಕ್ಕೆ ಸೊಪ್ಪು ಹಾಕಬೇಕೆ? ಕರ್ನಾಟಕವನ್ನು ಗುಜರಾತ್ ಮಾಡಬೇಕೆ? ■

ರೇವಣ್ಣಂದು ವೃಷಭ ರಾಶಿ! ನಕ್ಷತ್ರ ಯಾವ್ದೂ?

ಕರ್ನಾಟಕದ ಬಹುದೊಡ್ಡ ಜನಾಂಗವಾದ ವೀರಶೈವರನ್ನು ಈ ದೇವೇಗೌಡ ಮಿಡಿ ಉಪ್ಪಿನಕಾಯಿ ಮಟ್ಟಕ್ಕೆ ಇಳಿಸಿದ್ದಾನೆಂದು ಮೈಸೂರು ಕಡೆಯ ಮಾಜಿಯೊಬ್ಬರು ಮಮ್ಮಲ ಮರುಗಿದ್ದಾರಂತಲ್ಲಾ, ಬಹುಸಂಖ್ಯೆಯ ಜನಾಂಗ ಯಾವಾಗಲು ಊಟದ ಪ್ರಧಾನ ವಸ್ತುವಾಗಬೇಕು. ಅಂದರೆ ಅನ್ನ, ಮುದ್ದೆ, ಬಾತು, ಬಿರಿಯಾನಿ ಇಂತಹ ಹೊಟ್ಟೆ ತುಂಬುವ ಭಕ್ಷ್ಯವಾಗಬೇಕು. ಇನ್ನುಳಿದ ಕಿರುಜಾತಿಗಳು ಹಪ್ಪಳ, ಸಂಡಿಗೆ, ಕೋಸಂಬರಿ, ತಾಳದ ತಿಳಿಸಾರು, ಮಜ್ಜಿಗೆ ಪಾತ್ರ ವಹಿಸಬೇಕು. ಆದರೆ ಈ ಬಕಾಸುರನಾದ ದೇವೇಗೌಡ ತೋರುಬೆರಳಲ್ಲಿ ನಾಲಗೆ ಸವರಿಕೊಂಡು ಚಪ್ಪರಿಸುವಂತಹ ಜುಜುಬಿ ಉಪ್ಪಿನಕಾಯಿ ಮಾಡಿ ಮಡಗಿದ್ದಾನಲ್ಲ? ವೀರಶೈವರು ಈ ಕೂಡಲೇ ಕಡಿಯಲಾಗದ ಕಟುಕಲು ರೊಟ್ಟಿಯಾಗಿ ದೇವೇಗೌಡನ ಹಲ್ಲಿಗೆ ಬುದ್ಧಿ ಕಲಿಸಬೇಕೆಂದು ಹಲುಬುತ್ತಿದ್ದಾರಂತಲ್ಲಾ, ಶರಣತತ್ವ ತ್ಯಜಿಸಿ, ಅಧಿಕಾರಕ್ಕಾಗಿ ಪುರೋಹಿತರ ಪಿಂಡದಂತಾಡುತ್ತಿರುವ ಎಡೂರಪ್ಪನಿಗೆ ಅನ್ಯಾಯವಾಗಿದೆಯೆಂದು ಶರಣರೆಲ್ಲಾ ಊಳಿಡುವುದು ಎಷ್ಟು ಸರಿ? ಮೊದಲು ನೀವು ಶರಣರಾಗಿ, ಶರಣತತ್ವ ಒಪ್ಪಿಕೊಳ್ಳಿ, ನಂತರ ಪ್ರತಿಭಟಿಸಿ ಎಂದು ಹಿಂದುಳಿದ ವರ್ಗದ ಮ.ನ. ಜಯರಯ್ಯ ಮೈಸೂರು ಶರಣರಿಗೆ ಬುದ್ಧಿಮಾತು ಹೇಳಿದರಂತಲ್ಲಾ, ಥೂತ್ತೇರಿ!

ಥೂತ್ತೇರಿ

ಯಾಹೂ

* * * *

ದೇವೇಗೌಡರ ದೆಸೆಯಿಂದಾಗಿ ಕರ್ನಾಟಕದ ಎಲ್ಲ ಪಾರ್ಟಿಯ ಜನರ ತಲೆ ಕೆಟ್ಟು ಕೆರಹಿಡಿದಿರುವಾಗಲೇ ಹೋಳಿ ಹಬ್ಬದಲ್ಲಿ ಬೋಳಿ ಬಸರಾದಳು ಎನ್ನುವಂತೆ ಎಪ್ಪತ್ತೈದು ವರ್ಷ ತುಂಬಿಸಿಕೊಂಡ ಬಂಗಾರಿ ಅದ್ದೂರಿಯಾಗಿ ಹುಟ್ಟಿದ ಹಬ್ಬ ಆಚರಿಸಿಕೊಂಡರಂತಲ್ಲಾ. ಕಾಂಗ್ರೆಸ್ ಪಾರ್ಟಿಯಿಂದ ಬೆಳೆದು, ಅಲ್ಲಿ ಮಂತ್ರಿಯಾಗಿ, ಮುಖ್ಯಮಂತ್ರಿಯಾಗಿ ಜೀವಮಾನವಿಡೀ ಮಂಗಾಟದ ರಾಜಕಾರಣ ಮಾಡುವಷ್ಟು ಮಾಡಿಕೊಂಡು ಪಾರ್ಟಿಯ ಯಾರನ್ನೂ ಈ ಬಂಗಾರಿ ತನ್ನ ಹುಟ್ಟುಹಬ್ಬಕ್ಕೆ ಕರೆದಿರಲಿಲ್ಲವಂತಲ್ಲಾ. ಇದನ್ನು ನೋಡಿದ ಕೆಲವು ಮಜವಾದಿಗಳು "ಅಲ್ರೀ, ನಮ್ಮ ಬಂಗಾರಿ ಅಂದ್ರೆ ಏನು ತಿಳಕೊಂಡ್ರಿ? ಬಂಗಾರಿ ರಾಜಕಾರಣದಲ್ಲಿ ಒಂದು ಬಾರಿ ಉಗುದ ಅಂದ್ರೆ, ತಿರಗ ಆ ಕಡೆ ತಿರುಗಿ ನೋಡಲ್ಲ, ತನ್ನ ಹಿರಿಮಗ ಕುಮಾರ್ ಬಂಗಾರಪ್ಪನ್ನೆ ತಗುದು ಯಸ್ತಿರೋನು ಇನ್ನು ಆ ಪಿಂಜರಾಪೋಲು ಪಾರ್ಟಿ ಕಾಂಗ್ರೆಸ್ ಜನಗಳನ್ನ ಕರಿತನೇನ್ರಿ?" ಎಂದವಂತಲ್ಲಾ, ಥೂತ್ತೇರಿ!!

* * * *

ತನಗೆ ಕೊಟ್ಟ ಖಾತೆ ವಿಷಯದಲ್ಲಿ ಕತ್ತೆ ದುಡಿತ ಮಾಡಿ ಕೀರ್ತಿ ಗಳಿಸಿದ ಎಚ್.ಡಿ. ರೇವಣ್ಣನವರನ್ನು ಮಾತನಾಡಿಸಿದ ಹೇಗೆ ಅನ್ನಿಸಿತು. ಆ ಕೂಡಲೇ ಪ್ರಯತ್ನಿಸಲಾಗಿ ಸಿಕ್ಕೇಬಿಟ್ಟರು. ಮೊಬೈಲ್ ರಿಂಗಾಯ್ತು, ಯಾವುದೋ ಕರ್ಣ ಕಠೋರ ದನಿ.



"ಹಲೋ, ಹಲೋ, ಯಾರ್ರಿ ಮಾತಾಡ್ತಯಿರೊದು?"

"ನಾನು ಸಾರ್, ಯಾಹೂ ಅಂತ, ಪತ್ರಕರ್ತ."

"ಏನಾಗಬೇಕು ಹೇಳ್ರಿ?"

"ಏನಾರ ಮಾಡಿಸಿಗಳನ ಅಂದ್ರೆ ನಿಮ್ಮತ್ರ ಯಾವ ಖಾತೆನು ಇಲ್ಲವಲ್ಲ ಸಾರ್?"

"ಖಾತೆ ಇಲ್ದಿದ್ರೇನ್ರಿ, ನಾವೇ ಹೇಳಿ ಹಾಕಿಸಿಕೊಂಡಿರೊ ಅಧಿಕಾರಿಗಳಿಲ್ಲವೆ? ಮಾಡುಸ್ತಿನಿ ಹೇಳಿ."

"ಅಂಗಾದ್ರೆ, ಅಧಿಕಾರಿಗಳು ಈಗ್ಲು ನಿಮ್ಮ ಮಾತ ಕೇಳ್ತರ ಸಾರ್?"

"ಕೇಳದೆಯಿದ್ರೆ ಸುಮ್ಮನೆ ಬುಡ್ತಿನೇನ್ರಿ? ಏನವ್ರರಪ್ಪನ ಮನೆಯಿಂದ ತಂದು ಮಾಡ್ತರ? ಸಂಬಳ ತಗಳದಿಲವೆ?"

"ಅಧಿಕಾರಿಗಳು ನಿಮ್ಮ ಮಾತು ಕೇಳೊ ತರ ಎಮ್ಮೆಲ್ಲೆಗಳೂ ಕೇಳಿದ್ರೆ ಚನ್ನಾಗಿತ್ತಲ್ಲವ ಸಾರ್?"

"ಚನ್ನಾಗಿತ್ತು ಕಂಡ್ರಿ. ಆದ್ರು ಯಾಕೊ ಈ ಎಮ್ಮೆಲ್ಲೆಗಳು ನನ್ನ ಕಂಡ್ರೆ ಮುಕ ತಿರುಗಿಸಿಗಂಡೋಯ್ತರೆ...."

"ಯಾಕ್ ಸಾರ್?"

"ನಾನು ಕತ್ತೆ ವದ್ದಂಗೆ ಮಾತಾಡ್ತಿನಲ್ಲ ಅದ್ಕೆ!"

"ಕತ್ತೆ ವದ್ದಂಗೆ ಮಾತಾಡಬಾರ್ದು ಸಾರ್. ನೋಡಿ ಕುಮಾರಸ್ವಾಮಿ ಅವ್ರರ ತಬ್ಬಿಕೊಂಡು, ಕೆನ್ನೆಗೆ ಮುತ್ತು ಕೊಟ್ಟು, ಹಣ ಕೊಟ್ಟು, ಕೇಳಿದೋರಿಗೆ ಹುಡುಗಿರನೂ ಕೊಟ್ಟು ಮುಖ್ಯಮಂತ್ರಿ ಆಗೇಬುಟ್ಟ. ನೀವು ಅಂಗೆ ಮಾಡಿ ಸಾ."

"ಚನಾಗೇಳ್ತಿರಿ ಕಂಡ್ರಿ ನೀವು. ನಾನು ಇವ್ರರನೆಲ್ಲಾ ಹಿಡಕೊಂಡು ಮುತ್ತು ಕೊಡಕ್ಕಾಯ್ತದೇನ್ರಿ? ಏನು ಬ್ಯಾಡ ಆ ಚೆನ್ನಿಗಪ್ಪನ ಮುಸುಡಿ ಅತ್ರ ನನ್ನ ಮುಖ ತಗಂಡೋಗಕ್ಕಾಯ್ತೆನ್ರಿ? ಹೋಗ್ಲಿ ಇವ್ರರ ರೆಸಾರ್ಟಿಗೆ ಕರಕಂಡೋಗಿ ಹಣಕೊಟ್ಟು, ಹೆಂಗಸರ ತಂದು ಕೊಟ್ಟು ಮುಖ್ಯಮಂತ್ರಿಯಾಗಬೇಕೇನ್ರಿ? ಆಗೋಕಾಲ ಬತ್ತದೆ, ಆಗ ಆಯ್ತಿನಿ. ಹಣೆಬರ ತಪ್ಪುಕ್ಕಾದತೇನ್ರಿ?"

"ಹಣೆ ಬರಹ ಜೊತೆಗೆ ಬೇರೆ ಬರಹಗಳು ಇರಬೇಕಂತಲ್ಲಾ?"

"ಅದ ನಾನೂ ಒಪ್ಗತಿನಿ. ಆದ್ರು ಈ ಎಮ್ಮೆಲ್ಲೆಗಳಿಗೆ ನನ್ನ ಕಂಡ್ರಾಗದಿಲ್ಲ, ಅದ್ಕೆ ನನ್ನ ನಕ್ಷತ್ರವೇ ಅಂತದು ಅನ್ಕಂಡು ಸುಮ್ಮನಿದ್ದಿನಿ."

"ಮೂಲಾನಕ್ಷತ್ರವ ಸಾರ್?"

"ಇದೇನ್ರಿ ಹಿಂಗೇಳ್ತಿರಿ? ನಾನು ಮೂಲಾ ನಕ್ಷತ್ರದಲ್ಲಿ ಹುಟ್ಟಿದ್ರೆ ನಮ್ಮ ತಂದೆತಾಯಿ ಬದುಕಿರತಿದ್ರ, ಸತ್ತೋಯ್ತಿದ್ರಲವೇನ್ರಿ?"

"ಓಹೊ, ಹೌದಲವ ಸಾರ್. ಅಂಗಾದ್ರೆ ನಿಮ್ಮ ನಕ್ಷತ್ರ ಯಾವುದು ಸಾರ್?

"ಯಾವುದೊ ಗೊತ್ತಿಲ್ಲ ಕಂಡ್ರಿ. ನಮ್ಮ ತಂದೆ ಜಾತಗ ಬರಿಸ್ಯವ್ರರೆ. ಅದ್ಯಾವುದೊ ಮೃಗ ನಕ್ಷತ್ರ ಅಂತರೆ. ಸರಿಯಾಗಿ ಗೊತ್ತಿಲ್ಲ."

"ಮೃಗ ನಕ್ಷತ್ರ, ವೃಷಭ ರಾಶಿ ಇರಬೇಕಲವ ಸಾರ್?"

"ತುಲಾ ರಾಶಿಯಂತೆ ಕಂಡ್ರಿ."

"ತುಲಾ ರಾಶಿಯಾದ್ರೆ ಕೀರ್ತಿ, ಸುಖ, ಧನಲಾಭ, ಕಾರ್ಯಶಕ್ತಿ ಯಲ್ಲ ಇದಿಯಲ್ಲ ಸಾರ್?"

"ಅದ್ಯಲ್ಲ ಆಯ್ತಲ್ಲ ಒಪ್ಗತಿನಿ. ಆದ್ರು ನನ್ನ ಕಂಡ್ರೆ ಈ ಯಮ್ಮೆಲ್ಲೆಗಳು ವಿರೋಧ ಯಾಕ್ ಮಾಡ್ತರೆ ಅನ್ನದೆ ಗೊತ್ತಾಯ್ತಯಿಲ್ಲ?"

"ಆ ತುಲಾ ರಾಶಿಲೆ ಬಂದು ಮಿತ್ರ ವಿರೋಧ ಅಂತನೂ ಇದೆ ಸಾರ್."

"ಇವ್ರರ್ಯಾವ ಬಂದುಗಳ್ರಿ. ಇವ್ರರೇನು ನಮ್ಮ ಮನೆ ಬೀಗರೊ ಅಥವಾ ದಾಯಾದಿಗಳೊ?"

"ಅಂಗಲ್ಲ, ಸುಮಾರು ಜನ ಎಮ್ಮೆಲ್ಲೆ ಬಡ್ಕತ್ತವ್ರು ದ್ಯಾವೇಗೌಡ್ರ ಅಪ್ಪಾಜಿ ಅಂತವೆ. ಕೆಲವರು ತಂದೆ ಸಮಾನ ಅಂತವೆ. ಇದನ್ನಲ್ಲ ನೋಡಿದ್ರೆ, ಮತ್ತೆ ಗುಂಪು ಕಟ್ಟಿಕೊಂಡು ಕೊಳ್ಳೆ ಹೊಡಿಯದು ನೋಡಿದ್ರೆ, ಅವ್ರರೆಲ್ಲ ನಿಮ್ಮ ಬಂದು ಬಳಗ ದಂಗೆ ಆದರಲ್ಲಾ ಸಾರ್?"

"ನನಿಗೇನೊ ಕಂಡ್ರಿ, ನನ್ನೆಂಡ್ತಿ ಕಡಿಯೋರು ನಮ್ಮವ್ವನ ಕಡಿಯೋರ ಬುಟ್ರೆ ಇನ್ನಾರು ನಂಟ್ರಲ್ಲ ಅನ್ನುಸ್ತದೆ."

"ನಿಜಕ್ಕೂ ಒಳ್ಳೆ ಗುಣ ಸಾರ್. ದೇವೇಗೌಡ್ರಿಗೂ ಅಂಗೆಯ. ತನ್ನ ಮಕ್ಕಳಿದ್ರಿಗೆ ಇನ್ನಾರು ಅಲ್ಲ ಅನ್ನುಸ್ತದೆ."

"ಅಂಗಿರೊವತ್ತಿಗೆ ಕಂಡ್ರಿ ಇವತ್ತು ನಮ್ಮಪ್ಪನತ್ರ ನಾವೆ ಇರದು. ಯಲ್ಲಾರು ಆಗ್ಲೆ ಎಂ.ಪಿ. ಪ್ರಕಾಶರ ಮನೆ ಅತ್ರ ಅವ್ರರೆ."

"ಅಂಗರೆ ಪ್ರಕಾಶ್ ಮುಖ್ಯಮಂತ್ರಿ ಆಯ್ತರ ಸಾರ್?"

"ಆದರೊ ಬುಟ್ಟರೊ ನನಿಗೇನ್ರಿ...."

"ಅಲ್ಲ ನಿಮಗೊತ್ತಿಲವ....?"

"ಹೇಳಗಂಟ ಕೇಳ್ರಿ... ಆ ಕಾಂಗ್ರೆಸಿನೋರ ನಚ್ಚಗಂಡ್ರೆ ಯಾರ್‍ಯಾರ ಕ್ಯಲಸ ಮಾಡಕ್ಕಾಯ್ತದೇನ್ರಿ? ಹಾಸನ-ಮಂಗಳೂರು ರೈಲು ಬಗ್ಗೆ ಎಷ್ಟು ಕಾಗದ ಬರದಿದ್ದಿನಿ ಗೊತ್ತ ಕೇಂದ್ರಕೆ? ಅದೇ ಒಂದು ಬೈಬಲ್ಲಾಯ್ತದೆ."

"ಅಂಗರೆ ಬೈಬಲಲ್ಲಿರದು ಬರೀ ರೈಲ್ವೆ ಕಾಮಗಾರಿನ ಸಾರ್?"

"ಏನು ಪತ್ರಕರ್ತರಿ ನೀವು? ಹೇಳಿದ್ದು ಅರ್ಥ ಮಾಡಿಕಳಕ್ಕಾಗದಿಲ್ಲ, ಕೇವಲ ಹಾಸನ-ಬೆಂಗಳೂರು ರೈಲ್ವೆ ಹಳಿ ವಿಸಿಯದಲ್ಲಿ ನಮ್ಮ ತಂದೆ ನಾನು ಸೇರಿಕೊಂಡು ಕೇಂದ್ರಕೆ ಎಷ್ಟು ಕಾಗದ ಬರದಿದ್ದಿವಿ ಅಂದ್ರೆ, ಅದೇ ಒಂದು ಭಗವದ್ಗೀತೆ ಆಯ್ತದೆ ಕಂಡ್ರೀ."

"ತಿರುಗ ನನಿಗೆ ಕನ್‌ಫ್ಯೂಜಾಯ್ತಾ ಅದೆ ಸಾ. ಭಗವದ್ಗೀತೆಲಿ ಯುದ್ಧ ಮಾಡಕ್ಕಾಗದಿಲ್ಲ, ನಾನೋಯ್ತಿನಿ ಅಂದ ಅರ್ಜುನನಿಗೆ ಕೃಷ್ಣ ಹೆದ್ರಿಕಬ್ಯಾಡ, ಯುದ್ಧ ಮಾಡೊ ಅಂತ ಧೈರ್ಯ ತುಂಬತನೆ. ಈ ನಿಮ್ಮ ರೈಲ್ವೆ ಹಳಿ ಪತ್ರಕೂ, ಭಗವದ್ಗೀತೆಗೂ ಏನು ಸಮಂದ ಅಂತ?"

"ಅಲ್ಲ ಕಂಡ್ರಿ, ಆಟೊತ್ತಿಂದ ಗಿಣಿಗೇಳಿದಂಗೆ ಹೇಳ್ತಾಯಿದ್ದಿನಿ ಅರ್ಥನೆ ಮಾಡಿಕತ್ತಾಯಿಲ್ಲ ನೀವು. ಕಿಷ್ನ ಯಂಗೆ ಬೋದ್ನೆ ಮಾಡಿದ್ನೊ ಅಂಗೆ ನಾನೂ ಕೇಂದ್ರದ ರೈಲ್ವೆ ಮಂತ್ರಿಗೆ ಹೆದರಬ್ಯಾಡಿ, ಅಳಿಹಾಕಿ ರೈಲೋಡಿಸಿ. ನಮ್ಮ ಜನ ಓಡಾಡ್ತರೆ ಅಂತ ಧೈರ್ಯ ತುಂಬದ್ದಿನಿ ಕಂಡ್ರೀ. ಅಷ್ಟೂ ಗೊತ್ತಾಗದಿಲವ ನಿಮಗೆ?"

"ಗೊತ್ತಾಯ್ತು ಸಾರ್."

"ಏನು ಗೊತ್ತಾಯ್ತು?"

"ಥೂತ್ತೇರಿ!!!" ■

'ಕಟಡಾ ನನ್ಮಗ....' ಅಂತ ಹೆಸರಿಟ್ಟುಕೊ ಅಂದರೆ?

ಚೆಡ್ಡಿ ನಾಯಕ ಯಡ್ಡಿ ಈಗ ತನ್ನ ಹೆಸರನ್ನು ಬಿ.ಜೆ. ಯಡ್ಯೂರಪ್ಪ ಅಂತ ಬದಲಾಯಿಸಿಕೊಂಡಿದ್ದಾರೆ. ಈ ವ್ಯಕ್ತಿಯ ಹೆಸರು ಬಿ.ಎಸ್. ಯದಿಯೂರಪ್ಪ ಅಂತ ಇತ್ತು. ಇನ್ನು ಅರೇ ಚೆಡ್ಡಿ ಕುಮಾರಸ್ವಾಮಿನೂ 2006ರ ಫೆಬ್ರವರೀಲಿ ಸಿಎಂ ಆದ ತಕ್ಷಣ ತನ್ನ ಹೆಸರನ್ನು H.D. Kumaara swaamy ಅಂತ ಬದಲಿಸಿಕೊಂಡಿದ್ದರು. ಈ ಅವಿವೇಕಿಯ ಹೆಸರಿನ ಸ್ಪೆಲ್ಲಿಂಗ್ ಮೊದಲು ಸಿಂಪಲ್ಲಾಗಿ Kumaraswamy ಅಂತಿತ್ತು.



ಇದಕ್ಕೆ ಕಾರಣಗಳನ್ನು ಹೇಳುತ್ತಾ ಹೋದರೆ ನಿಮಗೆ ತಲೆ ಕೆಡಬಹುದು. ಉದಾಹರಣೆಗೆ ಕುಮಾರಸ್ವಾಮಿ ಹಾಗೆ ಮಾಡಿದ್ದು ಯಾಕೆಂದರೆ ಮೊದಲಿನ ಹೆಸರಿನ ಅಕ್ಷರ ಸಂಖ್ಯೆ ಒಟ್ಟುಗೂಡಿಸಿದರೆ 11 ಆಗುತ್ತೆ, ಅದನ್ನು ಕೂಡಿದರೆ ಬರೀ ಎರಡು ಬರುತ್ತೆ, ಕಳೆದರೆ ಸೊನ್ನೆ ಸಿಗುತ್ತೆ, ಗುಣಿಸಿದರೆ ಬರೀ ಒಂದೇ ಆಗುತ್ತೆ... ಅಂತ!?

ಹಲ್ಕಾ ಜ್ಯೋತಿಷಿಗಳು ಇದನ್ನು ಸಂಶೋಧಿಸಿ ನಿಮ್ಮ ಹೆಸರಿನಲ್ಲಿರೋ ಮ್ಯಾಥಮೆಟಿಕಲ್ ಪ್ರಾಬ್ಲಂನಿಂದ ನಿಮ್ಮ ರಾಜಕೀಯ ಜೀವನದಲ್ಲಿ ಏಳ್ಗೆ ಇರಲ್ಲ ಅಂತ



ದಿಗಿಲಿಕ್ಕಿಸಿ ಸ್ಪೆಲ್ಲಿಂಗ್ ಬದಲಾಯಿಸಿದ್ದರು. ಈ ಕುಮಾರಸ್ವಾಮಿ ಒಬ್ಬ ಅವಿದ್ಯಾವಂತ. ಬುದ್ಧಿ ವಿವೇಚನೆ ಇರದ ಮೂರ್ಖ ಶಿಖಾಮಣಿ. ಅಂತವನೇ ಹೆಸರು ಬದಲಾಯಿಸಿಕೊಂಡು ಸಿಎಂ ಪದವಿ ಲಪಟಾಯಿಸಿದ ಅಂತ ಯಡ್ಡಿನೂ ನಂಬಿಕೊಂಡರು.

ಅದರ ಫಲವೇ ಬಿ.ಎಸ್. ಯದಿಯೂರಪ್ಪ ಹೋಗಿ ಈಗ ಬಿ.ಜೆ. ಯಡ್ಡಿಯೂರಪ್ಪ ಬಂದಿದೆ.

ಈ ಅಪದ್ಧಗಳನ್ನೆಲ್ಲಾ ಈ ಅವಿವೇಕಿಗಳ ಖಾಲಿ ತಲೆಗೆ ತುಂಬಿದ್ದು ನೊಣವಿನಕೆರೆಯ ವೀರಗಂಗಾಧರ ಸ್ವಾಮಿ ಎಂಬಾತ. ಇವನು ಅದೇನು ಪವಾಡ ಮಾಡಿ ತೋರಿಸಿದನೋ ಏನೋ ಕುಮಾರಸ್ವಾಮಿ, ಶ್ರೀಕಂಠದತ್ತ ಒಡೆಯರ್, ಚೆಲುವರಾಯಸ್ವಾಮಿ, ಎಸ್.ಎಂ. ಕೃಷ್ಣ ಯಡ್ಡಿ... ಸಾರಿ ಯಡ್ಡಿಯೂರಪ್ಪ ಹೀಗೆ ಬಹುತೇಕ ನಾಯಕರು ನೊಣವಿನಕೆರೆಗೆ ಹೋಗಿ ಜಾತಕ, ವಾಸ್ತು ಎಂಬ ನೊಣ ತಿಂದು ಬರುತ್ತಿದ್ದಾರೆ.

ಈ ದರಿದ್ರ ಪರಂಪರೆಯನ್ನು ದೊಡ್ಡಮಟ್ಟದಲ್ಲಿ ಚಾಲೂ ಮಾಡಿದ್ದು ಎಸ್.ಎಂ. ಕೃಷ್ಣ. ಈತ ಅಮೆರಿಕಾದಲ್ಲಿ ಓದಿ ಬಂದಿರುವಾತ. ಅಲ್ಲಿ ಅದೇನು ಓದಿ ಬಿಡಿದ ಮುಕ್ಕಿ ಬಂದನೋ ಸಿಎಂ ಆದ ತಕ್ಷಣ ವಾಸ್ತು, ಗ್ರಹಗತಿಗಳ ಕಾಯಿಲೆ ಅಂಟಿಸಿಕೊಂಡ. ಅದೇ ಈಗ ಸಾಂಕ್ರಾಮಿಕ ರೋಗವಾಗಿ ಎಲ್ಲರಿಗೂ ಬಡಿದುಕೊಳ್ಳುತ್ತಿದೆ.

ಅಲ್ಲಾ ನಮ್ಮ ಪ್ರಶ್ನೆ ಏನೆಂದರೆ ನಾಳೆ ಇನ್ಯಾವನೋ ತಲೆ ಕೆಟ್ಟ ಸ್ವಾಮಿ 'ನಿನ್ನ ಹೆಸರನ್ನು ಕಟಡಾ ನನ್ಮಗ ಅಂತ ಬದಲಾಯಿಸಿಕೊ' ಅಂದರೆ ಯಡ್ಡಿನೋ ಮುತ್ಯಾನೋ ಹಾಗೇ ಮಾಡುತ್ತಾರಾ ಅಂತ?

ಯಾರಿಗೆ ಗೊತ್ತು?

ಇವರ ದಡ್ಡತನ ಆ ಚೆಡ್ಡೇಶನಿಗೇ ಇಷ್ಟ.

ಎಂ.ಪಿ. ಪ್ರಕಾಶ್ ಪೆಚ್ಚಾಗಿದ್ದಾರೆ.

ಜೆಡಿಎಸ್ ಶಾಸಕರ ಒತ್ತಡದ ಕಾರಣಕ್ಕೇ ಕಾಂಗ್ರೆಸ್ ಜೊತೆ ಸೇರಿ ಹೊಸ ಸರ್ಕಾರ ರಚಿಸುವ ಸಾಧ್ಯತೆ ಹುಡುಕಲು ದೆಹಲಿಗೆ ಹೋಗಿದ್ದರು ಪ್ರಕಾಶ್. ಆದರೆ ಜೆಡಿಎಸ್ ಶಾಸಕಾಂಗ ಸಭೆಯೇ ಅದನ್ನು ವಿಫಲಗೊಳಿಸಿದೆ. ಕುಮಾರಸ್ವಾಮಿ ಹಾಗೂ ಚೆಲುವರಾಯಸ್ವಾಮಿ ಅತ್ತ ಪ್ರಕಾಶರನ್ನು ದೆಹಲಿಗೆ ಕಳುಹಿಸಿ ತಾವು ಬೆಂಗಳೂರಿನಲ್ಲೇ ಕುಳಿತು ಬಿಜೆಪಿಯೊಂದಿಗೆ ಮರುಮೈತ್ರಿಯ ಷಡ್ಯಂತ್ರ ರೂಪಿಸಿಬಿಟ್ಟರು. ಮತ್ತೊಂದೆಡೆ ದೇವೇಗೌಡರೂ ದೆಹಲಿಯಲ್ಲಿ ಕುಳಿತು ಈ ನಾಚಿಕೆಗೆಟ್ಟ, ಮಾನಗೇಡಿ ಸ್ನೇಹಕ್ಕೆ ಸಮ್ಮತಿ ಸೂಚಿಸಿದ್ದಾರೆ.

ನಾಳೆ ಯಡ್ಡಿ ನೇತೃತ್ವದಲ್ಲಿ ಹೊಸ ಸರ್ಕಾರ ರಚನೆಯಾದರೆ 'ಚುನಾವಣೆ ಬೇಡ' ಎನ್ನುತ್ತಿದ್ದ ಶಾಸಕರೆಲ್ಲರಿಗೂ ಸಮಾಧಾನವಾಗಬಹುದು. ಆದರೆ ಪ್ರಕಾಶ್ ಮಾತ್ರ ಜೆಡಿಎಸ್ ವಿಭಜಿಸಲು ಯತ್ನಿಸಿದರೆಂಬ ಆರೋಪವನ್ನು ವಿನಾಕಾರಣ ಹೊತ್ತುಕೊಳ್ಳಬೇಕಾಗಿ ಬಂದಿದೆ. ಜೆಡಿಎಸ್ ಶಾಸಕರ ಒತ್ತಾಯದಿಂದಲೇ ಪ್ರಕಾಶ್ ಕಾಂಗ್ರೆಸ್ ಜೊತೆ ಮೈತ್ರಿ ಪ್ರಯತ್ನ ಮಾಡಿದ್ದರಾದರೂ ಅದೇ ನೆಪ ಇಟ್ಟುಕೊಂಡು ಪ್ರಕಾಶ್‌ರನ್ನು ಹರಕೆಯ ಕುರಿ ಮಾಡುವ ಪಿತೂರಿ ಈಗ ಗೌಡರ ಕುಟುಂಬದಿಂದ ನಡೆಯುತ್ತಿದೆ. ಹಾಗೆ ನೋಡಿದರೆ ಜೆಡಿಎಸ್ ಶಾಸಕರೆಲ್ಲರ ಅಭಿಪ್ರಾಯ ವಿರೋಧಿಸಿ 'ಯಾವ ಮೈತ್ರಿಯೂ ಬೇಡ, ಚುನಾವಣೆಗೆ ಹೋಗೋಣ' ಎಂದು ಹಠ ಮಾಡುತ್ತಿದ್ದ ಒಬ್ಬನೇ ನಾಯಕ ಈ ದೇವೇಗೌಡ. ಆದರೆ ಅದೇ ಗೌಡ ಈಗ 'ಚುನಾವಣೆ ಬೇಡ, ಬಿಜೆಪಿ ಜೊತೆ ಸೇರಿ ಸರ್ಕಾರ ರಚನೆ ಆಗಲಿ' ಎನ್ನುತ್ತಿದ್ದಾರೆ.


ದೇವೇಗೌಡರಿಗೆ ಎಷ್ಟು ನಾಲಿಗೆಗಳಿವೆಯೋ ಯಾರಿಗೆ ಗೊತ್ತು!

ಪ್ರಕಾಶ್ ದಳ ವಿಭಜಿಸಲು ಯತ್ನಿಸಿದರೆಂಬ ಮಾತು ಅಥವಾ ವಿಭಜನೆ ಮಾಡಿ ಬನ್ನಿ ಎಂಬ ಆದೇಶ ಕಾಂಗ್ರೆಸ್ ಹೈಕಮಾಂಡಿನದಾಗಿರಲಿಲ್ಲ. ಕರ್ನಾಟಕ ಕಾಂಗ್ರೆಸ್‌ನ ಡಿ.ಕೆ. ಶಿವಕುಮಾರ್, ಸಿದ್ಧರಾಮಯ್ಯ ಹಾಗೂ ಎಸ್.ಎಂ. ಕೃಷ್ಣಗಷ್ಟೇ ಅದು ಬೇಕಿತ್ತು. ಅದರಲ್ಲೂ ಕರ್ನಾಟಕದ ಪಾಲಿಗೆ ಶನಿಯಂತಾಗಿರುವ ಎಸ್.ಎಂ. ಕೃಷ್ಣ 'ದೇವೇಗೌಡ ಕುಟುಂಬದವರನ್ನು ಹೊರಗಿಟ್ಟು ಉಳಿದ ದಳ ಶಾಸಕರನ್ನು ನೀವು ಕರೆತನ್ನಿ' ಎಂದು ಪ್ರಕಾಶ್‌ರ ದಾರಿ ತಪ್ಪಿಸಿಬಿಟ್ಟರು.


ಗೌಡರ ವಿರುದ್ಧ ಸೆಣೆಸುವಷ್ಟು ಛಾತಿ ಪ್ರಕಾಶ್‌ಗೆ ಈ ಹಿಂದೆಯೂ ಇರಲಿಲ್ಲ, ಅಷ್ಟು ಶಕ್ತಿ ಬಹುಶಃ ಅವರಿಗೆ ಮುಂದೆ ಸಿಗುವುದೂ ಇಲ್ಲ.

ಆದರೆ ಇಲ್ಲಿನ ಪ್ರಶ್ನೆ ಏನೆಂದರೆ 'ಕಾಂಗ್ರೆಸ್‌ನೊಂದಿಗೆ ಮೈತ್ರಿಗೆ ಪ್ರಯತ್ನಿಸಿ' ಎಂದು ಪ್ರಕಾಶ್‌ರನ್ನು ದೆಹಲಿಗೆ ಕಳುಹಿಸಿದ ನಂತರ ಕುಮಾರಸ್ವಾಮಿ, ದತ್ತ ಸೇರಿಕೊಂಡು ಗೌಡರ ಸೂಚನೆಯಂತೆ ಪ್ರಕಾಶ್‌ರನ್ನೇ ಏಕಾಂಗಿಯಾಗಿಸಿ ಈಗ ಮೂಲೆಗುಂಪು ಮಾಡಿಟ್ಟಿದ್ದಾರೆ.

ವಾಸ್ತವ ಸಂಗತಿ ಏನೆಂದರೆ ಕಾಂಗ್ರೆಸ್ ಜೊತೆಗಿನ ಮರುಮೈತ್ರಿ ಯೋಚನೆ ಮೊದಲು ಬಂದಿದ್ದೇ ದೇವೇಗೌಡರಿಗೆ. ಅವರು ಕಳೆದ ನಾಲ್ಕಾರು ತಿಂಗಳುಗಳಿಂದ



ಪ್ರಕಾಶ್ ಬೆನ್ನಿಗಿರಿದದ್ದು ಯಾರು?



ಕಾಂಗ್ರೆಸ್ ನಾಯಕರಾದ ಪೋತ್‌ದಾರ್, ಜಾಫರ್ ಷರೀಫ್, ಎಂ.ವಿ. ರಾಜಶೇಖರನ್, ಕೆ.ಎಚ್. ಮುನಿಯಪ್ಪ ಮೂಲಕ ರಾಜಿ ಸಂಧಾನಕ್ಕೆ ಯತ್ನಿಸುತ್ತಲೇ ಇದ್ದರು... ಆದರೆ ಕಾಂಗ್ರೆಸ್‌ಗೆ ಗೌಡರ ಬಗ್ಗೆ ಎಷ್ಟು ತಿರಸ್ಕಾರವಿದೆಯೆಂದರೆ ಸೋನಿಯಾ ಇರಲಿ ಅಹ್ಮದ್ ಪಟೇಲ್ ಕೂಡ ಗೌಡರ ಭೇಟಿಗೆ ಒಪ್ಪಿರಲಿಲ್ಲ, ಮಾರ್ಗರೆಟ್ ಆಳ್ವ ಒಮ್ಮೆ ಸೋನಿಯಾ ಹತ್ತಿರ ಮರುಮೈತ್ರಿ ವಿಚಾರ ಪ್ರಸ್ತಾಪಿಸಿದಾಗ 'ನಾನು ಅವರ

ಈಶ

(ಗೌಡರ) ಮುಖ ಮತ್ತೆ ನೋಡಲ್ಲ' ಎಂದಿದ್ದರು ಸೋನಿಯಾ. ಈ ಗೌಡರು ಎಂಥ ಅವಕಾಶವಾದಿ ಅಂದರೆ ಇವತ್ತು ಎಸ್.ಎಂ. ಕೃಷ್ಣ ತಲೆ ಕಂಡರಾಗದವರು ತಾನೇ ಎಸ್‌ಜೆಪಿ ಪಾರ್ಟಿ ಕಟ್ಟಿದಾಗ ಕೃಷ್ಣ ಜೊತೆಗೂ ಮಾತಾಡಲು ರೆಡಿ ಇದ್ದರು.

ಪ್ರಕಾಶ್‌ಗೆ ಇವೆಲ್ಲಾ ವಿಚಾರಗಳ ತಿಳಿವಳಿಕೆ ಇತ್ತು. ಆದರೆ ಕಳೆದ ಒಂದು ತಿಂಗಳ ರಾಜಕೀಯ ವಿದ್ಯಮಾನಗಳು ಅನಿವಾರ್ಯವಾಗಿ ಅವರನ್ನು ದಿಢೀರ್ ಎಂದು ಕೇಂದ್ರ ಸ್ಥಾನಕ್ಕೆ ತಂದು ನಿಲ್ಲಿಸಿಬಿಟ್ಟವು. ಗೌಡರ ಕುಟುಂಬದ ವಿರುದ್ಧ ದಳ ಶಾಸಕರಿಗಿದ್ದ ಅಸಮಾಧಾನ, ಆಕ್ರೋಶಗಳೆಲ್ಲಾ ಸೇರಿ ಪ್ರಕಾಶ್ ಪರ್ಯಾಯ ನಾಯಕ[...] ರಾಗುವತ್ತ ದೂಡಿದವು. ಇಂಥ ಸಂದರ್ಭಗಳನ್ನು[...] ನಿಭಾಯಿಸುವಷ್ಟು ಅನುಭವ ಛಾತಿ ಪ್ರಕಾಶ್‌ಗಿರಲಿಲ್ಲ[...] ಇನ್ನು ದಿಗಿಲಾಗಿ ಕುಮಾರಸ್ವಾಮಿ ಗುಂಪು ಹೀಗೆ[...] ತಮ್ಮ ಕಾಲೆಳೆಯಬಹುದೆಂಬ ಕಲ್ಪನೆಯೂ ಪ್ರಕಾಶ್‌ಗಿರ[...] ಲಿಲ್ಲ. ತಮ್ಮ ರಾಜಕೀಯ ಜೀವನದ ಮೊದಲ 20[...] ವರ್ಷಗಳನ್ನು ಹಡಗಲಿಯಲ್ಲೇ ಕಳೆದ ಪ್ರಕಾಶ್‌ರಲ್ಲಿ[...] ಸಜ್ಜನಿಕೆಯ ಪ್ರಮಾಣ ಜಾಸ್ತಿ ಇದೆ. ಆದರೆ ಅಧಿಕಾರ[...] ರಾಜಕಾರಣಕ್ಕೆ ಬೇಕಾದ ತಂತ್ರ, ಪಿತೂರಿ, ಸುಳ್ಳು[...] ವಂಚನೆಗಳ ಪಾಠವನ್ನು ಅವರು ಕರಗತ ಮಾಡಿಕೊಂಡಿ[...] ರಲಿಲ್ಲ, ಸ್ವಲ್ಪ ನಿಷ್ಠೂರವಾಗಿ ಹೇಳಬೇಕೆಂದರೆ ದೇವೇ[...] ಗೌಡರ ಪಾಳೇಪಟ್ಟಿನಲ್ಲಿ ಪ್ರಕಾಶ್ ತಮ್ಮನ್ನು, ತಮ್ಮ[...] ಸ್ಥಾನಮಾನವನ್ನು assert ಮಾಡಿಕೊಳ್ಳಲೇ ಇಲ್ಲ[...] ಪ್ರಕಾಶ್ ನೋಡನೋಡುತ್ತಿದ್ದಂತೆಯೇ ಗೌಡರು[...] ಬಳ್ಳಾರಿಯಲ್ಲಿ ಸೂರ್ಯನಾರಾಯಣ ರೆಡ್ಡಿಯನ್ನು ಪ್ರಕಾಶ್[...] ವಿರುದ್ಧ ಪರ್ಯಾಯ ನಾಯಕನಾಗಿ ಬೆಳೆಸಿದ್ದರು. ಸ್ಥಳೀಯ[...] ಸಂಸ್ಥೆ ಚುನಾವಣೆಗಳು ಘೋಷಣೆಯಾದ ಕೂಡಲೇ[...] ಪ್ರಕಾಶ್‌ರನ್ನು ರಾಜ್ಯ ಜೆಡಿಎಸ್ ಅಧ್ಯಕ್ಷ ಸ್ಥಾನದಿಂದ[...] ಕಿತ್ತೊಗೆದ ಗೌಡರು ಮೀರಾಜುದ್ದೀನ್ ಪಟೇಲರನ್ನು[...] ತಂದು ಕೂರಿಸಿದರು.

ಪ್ರಕಾಶ್ ಆಗಲೂ ಪ್ರತಿಭಟಿಸಲಿಲ್ಲ, ಇಂಥ ವಿಚಾರ[...] ಬಂದರೆ ಪ್ರಕಾಶ್‌ಗಿಂತ ಜೆ.ಎಚ್. ಪಟೇಲ್ ಗೌಡ[...] ಎದುರು ಕಡ್ಡಿ ತುಂಡು ಮಾಡಿದಂತೆ ಮಾತಾಡಬಲ್ಲವರ[...] ಗಿದ್ದರು. ಅನಿವಾರ್ಯ ಎನಿಸಿದಾಗ ಪಟೇಲರು ಲಿಂಗಾ[...] ಯತ ಜಾತಿ ಲಾಬಿಯನ್ನು ಮಾಡಿ ಗೌಡರ ಆರ್ಭಟ[...] ಕಡಿವಾಣ ಹಾಕಿದ್ದರು. ಆದರೆ ಪ್ರಕಾಶ್ ಜಾ[...] ರಾಜಕಾರಣದ ಚೌಕಟ್ಟಿನಲ್ಲಿ ಎಂದೂ ಇರಬಯಸಲಿಲ್ಲ[...]

ಮೊನ್ನಿನ ಪ್ರಕಾಶ್ ಪ್ರಯತ್ನವನ್ನು ಗೌಡರ ವಿರುದ್ಧ[...] ಬಂಡಾಯ ಎಂದೇ ಊಹಿಸುವುದಾದರೂ ಅದ[...] ತಕ್ಕ ಸಿದ್ಧತೆ ಪ್ರಕಾಶರಲ್ಲಿ ಇರಲಿಲ್ಲ, ಇಂಥ ಸಂದರ್ಭವನ್ನು[...] ಯಶಸ್ವಿಯಾಗಿ ನಿಭಾಯಿಸಲು ಅಪಾರ ಚಾಕಚಕ್ಯತೆ[...] ಹತ್ತಾರು ಕೋಟಿ ಹಣ, ಮುಂದಾಲೋಚನೆ ಎಲ್ಲಾ[...] ಬೇಕಾಗುತ್ತದೆ.

ಪ್ರಕಾಶ್ ಆ ದಿಕ್ಕಿನಲ್ಲಿ ಯೋಚಿಸಲಿಲ್ಲ, ಅದ[...] ಬದಲಾಗಿ ಗೌಡರ ಶತ್ರುಗಳಾದ ಡಿ.ಕೆ. ಹಾಗೂ[...] ಸಿದ್ಧರಾಮಯ್ಯ ಜೊತೆ ಮಾತನಾಡಲು ಶುರು[...]

▸▸ ▸▸ ▸

ಕಾಂಗೈಗಳ ಸಿಎಂ ಕನಸು ಭಗ್ನ



ಹೇಳಿದರೆ ನಿಮಗೆ ನಗು ಬರಬಹುದು....

ಪ್ರಕಾಶ್ ದೆಹಲಿಗೆ ಹೋಗಿ ಕಾಂಗ್ರೆಸ್ ಜೊತೆ ಮಾತಾಡಿ ಬರುತ್ತಾರೆ ಎಂದು ಗೊತ್ತಾದ ತಕ್ಷಣ ಇತ್ತ ಬೆಂಗಳೂರಿನ ಕಾಂಗ್ರೆಸ್ ಪಾಳೆಯದಲ್ಲಿ ಹೊಡೆದಾಟ ಶುರುವಾಗುವ ಹಂತ ಬಂದಿತ್ತು.


ಯಾಕೆ ಗೊತ್ತಾ?

ಮುಖ್ಯಮಂತ್ರಿ ಪಟ್ಟ ಯಾರಿಗೆಂಥ!

ಕರ್ನಾಟಕದ ಪಾಲಿನ ಕಾಯಂ ಶನಿ ಎಸ್.ಎಂ. ಕೃಷ್ಣ ನಾಚಿಕೆ ಮರ್ಯಾದೆ ಎಲ್ಲಾ ಬಿಟ್ಟು ಕಳೆದ ಮಂಗಳವಾರ ರಾತ್ರಿ ಬೆಂಗಳೂರಿಗೆ ಬಂದಿಳಿದವನು ಶನಿವಾರ ರಾತ್ರಿವರೆಗೂ ಇಲ್ಲೇ ಇದ್ದ, ತಾನೇ ಸಿಎಂ ಆಗುವಂತೆ ಲಾಬಿ ಮಾಡುತ್ತಿತ್ತು ಈ ಮೂರ್ಖ ಆಕೃತಿ. ಮತ್ತೊಂದೆಡೆ ಮಾರ್ಗರೆಟ್ ಆಳ್ವರಂತಹ ಕೆಲಸಕ್ಕೆ ಬಾರದ ನಾಯಕಿಗೂ ಮುಖ್ಯಮಂತ್ರಿ ಕುರ್ಚಿಯ ವ್ಯಾಮೋಹ ಹುಟ್ಟಿಕೊಂಡಿತ್ತು. ಪ್ರಕಾಶ್ ಪ್ರಯತ್ನ ನೆರವೇರಲಿ ಅಂತ ಕನಸು ಕಾಣುತ್ತಿದ್ದ ಆಳ್ವ ಯಾವ ಹಂತಕ್ಕೆ ಹೋಗಿದ್ದರೆಂದರೆ ಚೀನಾದಲ್ಲಿದ್ದ ಸೋನಿಯಾರನ್ನು ಕಷ್ಟಪಟ್ಟು ಸಂಪರ್ಕಿಸಿ 'ಈ ಮೈತ್ರಿಗೆ ಒಪ್ಪಿಕೊಳ್ಳಿ ಮೇಡಂ' ಅಂತಲೂ ವಿನಂತಿಸಿದ್ದರು. ಆದರೆ ಸೋನಿಯಾ 'ಅದು ಸಾಧ್ಯವಿಲ್ಲ' ಅಂತ ಒಂದೇ ಮಾತಲ್ಲಿ ಗದರಿಸಿ ಹೇಳಿದಾಗ ಆಳ್ವ ಬಾಯಿ ಮುಚ್ಚಿಕೊಂಡಿದ್ದಾರೆ.


ಇದೆಲ್ಲಕ್ಕಿಂತ ಘೋರ ತಮಾಷೆ ಅಂದರೆ ಖರ್ಗೆದು.

'ನಾನು ಸಿಎಂ ಅಭ್ಯರ್ಥಿ ಅಂತ ಕಾಂಗ್ರೆಸ್ನ್ನು, ಜೆಡಿಎಸ್‌ನವರ್‍ಯಾರು ಹೇಳ್ತಿಲ್ಲಾ. ಅದು ಹಾಳಾಗಲಿ ಈ ಪೇಪರ್‌ನವರೂ ನನ್ನ ಹೆಸರು ಬರೀತಿಲ್ವಲ್ಲಾ' ಅಂತ ಕೊರಗುತ್ತಿದ್ದರಂತೆ... ಪ್ರಕಾಶ್ ಹತ್ತಿರ!



ಅಧಿಕಾರದಾಹ, ಮಾನಗೇಡಿ ವರ್ತನೆಗಳಿಗೆ ಕಾಂಗ್ರೆಸ್ಸೂ ಹೊರತಲ್ಲ, ಇಷ್ಟಕ್ಕೂ ಕರ್ನಾಟಕ ಕಾಂಗ್ರೆಸ್ ಈಗ ನರಸತ್ತ ಪಾರ್ಟಿ. ವಿರೋಧ ಪಕ್ಷವಾಗಿ ನಯಾಪೈಸೆಯಷ್ಟೂ ಕೆಲಸ ಮಾಡದ ಧರಂಸಿಂಗ್ ಹಾಗೂ ಖರ್ಗೆ ಜೋಡಿಯನ್ನು ನೆಚ್ಚಿಕೊಂಡರೆ ಮುಂದಿನ ಎಲೆಕ್ಷನ್‌ನಲ್ಲಿ ಕಾಂಗ್ರೆಸ್ ಕಡೆ ಜನ ತಿರುಗಿಯೂ ನೋಡುವುದಿಲ್ಲ, ಇನ್ನು ಡಿ.ಕೆ. ಮುಂತಾದವರಿಗೆ ಎಸ್.ಎಂ. ಕೃಷ್ಣನಂಥ ಖದೀಮರೇ ನಾಯಕರಾಗಿ ಬರಲಿ ಎಂಬ ನಿಲುವಿದೆ. ಸಿದ್ಧರಾಮಯ್ಯ ಬಾಯಿ ತೆಗೆದು ಮಾತಾಡಲೂ ಹೆದರುತ್ತಿದ್ದಾರೆ.

ಕಾಂಗ್ರೆಸ್ ಉದ್ಧಾರ ಆಗುತ್ತಾ ಅಂತಾ?



ಮೂರೂ ಬಿಟ್ಟವರಿಂದ ರಾಜ್ಯದ ತಿಥಿ!

ಜಾತ್ಯತೀತ ದಳ ಹಾಗೂ ಬಿಜೆಪಿ ಈಗ ನಾಚಿಕೆ, ಮಾನ, ಮರ್ಯಾದೆ ಮೂರು ಬಿಟ್ಟವರಾಗಿದ್ದಾರೆ.

ರಾಜ್ಯ ರಾಜಕೀಯ ಮನರಂಜನೆಯ ಹಂತ ದಾಟಿದೆ. ಇನ್ನೇನಿದ್ದರೂ ನಂಬಿಸಿ ಕುತ್ತಿಗೆ ಕುಯ್ಯುವುದು, ಹಸಿ ಸುಳ್ಳು, ವಂಚನೆಗಳ ರಾಜಕೀಯ ಮಾತ್ರ.

ದೇವೇಗೌಡ ಇದರ ರೂವಾರಿ.

ಈಗಿನ ಬಿಜೆಪಿ-ಜೆಡಿಎಸ್‌ನ ಹೊಸ ಅವಕಾಶವಾದಿ ಮೈತ್ರಿಯ ಕರ್ನಾಟಕದ ತಿಥಿ ಮಾಡಿ ಮುಗಿಸುವುದೂ ಅಷ್ಟೇ ಖಚಿತ. 'ಕಾಂಗ್ರೆಸ್‌ನವರು ದಳ ವಿಭಜಿಸಲು ಮತ್ತೆ ಪಿತೂರಿ ಮಾಡಿದ ಕಾರಣ ಪಕ್ಷ ಉಳಿಸಿಕೊಳ್ಳಲು ಅನಿವಾರ್ಯವಾಗಿ ಪುನಃ ಬಿಜೆಪಿಗೆ ಬೆಂಬಲ ಕೊಟ್ಟು ಸರ್ಕಾರ ರಚಿಸುತ್ತಿದ್ದೇವೆ' ಎಂದು ಗೌಡ-ಕುಮಾರಸ್ವಾಮಿ ಜೋಡಿ ಎಷ್ಟೇ ಬೊಂಬಡ ಬಜಾಯಿಸಿದರೂ ಜನ ಇನ್ನು ಇವರನ್ನು ನಂಬುವುದಿಲ್ಲ.

ಏಕೆಂದರೆ ದಳ ವಿಭಜಿಸಲು ಕೇವಲ ಕಾಂಗ್ರೆಸ್ ಮಾತ್ರವಲ್ಲ, ಬಿಜೆಪಿಗಳೂ ಪ್ರಯತ್ನಿಸಿದ್ದರೆಂಬುದು ಜನರಿಗೆ ಗೊತ್ತಿದೆ. ದೇವೇಗೌಡರ ಪ್ರತಿಕೃತಿಗೆ ಚಪ್ಪಲಿ ಹಾರ ಹಾಕಿ, ಬೆಂಕಿ ಹಚ್ಚುತ್ತಾ ಬಿಜೆಪಿಗಳು ದೊಂಬಿ ನಡೆಸುತ್ತಿದ್ದಾಗ ಇದೇ ಸದಾನಂದಗೌಡ ಹೇಳಿದ್ದೇನು?

"ಗೌಡರ ಕುಟುಂಬ ಬಿಟ್ಟು ಜೆಡಿಎಸ್ ಶಾಸಕರು ಹೊರಬಂದರೆ ಈಗಲೂ ಸರ್ಕಾರ ರಚಿಸಲು ಬಿಜೆಪಿ ರೆಡಿ ಇದೆ" ಎಂದು. ಇದು ದಳ ವಿಭಜಿಸುವ ಪಿತೂರಿಯಾಗಿ ಗೌಡರಿಗೆ ಯಾಕೆ ಕಾಣಲಿಲ್ಲ?

'ದೇವೇಗೌಡ ಒಬ್ಬ ಭಸ್ಮಾಸುರ' ಅಂತ ವೆಂಕಯ್ಯನಾಯ್ಡು ಬೊಚ್ಚು ಬಾಯಲ್ಲಿ ಹೇಳಿದ್ದನ್ನು ಯಾರಿಗೆ ತಾನೆ ಮರೆತು ಹೋಗಿರುತ್ತೆ? ಅಂತ ಭಸ್ಮಾಸುರ ಈಗ ಬಿಜೆಪಿಗೆ ಆಪತ್ಬಾಂಧವನಂತೆ ಕಾಣುತ್ತಾನೆಂದರೆ?

'ಕುಮಾರಸ್ವಾಮಿಯಂಥ ಮಗ ಯಾವ ತಂದೆ-ತಾಯಿಗೂ ಹುಟ್ಟಬಾರದು' ಎಂದು ಇಡೀ ಜಗತ್ತಿಗೇ ಕೇಳಿಸುವಂತೆ ಚೀರಿಕೊಂಡಿದ್ದ ಯಡ್ಡಿಗೆ ಈಗ ಅದೇ ಕುಮಾರಸ್ವಾಮಿ ಸನ್ಮಾರ್ಗಿ ಪುತ್ರನಂತೆ ಭಾಸವಾಗಿಬಿಟ್ಟದೆ. ನಿರ್ಲಜ್ಜ ಕುಮಾರಸ್ವಾಮಿ 'ಯಡಿಯೂರಪ್ಪ ನನ್ನ ತಂದೆ ಸಮಾನ' ಎನ್ನುತ್ತಿದ್ದಾರೆ.

ಈ ಎಲ್ಲಾ ಸುಳ್ಳು, ಸ್ವಹಿತಾಸಕ್ತಿ ನಾಟಕಗಳ ಹಿಂದೆ ಇರುವ ದುರುದ್ದೇಶ ಒಂದೇನೆ.

ಅದು ಯಾವ ಶಾಸಕರಿಗೂ ಈಗ ಚುನಾವಣೆ ಬೇಕಿಲ್ಲ ಅನ್ನುವುದು ಒಂದು ಮಾಮೂಲಿ ಕಾರಣ ಅಷ್ಟೆ. ಅದಕ್ಕೂ ಮೀರಿದ ಬೇರೆ ವಿಚಾರಗಳೂ ಇದರಲ್ಲಿವೆ.

ಅಪೂರ್ಣ ಡೀಲ್‌ಗಳು

20 ತಿಂಗಳ ಕೋ-ಜಾ ಸರ್ಕಾರದ ಆಡಳಿತದಲ್ಲಿ ಕರ್ನಾಟಕದ ಈ ಹಿಂದಿನ ಯಾವ ಸರ್ಕಾರಗಳೂ ಮಾಡಿರದಷ್ಟು ಭ್ರಷ್ಟಾಚಾರ ನಡೆದಿದೆ. ಸಾವಿರಾರು ಕೋಟಿ ರೂ.ಗಳ ಲ್ಯಾಂಡ್ ಡೀಲ್‌ಗಳು, ಬಿಡದಿಯ 60 ಸಾವಿರ ಕೋಟಿಯ DLF ಟೌನ್‌ಶಿಪ್, ನೈಸ್ ಕಂಪನಿ ವಿವಾದ, ಅಶೋಕ್, ಕಟ್ಟಾ ನಾಯ್ಡು ಬಾಲಕೃಷ್ಣೇಗೌಡನ ಅಕ್ರಮ ನೋಟಿಫಿಕೇಷನ್ ದಂಧೆಗಳು, ಈಶ್ವರಪ್ಪನ ನೀರಾವರಿ ಯೋಜನೆಗಳ ಡೀಲ್‌ಗಳು, ಚೆಲುವರಾಯ ಸ್ವಾಮಿಯ ಬಸ್ ಖರೀದಿ ಪರ್ಸೆಂಟೇಜ್ ವ್ಯವಹಾರಗಳು.... ಇವೆಲ್ಲಾ ಸೇರಿದರೆ ಅರ್ಧ ಲಕ್ಷ ಕೋಟಿಯ ವ್ಯವಹಾರ.

ಇದನ್ನು ಮೀರಿ ಗೌಡರಿಗಿದ್ದ ಭೀತಿ ಜನಾರ್ದನ ರೆಡ್ಡಿಯ ಗಣಿ ಲಂಚದ ಕೇಸು. ಇದು ಇಂದಲ್ಲಾ ನಾಳೆ ಕುಮಾರಸ್ವಾಮಿ ಹಾಗೂ ಚೆನ್ನಿಗಪ್ಪನನ್ನು ಕೋರ್ಟಿಗೆ ಎಳೆದೊಯ್ದು ನಿಲ್ಲಿಸುವ ಭೀತಿ ಗೌಡರನ್ನು ಕಾಡುತ್ತಿದೆ. ಹಾಗಾಗಿ ಬೇರೆ ಯಾರೇ ಶಾಸಕನಿಗಿಂತಲೂ ಗೌಡರಿಗೇ ಬಿಜೆಪಿ ಜೊತೆಗಿನ ಸರ್ಕಾರ ರಚನೆಯಾಗುವುದು ಬೇಕಿತ್ತು.

ಬಿಜೆಪಿ ಜೊತೆಗೇ ಯಾಕೆಂದರೆ ಈ ಅಪೂರ್ಣ ಡೀಲ್‌ಗಳಲ್ಲಿ ಬಿಜೆಪಿಗಳದ್ದೂ ಪಾತ್ರವಿದೆ. ಲಂಚದ ಹಣ ಇಬ್ಬರಲ್ಲೂ ಹಂಚಿಕೆಯಾಗಬೇಕಿದೆ. ಅದಕ್ಕಿಂತ ಮುಖ್ಯವಾಗಿ ಇವರ ಭ್ರಷ್ಟಾಚಾರದ ಜುಟ್ಟು ಜನಿವಾರಗಳೆಲ್ಲಾ ಪರಸ್ಪರರ ಕೈಲಿವೆ. ಹಾಗೊಂದು ವೇಳೆ ಈ ಪಕ್ಷಗಳ ಕದನ ತಾರಕಕ್ಕೇರಿಬಿಟ್ಟದ್ದರೆ ಕೆಲವಾದರೂ ಹೊರಬರುತ್ತಿದ್ದವು.

ಅದರಿಂದ ಎರಡೂ ಪಕ್ಷಗಳಿಗೆ ಹಾನಿಯಾಗುತ್ತಿತ್ತು. ಈಗ ಇಂಥ ರಗಳೆಯೇ ಬೇಡವೆಂದು ಮರುಮೈತ್ರಿಯಾಗುತ್ತಿದೆ.

ಇದೊಂತರ ಕಳ್ಳರು ಕಳ್ಳರು ಸೇರಿ ಸಂತೆ ನಡೆಸಿದಂತೆ.

ಕಾಂಗ್ರೆಸ್ ವಂಚಕರು

ಅಧಿಕೃತ ವಿರೋಧ ಪಕ್ಷವಾಗಿರುವ ಕಾಂಗ್ರೆಸ್ ರಾಜ್ಯದ ಜನತೆಗೆ ಮಾಡುತ್ತಿರುವ ವಂಚನೆ ದಳ-ಬಿಜೆಪಿಗಳ ವಂಚನೆಗಿಂತ ಏನೂ ಕಡಿಮೆ ಇಲ್ಲ. ಕಳೆದ 20 ತಿಂಗಳಲ್ಲಿ 'ಲಂಕೇಶ್' ಕನಿಷ್ಠ 50 ದೊಡ್ಡ ಭ್ರಷ್ಟಾಚಾರದ ಹಗರಣಗಳನ್ನು ಬಯಲು ಮಾಡಿದೆ. ಅಂತ ವರದಿಗಳು ಪ್ರಕಟವಾದ ನಂತರ ಪತ್ರಿಕೆ ಕಚೇರಿಗೆ ಬಂದು ದಾಖಲೆಗಳನ್ನು ತೆಗೆದುಕೊಂಡು ಹೋದ ಕಾಂಗ್ರೆಸ್ ಲೀಡರ್‌ಗಳಲ್ಲಿ ಒಬ್ಬರೂ ಸೆಷನ್‌ನಲ್ಲಿ ಮಾತನಾಡಿಲ್ಲ. ವಿಧಾನಸೌಧದಲ್ಲಾಗಲೀ ಸಾರ್ವಜನಿಕವಾಗಲಿ ಕೋ-ಜಾ ಸರ್ಕಾರದ ದುಷ್ಟತನ, ಭ್ರಷ್ಟಾಚಾರಗಳ ಬಗ್ಗೆ ಒಮ್ಮೆಯೂ ದನಿ ಎತ್ತಲಿಲ್ಲ. ಇಂಥ ಆಡಳಿತ ಪಕ್ಷ-ವಿರೋಧ ಪಕ್ಷಗಳಿದ್ದರೆ ಕರ್ನಾಟಕದ ತಿಥಿಯಾಗದೆ ಇನ್ನೇನಾಗಲು ಸಾಧ್ಯ ಹೇಳಿ?

ಯಡ್ಡಿ ಹಾದಿ ಇನ್ನೂ ದೂರ

ಯಡ್ಡಿಗೆ ಈಗ ದಳ ಶಾಸಕರ ಬೆಂಬಲ ಪತ್ರ ಸಿಕ್ಕಿದ್ದರೂ ಕಾಂಗ್ರೆಸ್ ಮನುಷ್ಯ ರಾಜ್ಯಪಾಲ ಠಾಕೂರ್ ಅಷ್ಟು ಸುಲಭವಾಗಿ ಯಡ್ಡಿಗೆ ಸಿಎಂಗಿರಿ ಅವಕಾಶ ಕಲ್ಪಿಸಿಕೊಡುವಂತೆ ಕಾಣುತ್ತಿಲ್ಲ. ಪ್ರಕಾಶ್ ಬಣದವರು ಇಂದಲ್ಲಾ ನಾಳೆ ರಾಜ್ಯಪಾಲರಿಗೆ 'JDLP ಸಭೆ ನಿರ್ಣಯ ಅಸಿಂಧು...' ಎಂದು ಪತ್ರ ನೀಡುತ್ತಾರೆ. ಈ ನಡುವೆ ಕಾಂಗ್ರೆಸ್ ಶಾಸಕರು ಪ್ರಕಾಶ್‌ರ ಸರ್ಕಾರ ರಚನೆ ಪ್ರಯತ್ನಕ್ಕೆ ಬಾಹ್ಯ ಬೆಂಬಲ ನೀಡುವುದಾಗಿ ಹೇಳುತ್ತಿದ್ದಾರೆ. ಸಿದ್ಧರಾಮಯ್ಯ ಬಣ ಪ್ರಕಾಶ್ ಬೆನ್ನಿಗಿದೆ.

ಬಿಜೆಪಿಗೆ ಅವಕಾಶ ಕೊಡಕೂಡದು ಎಂದು ಕಾಂಗ್ರೆಸ್ ಹಠ ತೊಟ್ಟರೆ ಯಡ್ಡಿ ಹಾದಿಯಲ್ಲಿ ಕೆಲವಾದರೂ ಅಡೆತಡೆಗಳು ಬರಬಹುದು. ಆದರೆ ಈಗಿನ ಪ್ರಶ್ನೆ ಅದಲ್ಲ, ಕಾಂಗ್ರೆಸ್ ಈಗಲಾದರೂ ಅಸಲಿ ವಿರೋಧ ಪಕ್ಷದಂತೆ ವರ್ತಿಸಬೇಕಿದೆ. ಕೋ-ಜಾ ಸರ್ಕಾರದ ವಿರುದ್ಧ ಮಾತಾಡದಂತೆ ಕೆಲ ಕಾಂಗ್ರೆಸ್ ನಾಯಕರಿಗೆ ಗೌಡರಿಂದ ಹಣ ಸರಬರಾಜಾಗುತ್ತಿದೆ ಎಂದು ಗಾಳಿಸುದ್ದಿ ಇದೆ.

ಕರ್ನಾಟಕವನ್ನು ಹುರಿದು ಮುಕ್ಕಲು ದೇವೇಗೌಡ ಮತ್ತವರ ಮಕ್ಕಳು ಮತ್ತೊಮ್ಮೆ ತಯಾರಾಗಿ ನಿಂತಿದ್ದಾರೆ. ದೇಶಭಕ್ತ ಬಿಜೆಪಿಗಳೂ ಈ ಲೂಟಿಯಲ್ಲಿ ಹಿಂದೆ ಬೀಳುವುದಿಲ್ಲ.

ಈಗಿನ ಹೊಸ ಮೈತ್ರಿಯ ಅರ್ಥ ಇಷ್ಟೆ.


–ಬಿಳಿದಾಳೆ ಈಶ

ಈ ಚಂಡಾಳ ನನ್ ಮನೆತನ ತೆಗೀತಾನೆ!

ಚೆಲುವರಾಯಸ್ವಾಮಿ ಕುರಿತಂತೆ ಎಂ.ಪಿ. ಪ್ರಕಾಶ್‌ಗೆ ಈ ಮಾತು ಹೇಳಿದ್ದು ಬೇರೆ ಯಾರೂ ಅಲ್ಲ,

ದೇವೇಗೌಡ!!

ಒಪ್ಪಿಕೊಂಡಿದ್ದಂತ ಬಿಜೆಪಿಗೆ ಮುಖ್ಯಮಂತ್ರಿಗಿರಿ ಕೊಡದೆ ಜೆಡಿಎಸ್ ಸತಾಯಿಸುತ್ತಿದ್ದ ಅವಧಿಯಲ್ಲಿ ಜೆಡಿಎಸ್‌ನ ಬಹುತೇಕ ಶಾಸಕರಿಗೆ ತಳಮಳ ಆಗುತ್ತಿತ್ತು. ಅದು ಬೇರೆ ಇನ್ಯಾವ ಕಾರಣಕ್ಕೂ ಅಲ್ಲ, ಎಲ್ಲಿ ವಿಧಾನಸಭೆ ವಿಸರ್ಜನೆಯಾಗಿ ತಮ್ಮ ಶಾಸಕತ್ವಗಿರಿ ಮುಗಿದು ಹೋಗುತ್ತೋ ಎಂಬ ಭೀತಿಯಿಂದ. ಕುಮಾರಸ್ವಾಮಿ ರಾಜೀನಾಮೆ ಕೊಟ್ಟ ದಿನ ಸಂಜೆ ನಾಲ್ಕೂವರೆಗೆ ಮನೆಯಲ್ಲಿ ಸಭೆ ಸೇರಿದ್ದಾಗ ಗೌಡರು ಹೇಳಿದ್ದಿಷ್ಟೇ:



"ಕುಮಾರ, ಬೇಗ ಹೋಗಿ ಐದೂವರೆಯೊಳಗೆ ರಾಜ್ಯಪಾಲರಿಗೆ ರಾಜೀನಾಮೆ ಕೊಡು, ಇಲ್ಲಾ ಅಂದರೆ ಅವರು ಸರ್ಕಾರದ ವಜಾಕ್ಕೆ ರೆಕಮೆಂಡ್ ಮಾಡಿಬಿಡ್ತಾರೆ" ಅಂತ.

ಅವತ್ತು ಅಲ್ಲೇ ಇದ್ದ ಪ್ರಕಾಶ್ ಇನ್ನೇನು ಎಲ್ಲಾ ಮುಗೀತು, ಚುನಾವಣೆ ಗ್ಯಾರಂಟಿ ಅಂದುಕೊಂಡು ಮನೆಗೆ ಬಂದಾಗ ದೇಶಪಾಂಡೆ ಫೋನ್ ಮಾಡಿ 'ಚೆಲುವರಾಯ ಸ್ವಾಮಿಗೆ ಇದು ಒಪ್ಪಿಗೆ ಇಲ್ಲ. ಹಾಗಾಗಿ ಡಿ.ಕೆ.-ಸೋಮಣ್ಣನ ಜೊತೆ ಕೂತು ಪರ್ಯಾಯ ಸರ್ಕಾರದ ಪ್ಲಾನ್ ಮಾಡ್ತಿದ್ದಾನೆ' ಅಂತ ಮಾಹಿತಿ ಕೊಟ್ಟಿದ್ದರು.

ಈ ವಿಷಯ ಅದು ಹೇಗೋ ಗೌಡರಿಗೂ ಗೊತ್ತಾಯಿತು. ತಕ್ಷಣ ಪ್ರಕಾಶ್‌ಗೆ ಫೋನ್ ಮಾಡಿದ ಗೌಡರು "ಪ್ರಕಾಶ್, ಈ ಚಂಡಾಳ ಚೆಲುವರಾಯ ಸ್ವಾಮಿ ನನ್ ಮನೆತನ ತೆಗೆದು ಬಿಡ್ತಾನೆ. ನೀವು ಬೇಗ ಹೋಗಿ ಚೆಲುವರಾಯನ್ನು ಕಂಡು ಇದನ್ನು ನಿಲ್ಲಿಸಿ" ಅಂದಿದ್ದರು.

ಈಗೇನಾಗಿದೆ ನೋಡಿ

ಗೌಡರಿಂದ ಚಂಡಾಳ ಅನಿಸಿಕೊಂಡಿದ್ದ ಅದೇ ಚೆಲುವರಾಯಸ್ವಾಮಿ ಈಗ ಅದೇ ಗೌಡರ ಬಣದಲ್ಲಿ, ಕುಮಾರಸ್ವಾಮಿ ಪಕ್ಕದಲ್ಲೇ ಇದ್ದಾನೆ.

ಪ್ರಕಾಶ್ ದೂರವಾಗಿಬಿಟ್ಟಿದ್ದಾರೆ.

▶▶ ▶▶ ▶▶

ಮಾಡಿದರು. ಇವರು ಗೌಡರ ಕುಟುಂಬವನ್ನು ಬಿಟ್ಟು ಜೆಡಿಎಸ್ ಶಾಸಕರನ್ನು ಕರೆತನ್ನಿ ಎಂದು ಪ್ರಕಾಶ್ ಕಿವಿ ಕಚ್ಚಿದರು ಮತ್ತು ಈ ಸುದ್ದಿ ಮಾಧ್ಯಮಗಳಿಗೂ ತಲುಪುವಂತೆ ಮಾಡಿಬಿಟ್ಟರು. ಕಾಂಗ್ರೆಸ್ ಹೈಕಮಾಂಡ್ ಈ ರೀತಿ ಹೇಳಿ ಕಳಿಸಿರಲಿಲ್ಲ ಎಂಬುದನ್ನು ಪ್ರಕಾಶ್ ಅರ್ಥಮಾಡಿಕೊಳ್ಳಲಿಲ್ಲ.

ಇನ್ಯಾವಾದರೂ ಯಾವಾಗ ಪ್ರಕಾಶರ ಪ್ರಯತ್ನಗಳು ಬಾಲಿಶ ಆದವೋ ಜೆಡಿಎಸ್‌ನೊಳಗೇ ಉದ್ವಿಗ್ನತೆ ಜಾಸ್ತಿಯಾಯಿತು. ಅಮರೇಗೌಡ ಬಯ್ಯಾಪುರ, ಬಿ.ಸಿ. ಪಾಟೀಲ್, ಮಲ್ಲಿಕಾರ್ಜುನ ಖೂಬಾ, ರಾಜೂಗೌಡ, ಕೆ.ಎಂ. ರಾಜಣ್ಣ, ವಿಶ್ವನಾಥ ಪಾಟೀಲ ಹೆಬ್ಬಾರ್, ಸೂರ್ಯನಾರಾಯಣ ರೆಡ್ಡಿ, ಕೊಳ್ಳೇಗಾಲದ ಬಾಲರಾಜ್, ಸಾಗರದ ಗೋಪಾಲಕೃಷ್ಣ ಬೇಳೂರ್ ಧೈರ್ಯವಾಗಿ ಪ್ರಕಾಶ್ ಜೊತೆ ನಿಂತರು.



ಗಣಿ ಧಣಿ ಸಂತೋಷ್ ಲಾಡ್‌ನ ಸಹಕಾರ ಪ್ರಕಾಶ್‌ಗಿತ್ತು.

ಗೌಡರಿಗೆ ಗಾಬರಿ ತಂದಿದ್ದು ಇದೇನೆ!

ಒಂದು ವೇಳೆ ಪ್ರಕಾಶ್ ತಮ್ಮ ಪ್ರಯತ್ನದಲ್ಲಿ ಯಶಸ್ವಿಯಾಗಿ ಬಿಟ್ಟರೆ ಜೆಡಿಎಸ್‌ನಲ್ಲಿ ತಮ್ಮ ಪುತ್ರರತ್ನರಾದ ಕುಮಾರಸ್ವಾಮಿ ಹಾಗೂ ರೇವಣ್ಣ ಶಾಶ್ವತವಾಗಿ ಮೂಲೆಗುಂಪಾಗುತ್ತಾರೆಂದು ಗೌಡರಿಗೆ ಹೆದರಿಕೆಯಾಗಿತ್ತು, ಹಾಗಾಗಿ ನಿಂತ ಹೆಜ್ಜೆಯಲ್ಲೇ ಬಿಜೆಪಿ ಜೊತೆ ಮರುಮೈತ್ರಿಯ ತೀರ್ಮಾನ ತೆಗೆದುಕೊಂಡ ಗೌಡ ಇವತ್ತಿನ ರಾಜಕೀಯ ಬೆಳವಣಿಗೆಗಳಿಗೆ ಕಾರಣರಾಗಿದ್ದಾರೆ.

ಪ್ರಕಾಶ್ ಈಗ ಏಕಾಂಗಿ. ಅವರ ಜೊತೆ ಈ ಕ್ಷಣದಲ್ಲಿ ಎಂಟು ಜೆಡಿಎಸ್ ಶಾಸಕರಿರುವುದು ನಿಜ. ಜೊತೆಗೆ ಈಗಲೂ ತಾಂತ್ರಿಕವಾಗಿ ಜೆಡಿಎಸ್‌ನಲ್ಲಿರುವ ಸಿದ್ಧರಾಮಯ್ಯ ಬಣದ ಎಂಟು ಜನರ ಬೆಂಬಲವೂ ಪ್ರಕಾಶ್‌ಗಿದೆ. ಸ್ವತಂತ್ರ ಸದಸ್ಯರಾದ ವಾಟಾಳ್, ರಾಜೇಂದ್ರನ್, ಸಿಪಿಎಂನ ಶ್ರೀರಾಮರೆಡ್ಡಿ ಪ್ರಕಾಶ್ ಬೆಂಬಲಕ್ಕಿದ್ದಾರಾದರೂ ಈ ಗುಂಪು ಹೊಸ ಸರ್ಕಾರ ಅಸ್ತಿತ್ವಕ್ಕೆ ಬರುವುದನ್ನು ಬಹುಶಃ ತಡೆಯಲಾಗದು.

ಪ್ರಕಾಶ್ ದೆಹಲಿಗೆ ಹೋಗಿದ್ದಾಗ ಕಾಂಗ್ರೆಸ್‌ನಿಂದ 'ಈ ಮೈತ್ರಿ ಪ್ರಸ್ತಾಪವನ್ನು ಪರಿಶೀಲಿಸುತ್ತಿದ್ದೇವೆ' ಅಂತ ಒಂದೇ ಒಂದು ಹೇಳಿಕೆ ಬಂದಿದ್ದರೂ ಸಾಕಿತ್ತು. ಜೆಡಿಎಸ್‌ನ ಬಹುತೇಕ ಶಾಸಕರು ಪ್ರಕಾಶ್ ಜೊತೆಯಲ್ಲಿರುತ್ತಿದ್ದರು. ಆದರೆ ಕಾಂಗ್ರೆಸ್ ತಡ ಮಾಡಿತು ಅಥವಾ ಕಾಂಗ್ರೆಸ್‌ಗೆ ಇದ್ಯಾವುದೂ ಬೇಕಿರಲಿಲ್ಲವೆಂದು ಕಾಣುತ್ತದೆ.



ಬಿ.ಸಿ.ಪಾಟೀಲ್

ಪ್ರಕಾಶ್ ಇದನ್ನು ಅರ್ಥ ಮಾಡಿಕೊಳ್ಳದೆ ದುಡುಕಿದರಾ?

ಚುನಾವಣೆ ಬೇಡ, ಯಾರ ಜೊತೆಗಾದರೂ ಸರಿ ಸರ್ಕಾರ ರಚಿಸೋಣವೆಂದು ತೀರ್ಮಾನಿಸಿ ಪ್ರಕಾಶರನ್ನು ದೆಹಲಿಗೆ ಕಳುಹಿಸಿದ್ದ ಜೆಡಿಎಸ್ ಶಾಸಕರೇ ಈಗ ಕುಮಾರಸ್ವಾಮಿ ಜೊತೆ ಸೇರಿ ರೆಸಾರ್ಟ್ ಸೇರಿಕೊಂಡಿದ್ದಾರೆ.

ಈಗ ಹೇಳಿ

ಪ್ರಕಾಶ್ ಬೆನ್ನಿಗೆ ಇರಿದಿದ್ದು ಯಾರು?

ದೇವೇಗೌಡ? ಡಿ.ಕೆ.-ಸಿದ್ಧರಾಮಯ್ಯ? ಜೆಡಿಎಸ್ ಶಾಸಕರು? ಕಾಂಗ್ರೆಸ್ ಹೈಕಮಾಂಡ್?

ಒಂದರ್ಥದಲ್ಲಿ ಇವರೆಲ್ಲರೂ ಹೌದು!

ಆದರೆ ಪ್ರಕಾಶ್‌ರ ಈಗಿನ ಪರಿಸ್ಥಿತಿಯಿಂದ ಅತೀ ಲಾಭ ಸಿಗುವುದು ಗೌಡರ ಕುಟುಂಬಕ್ಕೆ ಮಾತ್ರ. ಪ್ರಕಾಶ್ ಥರದವರು ಪಾರ್ಟಿಲಿದ್ದರೆ ಅವರ ವರ್ಚಸ್ಸು, ವ್ಯಕ್ತಿತ್ವದೆದುರು ಏನೇ ಆದರೂ ಕುಮಾರಸ್ವಾಮಿ, ರೇವಣ್ಣ ಕುಬ್ಜರೇ ತಾನೇ?

ಗೌಡರ ಸೇಡು, ವಂಚನೆಗಳನ್ನು ಬಲ್ಲವರಿಗೆ ಈಗಲೂ ಒಂದು ಅನುಮಾನ ಇದೆ. ಅವರು ಬೇಕಂತಲೇ ಪ್ರಕಾಶ್ ದೆಹಲಿಗೆ ಹೋಗುವಂತೆ ಮಾಡಿ ಇತ್ತ ಬೆಂಗಳೂರಿನಲ್ಲಿ ಬಿಜೆಪಿ ಜೊತೆ ಬೇಕಾದ ರೀತಿ ವ್ಯವಹಾರ ಫೈನಲ್ ಮಾಡಿಕೊಂಡಿದ್ದಾರೆ ಅಂತ.

ಈಗ ಪ್ರಕಾಶರನ್ನು ಮೂಲೆಗೆ ತಳ್ಳಿ [illegible] ವಲ್ಲವೆ?

ಜೆಡಿಎಸ್ [illegible] ಆರೋಪ ಮಾಡಿ ಯಾವ ಅಧಿಕಾರವೂ [illegible] ಮಾಡಲಾ!

ನೀವೇ ಒಂದು ಸಾರಿ ಅಳೆದು ನೋಡಿ. ಜೆಡಿಎಸ್ [illegible] ಪ್ರಕಾಶ್ ಅನುಪಸ್ಥಿತಿಯಲ್ಲಿ [illegible]

[illegible] ಗೌಡರೆ?

ಕೋಟ್ಯಂತರ ರೂ. ಪಂಗನಾಮ ಹಾಕಿದ ದರ್ಶನಾಪುರ ಅಂಡ್ ಕಂಪನಿ

ಗುಲ್ಬರ್ಗಾ


ಮಾಜಿ ಕೃಷಿ ಮತ್ತು ಮಾರುಕಟ್ಟೆ ಮಂತ್ರಿ ದರ್ಶನಾಪುರ ಇಡೀ ಕರ್ನಾಟಕದ ಮಾರುಕಟ್ಟೆಗಳನ್ನು ಎಷ್ಟು ಸುಧಾರಿಸಿದನೋ ಬಿಟ್ಟನೋ? ಆದರೆ ಆತ ತನ್ನ 'ಹಣಕಾಸಿನ', 'ಆಸ್ತಿಯ' ಮಾರುಕಟ್ಟೆಯನ್ನು ಮಾತ್ರ ಯಾವ ಎಗ್ಗಿಲ್ಲದೆ ಬೆಳೆಸಿಕೊಂಡಿದ್ದಾನೆ. ಆತ ಮಾತ್ರವಲ್ಲ, ಆತನ ಸುತ್ತ ನೆರೆದ ಚಾಲಂಗೋಚಿಗಳಿಗೂ, ವಿರೋಧ ಪಕ್ಷಗಳೆಂಬ ಬಕಾಸುರರಿಗೂ ಇಂತಿಷ್ಟು ಎಂಜಲು ಹಾಕಿ ಗಪ್-ಚುಪ್ ಆಗುವಂತೆ ಮಾಡಿದ್ದಾನೆ.

ಸರಕಾರದ ದುಡ್ಡೆಂದರೆ, ಸರಕಾರದ ನಿವೇಶನಗಳೆಂದರೆ ಅವೆಲ್ಲ ತಮ್ಮ 'ಅಪ್ಪ ಅವ್ವಂದಿರು' ಗಳಿಸಿದ ಆಸ್ತಿಯೆಂದೇ ದರ್ಶನಾಪುರ ಭಾವಿಸಿದ್ದಾನೆ. ಹಾಗಾಗಿ ತನ್ನ ಮಂತ್ರಿಗಿರಿಯ ಅವಧಿಯ ಉದ್ದಕ್ಕೂ ದರ್ಶನಾಪುರ ಮಾಡಿದ್ದೆಂದರೆ ಕಬಳಿಕೆ, ಕಬಳಿಕೆ ಮತ್ತು ಕಬಳಿಕೆ.

ಇಡೀ ಕರ್ನಾಟಕದ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ಗೋಲಮಾಲ್‌ಗಳೇನೇ ಇರಲಿ, ದರ್ಶನಾಪುರನ ಮತಕ್ಷೇತ್ರವಾದ ಶಹಾಪುರದ ಮಾರುಕಟ್ಟೆಯ ಪ್ರಾಂಗಣ ಪ್ರವೇಶಿಸುತ್ತಿದ್ದಂತೆ ಗಬ್ಬುನಾಥ ಮೂಗಿಗೆ ಅಡರಿಕೊಳ್ಳುತ್ತದೆ. ಬಹುಶಃ ಈ ಗಬ್ಬು ವಾಸನೆ ನೋಡಿ ಹಂದಿಗಳೂ ಸಹ ಒಳಗೆ ಹೋಗಲು ಹೆದರುತ್ತವೆ.

ಹಣುಮಂತರಾಯ ಮಾಲಿ ಪಾಟೀಲ ಎಂಬ ದರ್ಶನಾಪುರನ ಚೇಲಾ ಹೆಸರಿಗೆ ಮಾತ್ರ ಈ ಕೃಷಿ ಮಾರುಕಟ್ಟೆಯ ಅಧ್ಯಕ್ಷ. ಇಲ್ಲಿ ನಡೆಯುವ ಕಾರುಬಾರಗಳನ್ನೆಲ್ಲ ನಿಯಂತ್ರಿಸುವವರು ಶರಣಬಸವಪ್ಪ ದರ್ಶನಾಪುರ, ಅವರ ತಮ್ಮ ಅಮರೇಶ್ ಮತ್ತು ಕಾಕ ಬಸವರಾಜಪ್ಪ ಮಾತ್ರ. ಉಳಿದ 12 ಜನ ಸದಸ್ಯರೂ ಹೆಸರಿಗೆ ಮಾತ್ರ ಸದಸ್ಯರಾಗಿದ್ದಾರೆ. ಮಂತ್ರಿ ಮಹಾಶಯರು ಯಾವ ಜಾಗ ತೋರಿಸುತ್ತಾರೋ ಅಲ್ಲಿ ಸಹಿ ಮಾಡಿ ಎದ್ದು ಹೋಗುವುದಷ್ಟೇ ಅವರೆಲ್ಲರ ಜವಾಬ್ದಾರಿ. ಹೀಗಾಗಿ ಈ ಕಚೇರಿಗೆಂದೇ ಬಂದ ವಾಹನವೂ ದರ್ಶನಾಪುರನ ಕಾಕ ಬಸವರಾಜಪ್ಪನ ಮನೆಯ ಮುಂದೆ ರಾಜಾರೋಷವಾಗಿ ನಿಲ್ಲುತ್ತದೆ. ಆದರೆ ಅದಕ್ಕೆ ಬೇಕಾಗುವ ಡಿಸೇಲ್, ಡ್ರೈವರ್ ಪಗಾರ ಮಾತ್ರ ಮಾರುಕಟ್ಟೆಯ ಕಚೇರಿಯಿಂದ ರವಾನೆಯಾಗುತ್ತದೆ. ಇದು ಎಂದೋ ಒಂದು ದಿನದ ಕಥೆಯಲ್ಲ, ದಿನನಿತ್ಯದ ವ್ಯಥೆ!

ಕಲಬುರ್ಗಿ ಜಿಲ್ಲೆಯಲ್ಲಿಯೇ ಅತ್ಯಂತ ಶ್ರೀಮಂತ ತಾಲೂಕು ಶಹಾಪುರ.



ಇಲ್ಲಿನ ಭೂಮಿಗೆ ಬಂಗಾರದಷ್ಟು ಬೆಲೆ ಇದೆ. ಇದನ್ನು ಸರಿಯಾಗಿಯೇ ಮನಗಂಡ ದರ್ಶನಾಪುರ ಮತ್ತು ಕಂಪನಿ ಸರಕಾರದ ಎಷ್ಟು ಜಾಗಗಳಿವೆಯೋ ಅವನ್ನೆಲ್ಲ ಹೇಗಾದರೂ ಸೈ ಕಬಳಿಸಬೇಕು ಎಂದೇ ಹೊರಟಿವೆ. ಹೀಗೆ ಸ್ಕೆಚ್ ಹಾಕಿಯೇ ಕೃಷಿ ಮಾರುಕಟ್ಟೆಯ ಸುತ್ತ ಮುತ್ತ ಇರುವ ಸರಕಾರಿ ಜಾಗಗಳನ್ನು ಸರಕಾರದ ಯಾವ ನಿಯಮಗಳನ್ನೂ ಪಾಲಿಸದೆ ಅನಾಮತ್ತಾಗಿ ನುಂಗಿ ಹಾಕುವ ಕೆಲಸ ಭರದಿಂದ ನಡೆದಿದೆ. ಇದೇ ಅಕ್ಟೋಬರ್ 18 ರಂದು ಜರುಗಿದ ಕಚೇರಿಯ ತುರ್ತು ಸಭೆಯಲ್ಲಿ ತರಾತುರಿಯಲ್ಲಿ ಕೋಟ್ಯಂತರ ರೂಪಾಯಿ ಬೆಲೆಬಾಳುವ ಜಾಗವನ್ನು ಕೆಲವು ಸಾವಿರ ರೂಪಾಯಿಗಳಿಗೆ ಮಾರಾಟ ಮಾಡುವ ನಿರ್ಣಯ ಕೈಗೊಳ್ಳಲಾಗಿದೆ.

ಆದರೆ ಕಚೇರಿಯ ಅಧಿಕಾರದ ವ್ಯಾಪ್ತಿಗೆ ಬರುವ 179 ನಿವೇಶನಗಳನ್ನು ಒಮ್ಮಿಂದೊಮ್ಮೆಲೆ ಮಾರಾಟ ಮಾಡಲು ಹಲವಾರು ಅಡೆತಡೆಗಳಿವೆ ಎಂದು ಕಾರ್ಯದರ್ಶಿ ಸೂಚಿಸಿದರು. ಅದರಂತೆ ಕಳೆದ ಮಾರ್ಚ್ 13ರಂದು ನಡೆದ ಸಭೆಯಲ್ಲಿ ಠರಾವೊಂದನ್ನು ಹೊರಡಿಸಿ ನಿವೇಶನ ಹಂಚಿಕೆ ಮಾಡುವುದನ್ನು ಸದ್ಯಕ್ಕೆ ಕೈಬಿಡಲಾಗುವುದೆಂದು ಸರ್ವಾನುಮತದಿಂದ ತೀರ್ಮಾನಿಸಿದ್ದರು. ಆದರೂ ಮತ್ತೆ ಮುರಳಿ ಯತ್ನವ ಮಾಡು ಎಂಬಂತೆ ಈಗ ಕೆಲವು ನಿಯಮಗಳನ್ನೇ ಮಾರ್ಪಾಡು ಮಾಡಿ (ಕೆಲವು ಕಾಂಗ್ರೆಸ್ ಪಕ್ಷದ ಧುರೀಣರನ್ನು(?) ಸೇರಿಸಿಕೊಂಡು) ಕೋಟ್ಯಂತರ ರೂಪಾಯಿಗಳ ಸರಕಾರಿ ಆಸ್ತಿಯನ್ನು ಯಾವುದೇ ನಾಚಿಕೆ ಇಲ್ಲದೆ ತಿಂದು ತೇಗಿ ಸಾರಿಸಲು ಹೊರಟಿದ್ದಾರೆ.

ಹಾಗೊಮ್ಮೆ ಕೃಷಿ ಉತ್ಪನ್ನ ಮಾರುಕಟ್ಟೆಯ ನಿವೇಶನಗಳನ್ನು ಮಾರಲೇ ಬೇಕಾದಂತಹ ಪರಿಸ್ಥಿತಿ ಎದುರಾದಾಗಲೂ ಹಲವು ಮಾನದಂಡಗಳನ್ನು ಪಾಲಿಸಬೇಕಾಗುತ್ತದೆ. ಅವುಗಳಲ್ಲಿ ಅದನ್ನು ಕುರಿತ ಪತ್ರಿಕಾ ಪ್ರಕಟಣೆಯನ್ನು ಕೊಡುವುದು ಒಂದಾಗಿದೆ. ಅದನ್ನು ಪಾಪ ದರ್ಶನಾಪುರ ಚಾಚೂತಪ್ಪದೇ ಅನುಸರಿಸಿದ್ದಾರೆ. ಆದರೆ ಅವರು ಅವುಗಳನ್ನು ಪ್ರಕಟಿಸಿದ್ದಾದರೂ ಎಲ್ಲಿ? ಎಂದೂ ಪ್ರಿಂಟ್ ಆಗದ, ಜಾಹೀರಾತುಗಳಿದ್ದಾಗ ಮಾತ್ರ ಪ್ರಕಟವಾಗುವ 'ಗ್ರಿನೋಬಲ್ಸ್' ಹಾಗೂ 'ಸತ್ಯಕಾಮ' ಎಂಬ ಪತ್ರಿಕೆಗಳಲ್ಲಿ! ಇಂತಹ ಪತ್ರಿಕೆಗಳಲ್ಲಿ ಮಾರಾಟವನ್ನು ಕುರಿತು ಪ್ರಕಟಿಸುವ ಮೂಲಕ ಆ ವಿಷಯದ ಬಗ್ಗೆ ಶಹಾಪುರದ ಜನತೆಗೆ ಗೊತ್ತಾಗದಂತೆ ನೋಡಿಕೊಳ್ಳಲಾಗಿದೆ.

ಕೃಷಿ ಮಾರುಕಟ್ಟೆಯ ವ್ಯಾಪಾರಿಗಳಿಗೆ ನಿವೇಶನ ನೀಡಬೇಕು ಎಂಬ ನಿಬಂಧನೆಯೂ ಇದೆ. ಆದರೆ ಅದನ್ನು ಕಡೆಗಣಿಸಿ ವ್ಯಾಪಾರಿಗಳೇ ಅಲ್ಲದ ಬರೀ ಪುಢಾರಿಗಳೇ ಆಗಿರುವ ಜನ ಈ ನಿವೇಶನಗಳನ್ನು ಹಂಚಿಕೊಂಡಿದ್ದಾರೆ. ದರ್ಶನಾಪುರರ ಸಹೋದರ ಅಮರೇಶಗೌಡ ತನ್ನ ಹೆಸರಿನಲ್ಲೊಂದು ಪಡೆದಿದ್ದಾನಲ್ಲದೆ, ಅದು ಸಾಲದೆಂಬಂತೆ ತನ್ನ ಹೆಂಡತಿ ವಿಜಯಲಕ್ಷ್ಮಿ ಹೆಸರಿನಲ್ಲಿರುವ ಶರಬಲಿಂಗೇಶ್ವರ ಟ್ರೇಡರ್ಸ್ ಎಂಬ ಸಂಸ್ಥೆಗೂ ಶಹಾಪುರ-ಯಾದಗಿರಿಯ ಮುಖ್ಯ ರಸ್ತೆಯಲ್ಲಿರುವ ಜಾಗವನ್ನು ಲಪಟಾಯಿಸಿಕೊಂಡಿದ್ದಾನೆ.

ಗುರುನಾಥ ಟ್ರೇಡರ್ಸ್ ಹೆಸರಿನಲ್ಲಿ ಬಸವರಾಜಗೌಡ ಕಂಚಲಕವಿ, ಸಂಜೀವರೆಡ್ಡಿ ಬಿ.ಪಾಟೀಲ, ಬಲಭೀಮೇಶ್ವರ ಟ್ರೇಡಿಂಗ್ ಹೆಸರಿನಲ್ಲಿ ಕಂ.ಶ್ರೀಮತಿ ಸ್ನೇಹಲತಾ ರಾಯಪ್ಪಗೌಡ

ಹೊನ್ನಾಳದಲ್ಲೊಬ್ಬ ಲಫಂಗ ಸ್ವಾಮಿ

ಗುಲ್ಬರ್ಗಾ

ಬಿಸವಾದಿ ಶರಣರು ಬದುಕಿ-ಬಾಳಿದ, ಹೊಸದೊಂದು ಚರಿತ್ರೆಗೆ ಕಾರಣರಾದ ಕರ್ಮಭೂಮಿ ಇಂದು ನಕಲಿ ಶರಣರ-ಸ್ವಾಮಿಗಳ ಉಪಟಳದಿಂದ ತತ್ತರಿಸುತ್ತಿದೆ. ಹಿಂದಿದ್ದ ಯಾವುದೋ ಒಬ್ಬ ಐತಿಹಾಸಿಕ ಪುರುಷನಿಗೆ ತಗುಲಿಕೊಂಡು ಆತನ ಚರಿತ್ರೆಗೆ ಒಂದಿಷ್ಟು ಉಪ್ಪುಕಾರ ಹಚ್ಚಿ ಆತನನ್ನು ಮುಂದೆ ಮಾಡಿಕೊಂಡು ಈ ನಕಲಿ ಸ್ವಾಮಿಗಳು ನಡೆಸುವ 'ದಂಧೆ' ಬಹಳಷ್ಟು ಲಾಭದಾಯಕವಾಗಿರಬೇಕು. ಆದ್ದರಿಂದಲೇ ಇಂತಹ ಹಲವು ಸ್ವಾಮಿಗಳು ಇಲ್ಲಿ ಉದಯಿಸಿದ್ದಾರೆ.

ಈ ದಂಧೆಯಿಂದ ಹೇರಳವಾಗಿ ಬರುವ ಹಣ, ಕಾವಿ ಬಟ್ಟೆಯಿಂದ ಸಿಗುವ ಮರ್ಯಾದೆ, ಸ್ವಾಮಿಯೆಂಬ ಸ್ಥಾನದಿಂದ ಲಭ್ಯವಾಗುವ ಸಾಮಾಜಿಕ ಸ್ಥಾನಮಾನ.... ಇವೆಲ್ಲವೂ ಸುಲಭವಾಗಿ ಪ್ರಾಪ್ತಿಯಾಗುತ್ತವೆ ಎಂಬುದನ್ನು ಈ ನಕಲಿಗಳು ಅರಿತುಕೊಂಡಂತಿದೆ.


ಕಳೆದ ವಾರ 'ಲಂಕೇಶ್' ವಾರ ಪತ್ರಿಕೆಯಲ್ಲಿ ಪ್ರಕಟವಾದ 'ಕಲಬುರ್ಗಿಯ ಕವಲಗಿಯಲ್ಲೊಬ್ಬ ಕಚ್ಚೆ ಹರುಕ ಸ್ವಾಮಿ' ಎಂಬ ವರದಿಯನ್ನು ಗಮನಿಸುತ್ತಲೇ ನಕಲಿ ಸ್ವಾಮಿಗಳ ದೊಡ್ಡದೊಂದು ಪಟ್ಟಿಯನ್ನು ನಮ್ಮ ಪತ್ರಿಕೆಯ ಓದುಗರು ನೀಡಿದರು. ಅವರುಗಳಲ್ಲಿ ಸದ್ಯ ಜೇವರ್ಗಿ ತಾಲೂಕಿನ ಹೊನ್ನಾಳ ಗ್ರಾಮಕ್ಕೆ ವಕ್ಕರಿಸಿರುವ ಶನಿಸಂತಾನಿ 'ದೇವಪ್ಪ' ಉರ್ಫ್ 'ವಾಸುದೇವಸ್ವಾಮಿ'ಯ ಕಥಾನಕ ಇಲ್ಲಿದೆ.

ಚಿತ್ತಾಪುರ ತಾಲೂಕಿನ ಸೂಗೂರು ಗ್ರಾಮದ ಭೋಜಲಿಂಗನ ಕೃಪಾಕಟಾಕ್ಷದಿಂದ ಈ ಪುಣ್ಯಾತ್ಮ ಜನಿಸಿದನಂತೆ. ಅಯ್ಯಣ್ಣ ಪಾರ್ವತವ್ವ ದಂಪತಿಗಳ ಕುಲಪುತ್ರನಾದ ದೇವಪ್ಪ ಹುಟ್ಟುತ್ತಲೇ ಪವಾಡ ಪುರುಷ! ಮಗುವಾಗಿದ್ದಾಗಲಂತೂ ಇವನ ತಂದೆ-ತಾಯಿಗಳು ಭೋಜಲಿಂಗನ ಅಪ್ಪಣೆಯ ಮೇರೆಗೆ ಇಡೀ ರಾತ್ರಿ ಈತನನ್ನು ಹೊಳೆಯಲ್ಲಿ ತೆಪ್ಪದ ಮೇಲೆ ಬಿಟ್ಟು, ಆ ತೆಪ್ಪದ ನಾಲ್ಕು ಮೂಲೆಗಳಿಗೆ ಚೇಳುಗಳನ್ನು ಕಟ್ಟಿ ಬಿಟ್ಟಿದ್ದರಂತೆ. ಹೀಗೆ ಸುಮಾರು ಏಳು ತಿಂಗಳು ಮಾಡಿದರೂ ಮಗುವಿಗೆ ಯಾವುದೇ ಊನ ಆಗಲಿಲ್ಲವಂತೆ! ಇಂಥ ಹುಟ್ಟು ಪವಾಡ ಪುರುಷ ದೇವಪ್ಪ ಈಗ ವಾಸುದೇವಸ್ವಾಮಿಯಾಗಿ ಇಲ್ಲಿಗೆ ವಕ್ಕರಿಸಿದ್ದಾನೆ. ಈತನ ಸುತ್ತ ಇಂತಹ ಅಂತೆಕಂತೆಗಳನ್ನು ಸೃಷ್ಟಿಸಿದ ಮೇಲೆ ಜನ ಸುಮ್ಮನಿರುತ್ತಾರೆಯೇ? ಈಗ ಸುತ್ತಮುತ್ತಲಿನ ತಾಲೂಕಿನ ಜನರಷ್ಟೆ ಅಲ್ಲ, ದೂರದ ಸೊಲ್ಲಾಪುರ, ಮಿರಜ, ಬೀದರ, ಮುಂಬೈಗಳಿಂದಲೂ ಜನ ಗುಂಪುಗುಂಪಾಗಿ ಈತನಲ್ಲಿಗೆ ಹರಿದು ಬರುತ್ತಿದ್ದಾರೆ.

ಅದೊಂದು ಅಮಾವಾಸ್ಯೆಯ ರಾತ್ರಿ. ಬೇರೆ ಬೇರೆ ಊರುಗಳಿಂದ ಸಂಜೆ ಆಗುತ್ತಲೆ ಜನ ದೌಡಾಯಿಸಿ ಬರುತ್ತಿದ್ದರು. ಭೀಮಾನದಿಯ ದಂಡೆಗೆ ಆನಿಸಿ ಇರುವ ಈತನ ಆಶ್ರಮ ಒಳಹೊಕ್ಕು ನೋಡಿದರೆ ಅಲ್ಲಿ ಸರ್ವಧರ್ಮಗಳ ಸಂಗಮ ಆಗಿರುವಂತೆ ಎಲ್ಲಾ ಜಾತಿಯ ದೇವರುಗಳ ಫೋಟೋಗಳ ಸಂಗಮವೇ ಇತ್ತು. ಒಳ ಗದ್ದುಗೆಯತ್ತ ಇಣುಕಿಹಾಕಿದರೆ ಮುಸಲ್ಮಾನರ ದಾವಲ್ ಸಾಬ (ಗದ್ದುಗೆ), ಅಂಬಾಭವಾನಿ, ಸೌದತ್ತಿ ಯಲ್ಲವ್ವ, ಭೋಜಲಿಂಗ ಮುಂತಾದ ಫೋಟೋಗಳು ನೇತಾಡುತ್ತಿದ್ದವು. ಅವೆಲ್ಲವುಗಳ ನಡುವೆ ಕಲಬುರ್ಗಿಯ ಶರಣಬಸವ ಹಾಗೂ ಬಸವಣ್ಣನವರ ಭಾವಚಿತ್ರಗಳೂ ಇದ್ದವು. ಆದರೆ ಅವು ಕಸಿವಿಸಿ ಪಡುತ್ತಿರುವಂತೆ, ಹೇಗಾದರೂ ಈ ಪುಣ್ಯಾತ್ಮನ ಕೈಯಿಂದ ಪಾರು ಮಾಡಿಸಿ ಎಂದು ಅವಲತ್ತುಕೊಳ್ಳುತ್ತಿರುವಂತೆ ಭಾಸವಾಗುತ್ತಿತ್ತು.

ಹೊರಗಡೆ ಹಾಕಿದ್ದ ಮಂಚದ ಮೇಲೆ ಪವಡಿಸಿದ್ದ ವಾಸುದೇವ ಎಲೆಅಡಿಕೆ ತಂಬಾಕುಗಳನ್ನು ತಿನ್ನುತ್ತಾ ತನ್ನ ಬಾಜು ಉಗುಳುವುದಕ್ಕೆ ಇಟ್ಟುಕೊಂಡಿದ್ದ ಪೀಕದಾನಿಯಲ್ಲಿ ಉಗುಳುತ್ತಲೇ ಇದ್ದ. ಜನ ಮಾತ್ರ ಆತನ ಉಗುಳುವಿಕೆಯೂ ಒಂದು ಪವಾಡ ಎಂಬಂತೆ ಬೆರಗಾಗಿ ನೋಡುತ್ತ ಆತನ ಕೃಪಾಕಟಾಕ್ಷಕ್ಕೆ ಪಾತ್ರರಾಗಬೇಕೆಂದು ಕಾಯುತ್ತಿದ್ದರು.

ಕಳೆದ ವಾರ ನಾಗಲಿಂಗ ಎಂಬ ಮತ್ತೊಬ್ಬ ನಕಲಿ ಸ್ವಾಮಿ ಹೇಗೆ ಬೈಗುಳಗಳನ್ನೇ ಆಶೀರ್ವಾದವಾಗಿ ನೀಡುತ್ತಾನೆ ಎಂದು ವರದಿ ಮಾಡಿದ್ದೆವು. ಆದರೆ ಈ ವಾಸುದೇವನ ಸ್ಪೆಷಾಲಿಟಿ ಯಾವುದೆಂದರೆ: ತನ್ನ ಬಳಿ ಬರುವವರು ಯಾವ ಉದ್ದೇಶಕ್ಕಾಗಿ ಬಂದಿದ್ದಾರೆ? ಅವರು ಯಾವ ಊರಿನವರು? ಅವರ ಸಮಸ್ಯೆ ಏನಿದೆ? ಎಂಬುದನ್ನೆಲ್ಲ ಅವರಿಂದ ತಿಳಿಯದೆ ತಾನೇ ಗ್ರಹಿಸಿ ಅವರ ಸಮಸ್ಯೆಗಳಿಗೆ ಉತ್ತರಗಳನ್ನು ಹಾಡಿನ ರೂಪದಲ್ಲಿ ನೀಡುತ್ತಾನೆ ಎಂಬುದು.



ಆದರೆ ಇದೆಲ್ಲ ಎಷ್ಟು ನಿಜ ಎಂಬುದು ಈ ವರದಿಗಾರನ ಅನುಭವದಿಂದಲೇ ಗೊತ್ತಾಗುತ್ತದೆ.

ಸುಮಾರು 37 ವರ್ಷ ಹರೆಯದ ಈ ನಕಲಿ ಸ್ವಾಮಿಯ ಪಕ್ಕ ಕುಳಿತೆ. ಆದರೆ ನನ್ನ ಹೆಸರು, ನಾನು ಬಂದಿದ್ದ ಉದ್ದೇಶ, ಕಾರಣ ಯಾವುದೂ ಈ ನಕಲಿ ಸ್ವಾಮಿಯ ಅರಿವಿಗೆ ಬರಲೇ ಇಲ್ಲ. ನನಗೆ ಮದುವೆ ಆಗಿ 10 ವರ್ಷವಾಗಿ ಮಕ್ಕಳಾಗಿ ಎಂಟು ವರ್ಷಗಳಾಗಿದ್ದರೂ, ಬೇಕೆಂತಲೇ "ನನಗೆ ಮದುವೆಯಾಗಿ ಹತ್ತು ವರ್ಷ ಕಳೆದರೂ ಮಕ್ಕಳೇ

ದರ್ಶನಾಪುರ, ನವೀನ ಟ್ರೇಡರ್ಸ್, ಅಶೋಕರೆಡ್ಡಿ ಗೌಡಪ್ಪಗೌಡ ಗುಂಡಗುರ್ತಿ (ದರ್ಶನಾಪುರ ಸಂಬಂಧಿ), ಚಂದ್ರಶೇಖರ ರೆಡ್ಡಿ ಹಾರಣಗೇರಾ ಮತ್ತು ದೇವೀಂದ್ರಪ್ಪ ಕುಂಬಾರ (ಇವರಿಬ್ಬರು ದರ್ಶನಾಪುರನ ಚೇಲಾಗಳು) ಜಾಗಗಳನ್ನು ಪಡೆದಿದ್ದಾರೆ. ಇದನ್ನೆಲ್ಲ ನೋಡಿ ತಾಲೂಕು ಜನತಾದಳದ ಅಧ್ಯಕ್ಷನಾದ ಮಲ್ಲಣ್ಣ ಮುದ್ದಿ ಸುಮ್ಮನಿರುತ್ತಾನೆಯೇ? ಆತನೂ ಸೇರಿಗೆ ಸವ್ವಾಸೇರು ಎಂದು ವೀರೇಶ್ವರ ಟ್ರೇಡರ್ಸ್‌ನ ಶ್ರೀಮತಿ ಸುನಂದ ಹೆಸರಿನಲ್ಲಿ ಜಾಗವನ್ನು ಕಬಳಿಸಿದ್ದಾನೆ.



ಎಪಿಎಂಸಿ ಕಟ್ಟಡ

ಇದರ ಸುಳಿವು ಅರಿತ ಸ್ಥಳೀಯ ಕಾಂಗ್ರೆಸ್ ಪಕ್ಷದವರು ಸುಮ್ಮನೇ ಕೂರಲಿಲ್ಲ, ಬದಲಾಗಿ ತಾಲೂಕಾ ಅಧ್ಯಕ್ಷ ಆರಬೋಳ್, ಸಲಾದಪುರ ಶರಣಪ್ಪ, ವಿಧಾನ ಪರಿಷತ್ ಸದಸ್ಯ ಅಮಾತೆಪ್ಪ ಕಂದಕೂರ, ಮಾಜಿ ಪುರಸಭೆಯ ಸದಸ್ಯ ಸುರೇಂದ್ರ ಪಾಟೀಲ ಮಡ್ನಾಳ (ತಮ್ಮನ ಹೆಸರಿನಲ್ಲಿ), ಮಾಜಿ ಶಾಸಕ ಶಿವಶೇಖರಪ್ಪ ಪಾಟೀಲ (ತಮ್ಮನ ಮಗನ ಹೆಸರಿನಲ್ಲಿ) ನಿವೇಶನಗಳನ್ನು ಹಂಚಿಕೊಂಡಿದ್ದಾರೆ. ಸದಾ ದರ್ಶನಾಪುರನ ಸುತ್ತಮುತ್ತ ತಿರುಗುತ್ತ ಆತನ ಬಾಲಬಡುಕರಾಗಿರುವವರೂ ಎರಡೆರಡು ನಿವೇಶನಗಳನ್ನು ಕಬಳಿಸಿದ್ದಾರೆ. ವಿಳಾಸಗಳೇ ಇಲ್ಲದ ಕೆಲವು ಬೇನಾಮಿ ಟ್ರೇಡಿಂಗ್ ಕಂಪನಿಗಳ ಹೆಸರಿನಲ್ಲೂ ದರ್ಶನಾಪುರ ಜಾಗಗಳನ್ನು ತನ್ನ ಕೈವಶ ಮಾಡಿಕೊಂಡಿದ್ದಾನೆ.

ಇದನ್ನು ನೋಡಿ ಕೃಷಿ ಮಾರುಕಟ್ಟೆ ಇಲಾಖೆಯ ನೌಕರರು ಹಾಗೂ ಸದಸ್ಯರು ಸಹ ಯಾವ ನಾಚಿಕೆ, ಶರ್ಮ್ ಇಲ್ಲದೆ ಲೂಟಿಯ ದಂಧೆಗೆ ಇಳಿದಿದ್ದಾರೆ. ಕಾಯಬೇಕಾದ ಬೇಲಿಯೇ (ದರ್ಶನಾಪುರ) ಎದ್ದು ಹೊಲ ಮೇಯತೊಡಗಿದಾಗ ಕೃಷಿ ಮಾರುಕಟ್ಟೆ ಇಲಾಖೆಯಲ್ಲಿ ತುಡುಗು ದನಗಳ ಭರಾಟೆ ಸಹಜವಾಗಿಯೇ ಹೆಚ್ಚಾಗುತ್ತದೆ. ಇವುಗಳಿಗೆ ಮೂಗುದಾರ ಹಾಕಿ ಬೇಪರಮ್‌ಗೇಡಿಗಳ ತೊಗಲು ಸುಲಿಯಬೇಕೆಂದು ಹೊರಟಿರುವ ಕಮ್ಯುನಿಸ್ಟ್ ಪಕ್ಷದ ಚೆನ್ನಪ್ಪ ಆನೇಗುಂದಿ, ನದಾಫ, ಸಿದ್ಧಯ್ಯ ಹಿರೇಮಠ ಮುಂತಾದವರು ಬರೀ ಪತ್ರಿಕೆಯ ಹುಲಿಗಳಾಗುತ್ತಾರೋ? ನಿಜವಾದ ಹುಲಿಗಳಾಗುತ್ತಾರೋ ನೋಡಬೇಕು.

ಜೊತೆಗೆ ಹಾಡುಹಗಲೇ ಶಹಾಪುರದ ಜನತೆ ಹಾಗೂ ಸರಕಾರದ ಕಣ್ಣಿಗೆ ಮಣ್ಣು ತೂರಿರುವ ದರ್ಶನಾಪುರನಿಂದ ಆತ ಅಕ್ರಮವಾಗಿ ಪಡೆದ ನಿವೇಶನಗಳನ್ನು ವಾಪಸ್ಸು ಪಡೆಯಬೇಕಿದೆ. ಆ ತಾಕತ್ತು ರಾಜ್ಯ ಕೃಷಿ ಮತ್ತು ಮಾರುಕಟ್ಟೆಯ ನಿರ್ದೇಶಕರಿಗೆ ಅಥವಾ ರಾಜ್ಯಪಾಲರಿಗೆ ಇದೆಯೆ?

■ ವರದಿಗಾರ

ಆಗಿಲ್ಲ" ಎಂದು ಅವಲತ್ತುಕೊಂಡೆ. ಆಗ ನನ್ನ ವಿನಂತಿಗೆ 'ಸ್ಪಂದಿಸಿದ' ಈತ "ಆದಷ್ಟು ಬೇಗ ನಿನಗೆ ಮಕ್ಕಳಾಗುತ್ತವೆ'' ಎಂದ.

ಒಂದು ಸೂಡು ಕರಿದಾರದ ಕಟ್ಟು ಜೊತೆಗೆ ಒಂದು ಸಣ್ಣ ಬುಟ್ಟಿಯಷ್ಟು ಒಲೆಯ ಬೂದಿಯನ್ನು ತನ್ನ ಬಾಜು ಇಟ್ಟುಕೊಂಡಿದ್ದ ಈತ ಜನರಿಗೆ ಅದನ್ನೇ ಹಚ್ಚಿಕೊಳ್ಳುವಂತೆ, ಕಟ್ಟಿಕೊಳ್ಳುವಂತೆ ಕೊಡುತ್ತಿದ್ದ. ಒರಟು ಮಾತುಗಳ ಮೂಲಕ ಮಟ್ಕಾ ನಂಬರ್ ಕೂಡ ಹೇಳುವವನಂತೆ ನಟಿಸುತ್ತಿದ್ದ. ಜನ ಮಾತ್ರ ಅದನ್ನು ತಾಬಡ ತೂಬಡ ಬರಕೊಳ್ಳುತ್ತಿದ್ದರು.

ಎಂಟತ್ತು ವರ್ಷಗಳ ಹಿಂದೆ ಕಡುಬಡತನದ ನೋವು ಉಣ್ಣುತ್ತ ತುತ್ತು ಅನ್ನಕ್ಕೂ ಪರದಾಡುತ್ತಿದ್ದ ತಳವಾರ ದೇವಪ್ಪ ಉರ್ಫ್ ವಾಸುದೇವಸ್ವಾಮಿ ಇಂತಹ ಕಪಟ ನಾಟಕದಿಂದಲೇ ಈಗ ಶ್ರೀಮಂತನಾಗಿದ್ದಾನೆ. ತನ್ನ ಮಠದ ಮೂಲೆಯಲ್ಲಿ ಅಕ್ಕಿ ಚೀಲಗಳ ನಿಟ್ಟುಗಳನ್ನೇ ಒಟ್ಟಿದ್ದಾನೆ. ಕಲಬುರ್ಗಿ ಜಿಲ್ಲೆಯ ಮತ್ತಿತರ ಕಡೆ ಸುಮಾರು 13 ಇಂಥವೇ "ಬ್ರೇಡ್ ಬ್ರ್ಯಾಂಚ್"ಗಳನ್ನು ತೆಗೆದಿದ್ದಾನೆ. ಒಂದೆರಡು ಕಡೆ ಕಟ್ಟಡದ ಕಾಮಗಾರಿಯೂ (ಆಂದೋಲಾದಲ್ಲಿ) ನಡೆಯುತ್ತಿದೆ. ತಿರುಗಾಡುವುದಕ್ಕೆ ಕಾರೂ ಇದೆ.

ಹಿಂದೊಮ್ಮೆ ಯಾರಿಗೂ ಹೇಳದೆಕೇಳದೆ ಈ ವಾಸುದೇವ ತನ್ನ ಹೆಸರಿನ ಹಿಂದೆ "ಪಟಸ್ಥಲ ಭಸ್ಮಿ" (ಬಹುಶಃ ಅದು ಚಟಸ್ಥಲ ಬಸ್ಮಿ ಎಂದಿದ್ದರೆ ಸೂಕ್ತವಾಗಿರುತ್ತಿತ್ತು) ಎಂಬ ಪದವಿ ಹಚ್ಚಿಕೊಂಡಾಗ ಜಂಗಮರಿಂದ ದೊಡ್ಡ ತಕರಾರೇ ಶುರುವಾಗಿತ್ತು, ಆದರೆ ಯಾವಾಗ ರಂಭಾಪುರಿ ಜಗದ್ಗುರುವನ್ನು ಕರೆಸಿ ಅವರಿಗೆ ದಕ್ಷಿಣೆ ಕೊಟ್ಟನೋ ಆಗ ಆ ತಕರಾರೇ ನಿಂತುಹೋಗಿತ್ತು.

ಕಲಬುರ್ಗಿ ಜಿಲ್ಲೆಯ ಬಹುತೇಕ ರಾಜಕೀಯ ಪುಢಾರಿಗಳೆಲ್ಲ ಇಲ್ಲಿ ಬಂದು ಹೋಗಿ ಮಾಡಿದ್ದಾರೆ. ಅಧಿಕಾರಿ ವರ್ಗದ ಜನಗಳಂತೂ ಆಗಾಗ ಬರುತ್ತಲೇ ಇರುತ್ತಾರೆ. ವೀರಶೈವ ಧರ್ಮದ ಗುರುಗಳೆಂದು ಕರೆದುಕೊಳ್ಳುವ ರಂಭಾಪುರಿ (ಶ್ರೀಶೈಲ)ದ ಜಗದ್ಗುರುಗಳೂ ಇಲ್ಲಿಗೆ ಆಗಮಿಸಿ ಕಾಣಿಕೆ ಸ್ವೀಕರಿಸಿ, ಈತನ ಪವಾಡಗಳ ಬಗ್ಗೆ ಹಾಡಿ ಹೊಗಳಿ ದಕ್ಷಿಣೆ ಪಡೆದು ಹೋಗಿದ್ದಾರೆ. 'ಧೂಮ್ ಮಚಾಲೆ' ಹಾಡುಗಳನ್ನು ಕೇಳುವ ಚಾಳಿ ಹೊಂದಿರುವ ಜಿಡಗಾ ಮಠದ ಮತ್ತೊಬ್ಬ ನಟೋರಿಯಸ್ ನಕಲಿ ಸ್ವಾಮಿ ಮುರುಘರಾಜೇಂದ್ರ ಕೂಡ ಇಲ್ಲಿ ಬಂದುಹೋಗಿದ್ದಾನೆ. ಇದೆಲ್ಲದರಿಂದ ವಾಸುದೇವನ ಗಿರಾಕಿಗಳು ಮತ್ತಷ್ಟು ಹೆಚ್ಚಾಗಿವೆ.


ತಲೆಕೆಟ್ಟ ಭಕ್ತರ ಸಂಖ್ಯೆ ಹೆಚ್ಚಾಗಿದ್ದನ್ನು ಕಂಡು ಉತ್ತೇಜಿತನಾದ ವಾಸುದೇವ ಕೂಡ ಕಲಬುರ್ಗಿಯ 'ಡಾನ್' ಖ್ಯಾತಿಯ ಗಂಗಾಧರ ಹಾಗೂ ತೋಟೇಂದ್ರರಂತೆ ತನ್ನ ತಲೆಗೂ ಬೆಳ್ಳಿಯ ಕಿರೀಟಧರಿಸಿ, ಥಳಥಳಿಸುವ ಬಟ್ಟೆ ತೊಟ್ಟು ಮೆರೆಯುತ್ತಿದ್ದಾನೆ. ತೀರಾ ಇತ್ತೀಚೆಗೆ ತನ್ನ ಹುಟ್ಟು ಹಬ್ಬವನ್ನೂ ವಿಜೃಂಭಣೆಯಿಂದ ಆಚರಿಸಿಕೊಂಡಿದ್ದಾನೆ. ಸಾವಿರಾರು ರೂಪಾಯಿಗಳನ್ನು ವೆಚ್ಚ ಮಾಡಿ ಆಚರಿಸಿಕೊಂಡ ಈತನ 'ಹ್ಯಾಪಿ ಬರ್ತ್‌ಡೇ'ಯಲ್ಲಿ ಪೊಲೀಸ್ ಅಧಿಕಾರಿಗಳು ಮತ್ತು ಸ್ಥಳೀಯ ರಾಜಕಾರಣಿಗಳೂ ಭಾಗವಹಿಸಿದ್ದಾರೆ.

ಕೆಲವೇ ವರ್ಷಗಳಲ್ಲಿ ನೋಡನೋಡುತ್ತಿರುವಂತೆ ಸುಖ ಸೋಪಾನವಾಗುತ್ತಿರುವ ಮಠಕ್ಕೆ ಬರುವ ಮುಗ್ಧ ಮಹಿಳೆಯರ ಮೇಲೂ ವಾಸುದೇವ ತನ್ನ 'ದುರ್‌ದೃಷ್ಟಿ' ಹರಿಸುತ್ತಾನೆ ಎಂದು ಊರಿನ ಜನ ಮಾತನಾಡುತ್ತಿದ್ದಾರೆ. ಮತ್ತೊಂದು ವಿಚಿತ್ರವೆಂದರೆ ಅದೇ ಊರಿನ ಗೌಡನಾದ, ಅಷ್ಟೇನು ವಿದ್ಯಾವಂತನಲ್ಲದ ಸಂಗಣ್ಣಗೌಡ ಮಾತ್ರ ಈ ಮಠದ ಕಡೆ ತಲೆಹಾಕಿಯೂ ಮಲಗಿಲ್ಲವಂತೆ! ಆದರೆ ಈತನನ್ನು ನೋಡಲು, ಆಶೀರ್ವಾದ ಪಡೆಯಲು ದೂರದ ಊರುಗಳಿಂದಲೂ ಜನ ಬರುತ್ತಾರಲ್ಲ ಎಂದು ಪ್ರಶ್ನಿಸಿದರೆ "ಅವ್ರಿಗೆಲ್ಲ ಭ್ರಮೆ ತುಂಬ್ಯಾದ್ರಿ, ಯಾರೇನು ಮಾಡ್ಲಿಕ್ಕಾಗತಾದ?! ಅವ್ರು ಬರತಾರ ಇಂವ ತೀರಗ್ಯಾಡಿಸಿ ಅವ್ರ ಚರ್ಮ ಹದಮಾಡಿ ಸುಲಿತಾನ" ಎಂದು ವಿಷಾದ ವ್ಯಕ್ತಪಡಿಸುತ್ತಾರೆ.

ಆಗ ಸಂತೆಕೆಲ್ಲೂರಿನ ಘನಮಠದಾರ್ಯರೆಂಬ ಶರಣರ ವಚನದ ಸಾಲುಗಳಾದ "ಎಲ್ಲಿಯ ಭಕ್ತಿಯದೆಲ್ಲಿ ಮುಕ್ತಿಯದೋ? ಈ ಸೂಳೆ ಮಕ್ಕಳಿಗೆಲ್ಲಿ ಭಕ್ತಿಯದೆಲ್ಲಿ ಮುಕ್ತಿಯದೋ?" ನೆನಪಾದವು.

■ ವರದಿಗಾರ


ಕುಕನೂರಿನ ನೆಮ್ಮದಿ ಕದಡಿದ ಮುಠಾಳರು





ಕುಕನೂರಿನ ಮೂರು ಮುಠಾಳರು ಪ್ಲಸ್ ಹದಿಮೂರು ಪುಂಡರು ಸೇರಿ ಇಡೀ ಊರಿನ ನೆಮ್ಮದಿ ಕೆಣಕಿ, ವಾರದ ಹೊತ್ತಾದರೂ ಆತಂಕ ಇಳಿಯದಂತೆ ಮಾಡಿರುವ ಬಗ್ಗೆ ವರದಿ ಇದು. ಅದೃಷ್ಟವಶಾತ್ ಭೀಕರವಾದ ಘಟನೆಯೊಂದು ಜರುಗದೇ ನಿಟ್ಟುಸಿರು ಬಿಡುವಂತಾಗಿದೆ.

ಯಲಬುರ್ಗಾ ತಾಲ್ಲೂಕಿನ ಕುಕನೂರು ಎಂಬ ಗ್ರಾನೈಟ್, ಶೆಂಗಾ ಮಿಲ್‌ಗಳ ಕಮರ್ಷಿಯಲ್ ಪಟ್ಟಣದಲ್ಲಿ ಕೊಬ್ಬಿ ಹೋಗಿರುವ, ಹಾದಿ ತಪ್ಪಿರುವ ಶಿವರಾಜ ಮಾಲಗಿತ್ತಿ, ಬಸವರಾಜ ಮಾಲಗಿತ್ತಿ, ಮೈಕೆಲ್ ತರಹದವರ ಸಣ್ಣಪುಟ್ಟ ಕಿರುಕುಳಕ್ಕೆ ಈಗಲಾದರೂ ತಡೆ ಬಿದ್ದೀತು ಅಂತ ಭಾವಿಸಲಾಗಿದೆ. ಏಕೆಂದರೆ ಆ ಮೂವರೂ ಪೊಲೀಸ್ ಬಲೆಗೆ ಬಿದ್ದಿದ್ದಾರೆ. ಆ ಒಂದು ಕಾರಣಕ್ಕೆ ಎಸ್ಪಿ ಸಿದ್ದಣ್ಣರನ್ನು ಅಭಿನಂದಿಸಲೇ ಬೇಕು.



ಈಗ್ಗೆ 15 ವರ್ಷಗಳ ಹಿಂದೆ ಅತ್ಯಂತ ಹಿಂದುಳಿದ, ಬರಡು ಭೂಮಿಯಾದ ಕುಕನೂರಿನ ಆಳದಲ್ಲಿ ಬಂಗಾರ ಬೆಲೆಯ ಗ್ರಾನೈಟ್ ಕಲ್ಲು ಇದೆ ಎಂದು ಯಾವಾಗ ಗೊತ್ತಾಯಿತೋ, ಆವತ್ತಿನಿಂದ ಕುಕನೂರಿನ ಸ್ಟೈಲೇ ಬದಲಾಯಿತು. ಕೆಲ ಸೋಮಾರಿಗಳ ಬದುಕು ಬದಲಾಯಿತು. ಅಂತಹ ಊರಿನಲ್ಲಿ ಕಳೆದ ನಾಲ್ಕಾರು ವರ್ಷಗಳಿಂದ ಇವರು ಆರಂಭಿಸಿದ್ದ ಪುಂಡಾಟಿಕೆ ಅಷ್ಟಿಷ್ಟಲ್ಲ, ಹಳ್ಳಿಯಿಂದ ಕಾಲೇಜಿಗೆ ಬಂದ ಹುಡುಗಿಯರೇನಾದರೂ ಇವರ ಕಣ್ಣಿಗೆ ಬಿದ್ದರೆ, ಬೇಡ ವಿದ್ಯಾರ್ಥಿನಿಯರಿಗೆ ಮಾನಸಿಕ ಹಿಂಸೆ ನೀಡುತ್ತಿದ್ದರು. ಆಂಟಿಯರಾಗಿದ್ದರೆ ಅದು ಬೇರೆಯೇ ಕಥೆ. ಹಗಲೆಲ್ಲ ಚುಡಾಯಿಸುತ್ತ ಕಾಲ ಕಳೆಯುತ್ತಿದ್ದ ಪುಂಡರು ರಾತ್ರಿಯಾದರೆ ಸಾಕು ಕುಡಿದು, ತಿಂದು ಬಿಲ್ ಕೊಡದೇ ಬರುವುದು, ಆ ಕಾರಣಕ್ಕೇ ಜಗಳ ಮಾರಾಮಾರಿ ನಡೆಯುತ್ತಿತ್ತು. ಸುಮ್ಮನೆ ತೊಂದರೆ ಯಾಕೆ ಅಂತ ಬಾರ್‌ನವರು ಪೊಲೀಸ್ ಸ್ಟೇಷನ್ ಕಟ್ಟೆಯನ್ನೂ ಹತ್ತಿರಲಿಲ್ಲ.

ಕೊಪ್ಪಳ

ಆದರೆ ಮೊನ್ನೆ ಆಗಿದ್ದು ಮಾತ್ರ ಅವರ ಪುಂಡಾಟಿಕೆಯ ಅಂತ್ಯವೆಂದರೂ ಒಳ್ಳೆಯದೇ. ಅಕ್ಟೋಬರ್ 20ರ ಶನಿವಾರ ಸಂಜೆ ಇದೇ ಪುಂಡರು ಆಟೋಗಳಲ್ಲಿ ಬಾಡಿಗೆ ಹೋಗಿ, ನಂತರ ಹಣ ಕೊಡದೇ ಚಾಲಕನನ್ನು ಬಡಿದು ಕಳಿಸಿದ್ದಾರೆ. ಅದಕ್ಕೆ ಮರುದಿನ ಇನ್ನೂರು ಜನ ಸೇರಿ, ಜಿ.ಪಂ. ಮಾಜಿ ಅಧ್ಯಕ್ಷ ರಾಮಣ್ಣ ಭಜಂತ್ರಿ, ಬಿಜೆಪಿ ಜಿಲ್ಲಾ ಎಸ್ಸಿ ಘಟಕದ ಹನುಮಂತಪ್ಪ ಪೂಜಾರ, ಗುತ್ತಿಗೆದಾರ ದ್ಯಾಮಣ್ಣ ಜಮಖಂಡಿ, ತಾ.ಪಂ. ಸದಸ್ಯ ಶಿವಕುಮಾರ ನಾಗಲಾಪುರ ಮಠ, ದೇವಪ್ಪ ಸೋಬಾನದ, ಅಂದಪ್ಪ ಜವಳಿ ನೇತೃತ್ವದಲ್ಲಿ ಠಾಣೆಗೆ ಹೋಗಿ ಶಿವರಾಜ ಮಾಲಗಿತ್ತಿ, ಬಸವರಾಜ ಮಾಲಗಿತ್ತಿ, ಮೈಕಲ್ ಭಂಡಾರಿ, ಮಹಾಂತೇಶ್ ಮಾದರ್, ಡಾ. ಹುಲಗಪ್ಪ ಮತ್ತು ಮೂವರು ಮಕ್ಕಳು, ಸುಭಾಷ್ ಕಾಳಿ, ರಾಜೇಶ್ ಚಲವಾದಿ ಸೇರಿದಂತೆ 17 ಜನರದ್ದೊಂದು ಪಟ್ಟಿ ಕೊಟ್ಟು, ಇವರ ದೌರ್ಜನ್ಯ ನಿಲ್ಲಿಸಿ, ನೆಮ್ಮದಿ ದೊರಕಿಸಿಕೊಡುವಂತೆ ಒತ್ತಾಯಿಸಿದ್ದಾರೆ.

ಯಾವಾಗ ಕುಕನೂರಿನ ಇದ್ದಬದ್ದ ಗಣ್ಯರೆಲ್ಲ ಠಾಣೆಗೆ ಬಂದರೊ ಆಗ ಈ ಪುಂಡರನ್ನೆಲ್ಲ ಕರೆದು ಜಬರಿಸಿಯೋ, ನಾಲ್ಕು ಕೊಟ್ಟೋ ಸರಿದಾರಿಗೆ ತರುವ ಎಲ್ಲ ಅವಕಾಶ ಕುಕನೂರು ಪೊಲೀಸರಿಗಿತ್ತು, ಆದರೆ ಹಿಂದಿನಿಂದಲೂ ಮೈಗೂಡಿಸಿಕೊಂಡು ಬಂದಿರುವ ಸೋಮಾರಿತನ ಇತ್ಯಾದಿ, ಪೊಲೀಸರು ಮೈಮುರಿತು ಬಿಟ್ಟರು. ಅದರ ಪರಿಣಾಮ ಏನಾಯಿತು ಗೊತ್ತೆ?

ಅಕ್ಟೋಬರ್ 22ರ ರಾತ್ರಿ ಗದಗಿನಿಂದ ಬರುತ್ತಿದ್ದ, ಠಾಣೆಗೆ ಹೋದ ಗುಂಪಿನಲ್ಲಿದ್ದ ದ್ಯಾಮಣ್ಣ ಜಮಖಂಡಿಯನ್ನು ಅದೇ ಪುಂಡರು ತಡೆದು, ಏಳೆದಾಡಿ ಹಲ್ಲೆಗೂ ಮುಂದಾದರು. ಇದೇ ಪ್ರಕರಣ ಬಳಸಿಕೊಂಡ ಕಿಡಿಗೇಡಿಗಳು ಅಕ್ಟೋಬರ್ 23ರ ಬೆಳಗ್ಗಿನ ಹೊತ್ತಿಗೆ ಅದು ದಲಿತ-ಸವರ್ಣೀಯರ ನಡುವಿನ ಜಗಳವೆಂದು ಬಿಂಬಿಸಿದರು. ಆವತ್ತು ಪಟ್ಟಣದಲ್ಲಿ ಗಲಾಟೆಯಾದೀತು ಅಂತ ವ್ಯಾಪಾರ ವಹಿವಾಟು ಅಂಗಡಿಗಳು ತೆರೆಯಲೇ ಇಲ್ಲ.

ಆದರೂ ಸುಮಾರು ಐನೂರು ಜನ ಸೇರಿ ಶಿರೂರು ಸರ್ಕಲ್‌ನಿಂದ ಮೌನ ಮೆರವಣಿಗೆ ಹೊರಟರು. ಅದು ಅಂಬೇಡ್ಕರ್ ಸರ್ಕಲ್‌ಗೆ ಬರೋ ಹೊತ್ತಿಗೆ ಪೊಲೀಸರು ಲಾಠಿ ಬೀಸಿದರು. ಅಮಾಯಕರೆಲ್ಲ ಕೈ-ಕಾಲುಗಳಿಗೆ ಪೆಟ್ಟು ತಿಂದು ಆಸ್ಪತ್ರೆ ಸೇರಿದರು. ಮೌನ ಮೆರವಣಿಗೆಯ ಉದ್ದೇಶವು ಯಾವುದೇ ಗಲಾಟೆ ಮಾಡುವುದಾಗಿರಲಿಲ್ಲ, ಮೆರವಣಿಗೆ ಮೂಲಕ ಠಾಣೆಗೆ ಹೋಗಿ ಮೊನ್ನೆ ಹೇಳಿದವರನ್ನು ಮತ್ತು ನಿನ್ನೆ ದ್ಯಾಮಣ್ಣನ ಮೇಲೆ ಹಲ್ಲೆ ಮಾಡಲು ಯತ್ನಿಸಿದವರನ್ನೂ ಎತ್ತಾಕಿಕೊಂಡು ಬಂದು ಬೆಂಡೆತ್ತಿರಿ ಎನ್ನುವುದಾಗಿತ್ತು.

ಆದರೆ ಕುಕನೂರು ಪೊಲೀಸರಿಗೆ ಅಂತಹ ತಾಳ್ಮೆಯಾದರೂ ಎಲ್ಲಿತ್ತು? ಜನರನ್ನು ನೋಡಿದವರೇ ವ್ಯಾನಿಂದ ಸರಸರ ಲಾಠಿ ಎಳಕೊಂಡವರೇ ಅಮಾಯಕರನ್ನೆಲ್ಲ ನಡುರೋಡಿನಲ್ಲಿ ದನಕ್ಕೆ ಬಡಿದಂತೆ ಬಡಿದಿದ್ದಾರೆ. ಏಟು ತಿಂದ ರವಿಜಕ್ಕ, ದೇವಪ್ಪ ಪತ್ತಾರ, ಶಿವಪ್ಪ ಹಟ್ಟಿ, ಕಲ್ಲಪ್ಪ ಅಳವಂಡಿ, ಲಕ್ಷ್ಮಣ ಖಂಡೆ ಸೇರಿದಂತೆ 15ಕ್ಕೂ ಹೆಚ್ಚು ಜನ ಕೈ-ಕಾಲುಗಳಿಗೆ ಬ್ಯಾಂಡೇಜ್ ಸುತ್ತಿಕೊಂಡು ಅಡ್ಡಾಡುವಂತಾಗಿದೆ.

ಇಲ್ಲಿ ಊರಿನ ನೆಮ್ಮದಿ ಕದಡಿದ ಆ ಮುಠಾಳರು ಮತ್ತು ಊರಿನ ಗಣ್ಯರು ಲಾಠಿ ರುಚಿಯಿಂದ ಪಾರಾಗಿದ್ದರೆ ಅಮಾಯಕರೇ ಪೆಟ್ಟು ತಿಂದಿದ್ದಾರೆ. ಗದ್ದಲದಲ್ಲಿ ಹಣ ಕಳಕೊಂಡಿದ್ದಾರೆ. ಅನಗತ್ಯವಾಗಿ ಕುಕನೂರು ನಾಲ್ಕಾರು ದಿನ ಬೆಂಕಿ ಉಂಡೆ ಮೇಲೆ ಕುಳಿತಂತೆ ಚಡಪಡಿಸುವಂತಾಗಿದೆ.

ಎಲ್ಲ ಮುಗಿದ ಮೇಲೆ ಅದೇನೋ ಅಂತಾರಲ್ಲ ಹಾಗೆ ರಾಜಿ ಸಂಧಾನದ ನಾಟಕ ನಡೆದಿದೆ. ಹಾದಿ ತಪ್ಪಿದ ಪುಂಡರನ್ನು ಮೊದಲೇ ಹಿರಿಯರು ಬಡಿದು ಬುದ್ಧಿ ಹೇಳಿದ್ದರೆ ಕುಕನೂರಿನ ನೆಮ್ಮದಿ ಕದಡುತ್ತಿತ್ತೆ? ಕೆಲ ದಿನಗಳ ಹಿಂದೆ ಶಾಸಕ ರಾಯರೆಡ್ಡಿ ಬಿಜೆಪಿ ನಡುವಿನ ಮಾರಾಮಾರಿಯಿಂದಲೇ ಇನ್ನೂ ಕುಕನೂರು ಚೇತರಿಸಿಕೊಂಡಿಲ್ಲ, ಅಂತಹದ್ದರಲ್ಲಿ ಇಂತಹದ್ದೊಂದು ಅವಘಡ ನಡೆದುಹೋಗಿದೆ.

ಪೊಲೀಸರೇನೋ ಮೂವರನ್ನು ಬಂಧಿಸಿಬಿಟ್ಟಿದ್ದಾರು. ಆದರೆ ಅವರಂತಹ ಪುಂಡಾಟಿಕೆಯವರು ಕುಕನೂರಿನಲ್ಲಿ ಇನ್ನೂ ಇದ್ದಾರೆ. ಅದು ಯಾರೂಂತ ಪೊಲೀಸರಿಗೂ ಗೊತ್ತಿದ್ದೆ, ಊರಿನವರಿಗೂ ಗೊತ್ತಿದೆ. ಈಗಲೇ ಕರೆದು ಬುದ್ಧಿ ಹೇಳುವುದು ಉತ್ತಮ. ಇಲ್ಲವಾದರೆ ಕುಕನೂರು ತಂಟೆ-ತಕರಾರುಗಳ ಊರು ಎಂದು ಬ್ರಾಂಡ್ ಆಗುವುದು ಖಚಿತ.

■ ವರದಿಗಾರ

ಎಸ್ಪಿ ರೂಪಾ-ಎಸ್ಸೈ ರಮಾಕಾಂತನ ಕರ್ಮಕಾಂಡಗಳು


ಗದುಗಿನ ಪೊಲೀಸರ ಧನದಾಹ ಸದ್ಯಕ್ಕೆ ನೀಗುವ ಲಕ್ಷಣಗಳು ಕಾಣುತ್ತಿಲ್ಲ. ಇಲ್ಲಿಗೆ ಬಂದ ಹೊಸತರಲ್ಲಿ ಏನೋ ಕಡಿದು ಗುಡ್ಡೆ ಹಾಕಿಬಿಡುತ್ತೇನೆಂಬಂತೆ ಅಬ್ಬರಿಸಿದ್ದ ಎಸ್ಪಿ ರೂಪಾಳ ಆರಂಭಿಕ ಖದರು ಈಗ ತಣ್ಣಗಾಗಿದೆ. ಆಗೋದು ಆಗಲಿ, ಹೋಗೋದು ಹೋಗಲಿ ಎನ್ನುತ್ತಾ ತನ್ನ ಎಸಿ ರೂಮಿನಲ್ಲೇ ಕೂತು ಡೀಲಿಂಗ್‌ಗಳಲ್ಲಿ ತಲ್ಲೀನರಾಗಿದ್ದಾರೆ.

ಈ ಮಧ್ಯೆ ರಾಸಲೀಲೆಗೇ ಕುಖ್ಯಾತಿ ಪಡೆದಿರುವ ಸರ್ಕಲ್ ಇನ್ಸ್‌ಪೆಕ್ಟರ್ ಎಸ್.ಟಿ. ರಮಾಕಾಂತ ಮತ್ತು ಡೀಲ್ ಮಾಸ್ಟರ್ ಎಂದೇ ಪ್ರಖ್ಯಾತಿ ಪಡೆದಿರುವ ಶ್ರೀನಿವಾಸ್ ಮೇಟಿ ಎಂಬಿಬ್ಬರು ನೇರವಾಗಿ ಡೀಲು ಗಳಿಗೆ ಇಳಿದಿದ್ದಾರೆ. ಇವರ ಇಂತಹ ಕೆಲಸಕ್ಕೆ ಮೊನ್ನಿನ ಘಟನೆಯೊಂದು ಸಾಕ್ಷಿ.



[illegible]

"ಕಡಿಮೆ ಹಣಕ್ಕೆ ದೊಡ್ಡ ಪ್ರಮಾಣದ ಬಂಗಾರ ಕೊಡುವುದಾಗಿ ಹೇಳಿ ವಂಚಿಸಲು ಸ್ಕೆಚ್ ಹಾಕಿದ್ದ ರಾಜಸ್ಥಾನ ಮೂಲದ ಆರು ಜನ ಚೀಟರ್‌ಗಳನ್ನು ಸೂಕ್ಷ್ಮ ಜಾಲ ಬೀಸಿ ಸೆರೆಹಿಡಿದಿದ್ದೇವೆ. ಅವರಿಂದ ಒಂದು ಸ್ಯಾಂಟ್ರೋ ಕಾರು ಮತ್ತು ಏಳೂವರೆ ಸಾವಿರ ಕ್ಯಾಷ್ ಜಪ್ತಿ ಮಾಡಿದ್ದೇವೆ. ಇಂತಹ ಅಂತರ್ ರಾಜ್ಯ ಚೀಟರ್‌ಗಳನ್ನು ಬಂಧಿಸಿದ ಕೀರ್ತಿ ನಮ್ಮ ಪೊಲೀಸ್ ಟೀಮಿನದು" ಎಂದೆಲ್ಲ ಎಸ್ಪಿ ರೂಪಾ ಮೊನ್ನೆ ಪತ್ರಕರ್ತರೆದುರು ಪುಂಗಿ ಊದಿದರು. ಅದನ್ನು ಹಲವರು ನಂಬದರು ಕೂಡ.



ಶ್ರೀನಿವಾಸ್ ಮೇಟಿ


ಆದರೆ ಬಂಧಿತರನ್ನು ಒಮ್ಮೆ ನೋಡಿದರೆ ಅವರಿಗೂ ಈ ಚೀಟಿಂಗ್ ಜಾಲಕ್ಕೂ ಸಂಬಂಧ ಇದ್ದಂತಿರಲಿಲ್ಲ. ಏಕೆಂದರೆ ಬಂಧಿತರು ನಿಜವಾದ ಚೀಟರ್‌ಗಳೇ ಆಗಿದ್ದರೆ ಅವರ ಬಳಿ ಲಕ್ಷಾಂತರ ರೂಪಾಯಿಗಳು ಸಿಗಬೇಕಿತ್ತು, ಕನಿಷ್ಠಪಕ್ಷ ಜನರನ್ನು ಮೋಸಗೊಳಿಸಲು ಅವರು ಒಳ್ಳೆಯ ಬಟ್ಟೆಗಳನ್ನಾದರೂ ತೊಟ್ಟಿರಬೇಕಿತ್ತು. ಆದರೆ ಅವರೆಲ್ಲ ಅಬ್ಬೆಪಾರಿಗಳಂತೆ ಕಾಣಿಸುತ್ತಿದ್ದರು. ಆದ್ದರಿಂದ ನಿಜವಾಗಲೂ ಬಂಧನಕ್ಕೊಳಗಾಗಿರುವವರು ಯಾರು? ನೈಜ ಚೀಟರ್‌ಗಳು ಯಾರು ಎಂಬುದನ್ನು ತನಿಖೆ ಮಾಡಬೇಕಿದೆ.

ಅಸಲಿಗೆ ನಡೆದಿರುವುದೇನೆಂದರೆ ಈ ಸಣ್ಣಪುಟ್ಟ ಪುಢಾರಿಗಳು ರಮಾಕಾಂತ-ಮೇಟಿಯ ಡೀಲಿಂಗ್ ರೇಟಿಗೆ ಒಪ್ಪದಿದ್ದಕ್ಕೆ ಅವರ ಮೇಲೆ ಜನವರಿಯಲ್ಲಿ ಹುಲಕೋಟೆಯಲ್ಲಿ ನಡೆದ ನಕಲಿ ಬಂಗಾರ ವಂಚನೆ ಪ್ರಕರಣವನ್ನು ಸಿಕ್ಕಿಸಲಾಗಿದೆ. ಅಷ್ಟೇಅಲ್ಲ, ಅದರಲ್ಲಿ ನಿಜವಾಗಲೂ ಭಾಗಿಯಾಗಿದ್ದ ರಾಜಕೀಯ ಪುಢಾರಿಗಳಿಂದ ಲಂಚ ಪಡೆದು ಅವರನ್ನು ಈ ಕೇಸಿನಿಂದ ಕೈಬಿಡಲಾಗಿದೆ.

[illegible]

ಗದುಗಿಗೆ ಚೀಟಿಂಗ್, ಬೆಟ್ಟಿಂಗ್, ಗ್ಯಾಂಬ್ಲಿಂಗ್‌ಗಳಂತಹ ದಂಧೆಗಳು ಹೊಸದೇನಲ್ಲ. ಕುಖ್ಯಾತ ಚೀಟರ್ ಮೋನ್ನಾ ಒಂದು ದಶಕಕ್ಕೂ ಹೆಚ್ಚು ಕಾಲ ಇಡೀ ಜಿಲ್ಲೆಯನ್ನು ಬೆಚ್ಚಿ ಬೀಳಿಸಿದ್ದ. ಅದೆಷ್ಟೋ ಅಮಾಯಕ ಕುಟುಂಬಗಳನ್ನು ಬೀದಿಗೆಳೆದ ಮೋನ್ನಾ ಪೊಲೀಸರ ಕ್ಲೋಸ್ ಫ್ರೆಂಡ್ ಕೂಡ ಆಗಿದ್ದ. ಮೊದಮೊದಲು ಹುಬ್ಬಳ್ಳಿ-ಧಾರವಾಡಗಳನ್ನು ಕೇಂದ್ರವನ್ನಾಗಿಟ್ಟುಕೊಂಡು ಇಡೀ ಉತ್ತರ ಕರ್ನಾಟಕದಲ್ಲಿ ತನ್ನ ವಂಚನಾ ಜಾಲವನ್ನು ಬೀಸಿದ್ದ ಮೋನ್ನಾ ಡಬ್ಬಲ್ ದಂಧೆಯಲ್ಲಿ ಜನರಿಂದ ಲಕ್ಷಗಟ್ಟಲೆ ಹಣ ಸುಲಿದಿದ್ದ.

ಮೋನ್ನಾನ ಈ ಕರ್ಮಕಾಂಡಗಳಿಗೆ ಫುಲ್‌ಸ್ಟಾಪ್ ಹಾಕುವುದಕ್ಕೆಂದೇ ಡಿಸಿಪಿ ರವಿಕಾಂತೇಗೌಡ ಇವನನ್ನು ಧಾರವಾಡ ಜಿಲ್ಲೆಯಿಂದಲೇ ಗಡೀಪಾರು ಮಾಡಿಸಿದ್ದರು. ಆದರೆ ಅಲ್ಲಿಂದ ಗದಗಿಗೆ ಬಂದು ವಕ್ಕರಿಸಿದ ಮೋನ್ನಾ ಗದುಗಿನ ಪೊಲೀಸ್ ಅಧಿಕಾರಿಗಳ ಮನೆಯ ಅಕ್ಕಪಕ್ಕದಲ್ಲೇ ತನ್ನ ದಂಧೆಯನ್ನು ಶುರುಹಚ್ಚಿಕೊಂಡ ಎಂದರೆ ಆತನಿಗೂ ಇಲ್ಲಿನ ಪೊಲೀಸರಿಗೂ ಎಂತಹ ಗಳಸ್ಯ ಕಂಠಸ್ಯ ಇತ್ತು ಎಂದು ಅರ್ಥವಾಗುತ್ತದೆ.



ಚೀಟರ್ ಮೋನ್ನಾ


ಸೆಂಟ್ರಲ್ ಜೈಲಿನ ಕಾಯಂ ನಿವಾಸಿಯಾಗಿರಬೇಕಾದ ಈ ವಂಚಕ ಇವತ್ತು ದಿನಕ್ಕೊಂದು ಬೈಕ್ ಏರಿ ನಗರದ ಬೀದಿಗಳಲ್ಲಿ ರೇಸ್ ನಡೆಸುತ್ತಿದ್ದಾನೆ. ಇವನ ಚೀಟಿಂಗ್ ಪ್ರೊಫೇಶನ್‌ಗೆ ನಗರದ ಲಾಡ್ಜುಗಳು, ರೆಸ್ಟೋರೆಂಟ್‌ಗಳೇ ಅಡ್ಡೆಗಳಾಗಿ ಪರಿವರ್ತಿತವಾಗಿವೆ. ಪೊಲೀಸರೊಂದಿಗಿನ ಈತನ ಡೀಲುಗಳು ನಡೆಯುವುದೂ ಇಲ್ಲಿಯೇ.

ಸಿಪಿಐ ರಮಾಕಾಂತ ಈ ಹಿಂದೆ ಇಂಥದೊಂದು ಡೀಲು ಕುದುರಿಸಲು ಈ ಅಡ್ಡೆಗಳಿಗೆ ಹೋಗಿ ಟಿ.ವಿ. ಮಾಧ್ಯಮಗಳ ಕ್ಯಾಮರಾಗಳಿಗೆ ಸಿಕ್ಕಿ ಬಿದ್ದಿದ್ದ. ಆಗ ಅದರಿಂದ ತಪ್ಪಿಸಿಕೊಳ್ಳಲು ಪತ್ರಕರ್ತ ಷರೀಫ್ ಮೇಲೆ ಹಲ್ಲೆಗೂ ಮುಂದಾಗಿದ್ದ. ಶಹರದ ಇಸ್ಪೀಟು ಅಡ್ಡೆಗಳಿಗೆ ತಾನೇ ಮಾಲಿಕನೆಂಬಂತೆ ವರ್ತಿಸುತ್ತಾ, ಜೂಜುಕೋರರಿಗೆಲ್ಲ ಬಹಿರಂಗವಾಗಿ ಆಶ್ರಯ ನೀಡಿದ ರಮಾಕಾಂತ ಇನ್ನೆಂತಹ ಖದೀಮ ಪೊಲೀಸ್ ಅಧಿಕಾರಿ ಇರಬಹುದು ಎಂದು ನೀವೇ ಊಹಿಸಿ.

[illegible]

ಗದಗ

ಒಂದು ಕಾಲದಲ್ಲಿ ಪಾತಕಿಗಳಿಗೆ, ಬದ್ದಿ ದಂಧೆಕೋರರಿಗೆ, ಗ್ಯಾಂಬ್ಲರ್‌ಗಳಿಗೆ ಶ್ರೀರಕ್ಷೆಯಾಗಿದ್ದ ಪೊಲಿಟಿಕಲ್ ಡಾನ್‌ಗಳ ತವರು ನೆಲ ಹುಲಕೋಟಿ ಇಂದು ಸಂಪೂರ್ಣವಾಗಿ ವಂಚಕರ ಪರ್ಮನೆಂಟ್ ಅಡ್ಡೆಯಾಗಿದೆ. ಅಂತರರಾಜ್ಯ ದಗಾಕೋರರಿಂದ ಹಿಡಿದು ಲೋಕಲ್ ವಂಚಕರ ತನಕ ಎಲ್ಲರೂ ಗದಗವನ್ನು ಬಿಟ್ಟು ಹುಲಕೋಟಿಯನ್ನು ತಮ್ಮ ಬೇಸ್ ಮಾಡಿಕೊಳ್ಳುತ್ತಿದ್ದಾರೆ. ಚೀಟರ್ ಮೋನ್ನಾ ಮತ್ತು ಡೋಂಗಿ ರಾಜಕಾರಣದ ಮಹಾನ್ ಖದೀಮರಾದ ಪೀರ್ ಸಾಬ್ ಕಾತಾಳ, ಯೂತ್ ಕಾಂಗ್ರೆಸ್ ಅಧ್ಯಕ್ಷ ಬಿ.ವಿ. ಅಸೂಟಿಯಂತವರು ನಡೆಸುವ ದಗಲ್ಬಾಜಿ ದಂಧೆಗಳಿಗೆ ಒಂದೆಡೆ ಪೊಲೀಸರು ಬೆಂಬಲವಾಗಿ ನಿಂತಿದ್ದರೆ ಮತ್ತೊಂದೆಡೆ ರಕ್ಷಣೆ ಒದಗಿಸುತ್ತಿರುವವನು ಪಾಟೀಲ್ ಬ್ರದರ್ಸ್‌ನ ಎಂ. ಆರ್. ಪಾಟೀಲ್.



ಎಸ್.ಟಿ.ರಮಾಕಾಂತ್

ಕಳೆದ ಜನವರಿಯಲ್ಲಿ ಹುಲಕೋಟಿಯ ರಾಮನಗೌಡ ಪಾಟೀಲ್ ಎಂಬುವವರಿಗೆ ಇದೇರೀತಿ ನಕಲಿ ಬಂಗಾರ ಕೊಟ್ಟು ವಂಚಿಸಿದ ಪ್ರಕರಣ ಹಸಿಯಾಗಿರುವಾಗಲೇ, ಅದೇ ಹುಲಕೋಟಿಯ ಚೀಟರ್ಸ್‌ಗಳು ಮತ್ತೊಮ್ಮೆ ಬಾಲ ಬಿಚ್ಚಿದ್ದಾರೆ. ಇದನ್ನೇ ಕಾಯುತ್ತಿದ್ದ ಪೊಲೀಸರು ಸಣ್ಣದೊಂದು ಸ್ಟೋರಿ ಕ್ರಿಯೇಟ್ ಮಾಡಿ ಜನವರಿಯಲ್ಲಿ ರಾಮನಗೌಡ ಪಾಟೀಲ್‌ಗೆ ವಂಚಿಸಿದ್ದು ಇದೇ ಟೀಮು ಎಂದು ಅವರನ್ನು ಫಿಕ್ಸ್ ಮಾಡಿ ರಾಮನಗೌಡ ಪಾಟೀಲ್‌ಗೆ ವಂಚಿಸಿದ್ದ ನೈಜ ಎಚ್ಚೆ ಡಿ.ಆರ್.ಗಳಂತಹ ಖದೀಮರನ್ನು ಡೀಲ್ ಮಾಡಿಕೊಂಡು ಬಚಾವ್ ಮಾಡಿದ್ದಾರೆ. ಹೇಗಿದೆ ರಮಾಕಾಂತ-ಮೇಟಿ ತಂಡದ ಖಾಕಿ ಖದರು? ಎಸ್ಪಿ ರೂಪಾಗೆ ಇದೆಲ್ಲಾ ಗೊತ್ತಿದ್ದೂ, ಬಾಯ್ಮುಚ್ಚಿಕೊಂಡಿದ್ದಾರೆಂದರೆ ಏನರ್ಥ? ನೀಟಾಗಿ ಡ್ರೆಸ್ ಮಾಡಿಕೊಂಡು ದಿನಬೆಳಗಾದರೆ ಆ ಕಾರ್ಯಕ್ರಮ, ಈ ಸಮಾರಂಭ ಎಂದು ನಾಲ್ಕು ಕಾಲಮ್ಮಿನ ಸುದ್ದಿಗಾಗಿ ಹಪಹಪಿಸುವುದೇ ಎಸ್ಪಿಯ ಡ್ಯೂಟಿ ಅಂದುಕೊಂಡಿದ್ದಾರೆಯೆ ಈಕೆ?

[illegible]

ಶಹರ ಠಾಣೆಯ ಸಿಪಿಐ ರಮಾಕಾಂತನ ಶೀಟೆತನ ಮಿತಿಮೀರಿ ನಿಂತಿದೆ. ಕೊಪ್ಪರಿಗೆಯಷ್ಟು ಆಮದಾನಿ ತರುವ ಟೌನ್ ಠಾಣೆಯಲ್ಲಿ ಟಿಕಾಣಿ ಹೂಡಿರುವ ಅಲ್ಲಿಂದ ತೊಲಗುವ ಲಕ್ಷಣಗಳು ಕಾಣಿಸುತ್ತಿಲ್ಲ. ಇವನ ಅದೃಷ್ಟವೋ ಅಥವಾ ಗದುಗಿನ ದುರಂತವೋ ಗೊತ್ತಿಲ್ಲ, ಅಂತೂ ಒಂದು ತಿಂಗಳು ರಜಾ ಅನುಭವಿಸಿ ಮತ್ತೆ ಇಲ್ಲಿಗೆ ವಕ್ಕರಿಸಿಕೊಂಡಿದ್ದಾನೆ.

ರಮಾಕಾಂತನ ಖದೀಮ ಕೆಲಸಗಳು ಯಾವ ಪರಿಯಲ್ಲಿವೆ ಎಂದರೆ ಹಣ ಸಿಗುತ್ತೆ ಎಂದರೆ ಎಂಥಾ ಕೆಲಸವನ್ನಾದರೂ ಮಾಡಲು ಮುಂದಾಗಿಬಿಡುತ್ತಾನೆ. ಗದುಗಿನ ಏಕೈಕ ಐಶಾರಾಮಿ ಹೋಟೆಲ್ ಶಿವಾನಿ ಇನ್. ಮಂಗಳೂರಿನ ಭಂಟರ ಈ ಹೋಟೆಲ್‌ನಲ್ಲಿ ಒಬ್ಬ ಪೋಕರಿ ಸ್ಥಳೀಯ ವಿದ್ಯಾರ್ಥಿನಿಯೊಬ್ಬಳ ಬೆತ್ತಲೆ ದೇಹವನ್ನು ತನ್ನ ಮೊಬೈಲ್‌ನಲ್ಲಿ ಚಿತ್ರೀಕರಿಸಿಕೊಂಡಿದ್ದ. ಅದು ಗದಗಿನ ಪಡ್ಡೆ ಹುಡುಗರ ಕೈಯಲ್ಲಿ ಸಿಕ್ಕು ರಾದ್ಧಾಂತವಾಗಿತ್ತು. ಅಮಾಯಕ ಹುಡುಗಿಯರ ಭವಿಷ್ಯದ ಜೊತೆ ಚೆಲ್ಲಾಟವಾಡುತ್ತಿದ್ದ ಆ ಪೋಕರಿಯನ್ನು ಬಂಧಿಸಿ ತರಾಟೆಗೆ ತೆಗೆದುಕೊಳ್ಳುವ ಬದಲು ಆತನ ಶೆಟ್ಟಿ ತಂದೆಯಿಂದ ರಮಾಕಾಂತ ಸಾಕಷ್ಟು ಪೀಕಿದ್ದನಲ್ಲದೆ ಅದೇ ಲಾಡ್ಜ್‌ನಲ್ಲಿ ಒಂದು ಕಾಯಂ ರೂಮನ್ನು ಗಿಟ್ಟಿಸಿಕೊಂಡು ಮಲಗಿಬಿಟ್ಟ!

ಕಳೆದ ವಾರವಷ್ಟೇ ಶಿವಾನಿ ಲಾಡ್ಜ್‌ನ ರೂಂ. ನಂ. 106ರಲ್ಲಿ ಇಬ್ಬರು ಪೊಲೀಸರು ಮಹಿಳಾ ಪೇದೆಯೊಂದಿಗೆ ನಡೆಸಿದರೆನ್ನಲಾದ ಕಾಮಕೇಳಿ ಪ್ರಕರಣ ಕೂಡ ಮುಚ್ಚಿಹೋಗುವ ಹಂತ ತಲುಪಿದೆ. ಈ ಪ್ರಕರಣದ ತನಿಖೆಗಾಗಿ ಖುದ್ದು ಗದುಗಿಗೆ ಬಂದಿದ್ದ ಬೆಳಗಾವಿ ಐಜಿಪಿ ರಾಘವೇಂದ್ರ ಜೌರಾಟಕರ್ ಇಲ್ಲಿನ ಪೊಲೀಸರಿಗೆ ಸಾಕಷ್ಟು ಉಗಿದು ಹೋಗಿದ್ದಾರೆ. ಸದ್ಯ ಈ ಪ್ರಕರಣದ ತನಿಖೆಯನ್ನು ಎಸ್ಪಿ ರೂಪಾಳಿಗೆ ವಹಿಸಿದ್ದು ಅವಳೀಗ ಹೊಸ ರಾಗ ಎತ್ತಿ ಅದನ್ನು ಮುಚ್ಚುವ ತಯಾರಿ ನಡೆಸಿದ್ದಾಳೆ.

ಇನ್ನೊಂದು ಪ್ರಕರಣದಲ್ಲಿ ಶಹರ ಠಾಣೆಯ ಪೇದೆ ಗಣೇಶ್ ಬಾಬು ಠಾಣೆಯಲ್ಲಿಯೇ ಅನುಮಾನಾಸ್ಪದವಾಗಿ ಸಾವನ್ನಪ್ಪಿದ್ದಾನೆ. ಆತ ಮಾನಸಿಕ ಅಸ್ವಸ್ಥತೆಯಿಂದ ಆತ್ಮಹತ್ಯೆ ಮಾಡಿಕೊಂಡಿದ್ದಾನೆ ಎಂದು ಹೇಳುವ ಪೊಲೀಸರು ಆತನ ಮನೆಯವರಿಂದ ಒತ್ತಾಯಪೂರ್ವಕವಾಗಿ ಪೂರಕ ಹೇಳಿಕೆ ಪಡೆದಿದ್ದಾರೆ. ಸತ್ತ ಗಣೇಶ್ ಬಾಬು ರಮಾಕಾಂತನ ಪ್ರತಿಯೊಂದು ಚಟುವಟಿಕೆಯನ್ನು ಕುರಿತು ಮಾಹಿತಿ ಹೊಂದಿದ್ದನೆನ್ನಲಾಗಿದೆ. ಆ ಹಿನ್ನೆಲೆಯಲ್ಲಿ ನೋಡಿದರೆ ಗಣೇಶ್ ಬಾಬು ಆತ್ಮಹತ್ಯೆ ಮಾಡಿ ಕೊಂಡನೋ ಅಥವಾ ಅವನನ್ನು ಹತ್ಯೆ ಮಾಡಲಾಯಿತೋ ಎಂಬ ಗುಮಾನಿಗಳು ಪ್ರಾರಂಭವಾಗುತ್ತವೆ.

ಒಟ್ಟಿನಲ್ಲಿ ಎಸ್ಪಿ ರೂಪಾ ಮತ್ತು ರಮಾಕಾಂತನಂತಹ ಪೊಲೀಸರನ್ನು ಇನ್ನಷ್ಟು ದಿನ ಹೀಗೇ ಮುಂದುವರೆಯಲು ಬಿಟ್ಟರೆ ಗದಗೆಂಬ ಜಿಲ್ಲೆಯನ್ನು ಅದ್ಯಾವ ಪರಿಸ್ಥಿತಿಗೆ ತಂದು ನಿಲ್ಲಿಸುತ್ತಾರೋ ಯಾರಿಗೂ ಗೊತ್ತಿಲ್ಲ.

-ಹುರುಳಿಕುಪ್ಪಿ ವಿನಯ್

ಬಿಡಿ ಚಿತ್ರಗಳು

ಪಾರ್ವತೀಶ

ಗುಂಡು ಪತ್ರಕರ್ತರು

ಮಂಜು-ಗಿರಿ ಪರಮಾಪ್ತ ಮಿತ್ರರು. ಪತ್ರಕರ್ತರು ಹಾಗೂ ಉದಯೋನ್ಮುಖ ಸಿನಿಮಾ ನಟರು ಆದ ಇವರಿಬ್ಬರು ಮೊನ್ನೆ ಒಂದು ಸ್ವೇಚ್ಛ ಪ್ರಸಂಗ ಸೃಷ್ಟಿಸಿಕೊಂಡಿದ್ದಾರೆ.

ಮೊನ್ನೆ ಎಂದಿನಂತೆ ಕೆಲಸ ಮುಗಿಸಿಕೊಂಡು ಹೊರಟಾಗ 'ಮನೆ ತನಕ ಡ್ರಾಪ್ ಮಾಡಯ್ಯ' ಅಂತ ಒಬ್ಬ ಕೇಳಿದ್ದಾನೆ. ಆಯ್ತು ಅಂತ ಇನ್ನೊಬ್ಬ ಹೇಳಿದ್ದಾನೆ. ಇಬ್ಬರೂ ಬೈಕಲ್ಲಿ ಹೊರಟಾಗ 'ಹೇರ್ ಕಟ್ ಮಾಡಿಸಬೇಕು. ಸಲೂನಿಗೆ ಬಿಡಯ್ಯ' ಎಂಬ ಬೇಡಿಕೆ ಗಿರಿಯಿಂದ ಬಂದಿದೆ. ಸರಿ ಅಂತ ಇಬ್ಬರೂ ಸಲೂನಿನ ಬಾಗಿಲಿಗೆ ತಲುಪುವಷ್ಟರಲ್ಲಿ ಗಿರಿಗೆ ಒಂದು ಕ್ರೇಜಿ ಐಡಿಯಾ ಹೊಳೆದಿದೆ.

'ಇಬ್ಬರೂ ಬೋಳು ಹೊಡೆಸಿದರೆ ಹೇಗೆ, ಸ್ವಲ್ಪ ದಿನ ಏನೋ ಒಂಥರಾ ಡಿಫರೆಂಟಾಗಿ ಇರುತ್ತೆ' ಅಂದಿದ್ದಾನೆ ಗಿರಿ. ಪಾಪ ಮುಗ್ಧ ಮಂಜುಗೆ ಏನನ್ನಿಸಿತೊ ಏನೋ ಕೋಲೆಬಸವನಂತೆ ತಲೆ ಅಲ್ಲಾಡಿಸಿ 'ಓ.... ಸರಿ' ಅಂದವನೇ ಸೀದಾ ಹೋಗಿ ಖಾಲಿಯಿದ್ದ ಒಂದು ಚೇರಿನಲ್ಲಿ ಕೂತಿದ್ದಾನೆ. ಕ್ಷೌರಿಕ ಕೂಡಲೇ ತಲೆ ನೆನೆಸಿ ಹಿಂಭಾಗದಲ್ಲಿ ಮೂರು ಬಾರಿ ರೇಜರ್ ಎಳೆದಿದ್ದಾನೆ. ಕ್ಷಣಾರ್ಧದಲ್ಲಿ ಮಂಜನ ಅರ್ಧ ಕೂದಲು ಖಾಲಿ ಆಗಿದ್ದು ನೋಡಿ ಇನ್ನೊಂಥರಾ ಫೀಲ್ ಆದ ಗಿರಿ ಕೂಡಲೇ ತನ್ನ ಗರ್ಲ್‌ಫ್ರೆಂಡ್‌ಗೆ ಫೋನ್ ಮಾಡಿ ಸಲಹೆ ಕೇಳಿದ್ದಾನೆ. ಅತ್ತಲಿಂದ ಮಾತಾಡಿದ ಹುಡುಗಿ 'ಬೆಂಕಿ ಹಾಕ್ತು ನಿನ್ನ ಐಡಿಯಾಗೆ, ನೀನೇನಾದರೂ ಗುಂಡು ಹೊಡೆಸಿಕೊಂಡರೆ ನನ್ನ ಫ್ರೆಂಡ್‌ಶಿಪ್ ಪ್ರದೇಶದಿಂದ ಹೊರಗಿರಬೇಕಾಗುತ್ತೆ ಹುಷಾರ್' ಅಂತ ಧಮಕಿ ಹಾಕಿದ್ದಾಳೆ. ತನ್ನ ಹುಡುಗ ಉದ್ದನೆ ಕೂದಲು ಬಿಟ್ಟುಕೊಂಡು ಚೆಂದವಾಗಿರಲಿ ಅಂತ ಆಕೆಗೆ ಆಸೆ.

ಅಷ್ಟರಲ್ಲಿ ಇನ್ನೊಂದು ಕುರ್ಚಿ ಖಾಲಿ ಆಯ್ತು. ಮಂಜು 'ಬಾರೋ ಗಿರಿ,' ಅಂದ. ಮತ್ತೊಬ್ಬ ಕ್ಷೌರಿಕ ರೇಜರ್ ಕೈಗೆತ್ತಿಕೊಂಡು ಮಸೆಯತೊಡಗಿದ. ಕಂಗಾಲಾದ ಗಿರಿ 'ಗುರು, ಯಾಕೋ ಬೇಡಾ ಅನ್ನಿಸ್ತಿದೆ. ಬೇಕಾದ್ರೆ ನೀನು ಒಂದು ಸರಿ ನಿನ್ನ ಹೆಂಡತೀನ ಕೇಳಿ ಮುಂದುವರಿ' ಅಂತ ಪುಕ್ಕಟೆ ಸಲಹೆ ಕೊಟ್ಟ. ಮಂಜ ಹಿಂಬದಿ ಕನ್ನಡೀಲಿ ನೋಡಿಕೊಂಡರೆ ಅಲ್ಲಿಂದ ಕಾಣಿಸಿದ್ದು ಖಾಲಿ ಹಿಂತಲೆ. ಹೊಸ ಐಡಿಯಾನ ಬೇಡ ಅಂದ್ರೂ ಅರ್ಧಕ್ಕೆ ನಿಲ್ಲಿಸುವಂತಿಲ್ಲ. ಆದರೆ ಆ ಧೈರ್ಯಶಾಲಿ ಪತ್ರಕರ್ತ ಅಂತಹ ಬಿಕ್ಕಟ್ಟಿನಲ್ಲೂ ಆತ್ಮಾಭಿಮಾನ ಪ್ರದರ್ಶಿಸುತ್ತಾ 'ನಾನು ನಿನ್ ಥರ ಹೆಂಡತಿ ಗುಲಾಮ ಅಲ್ಲ. ನನಗಿಷ್ಟ ಬಂದಿದ್ದು ಮಾಡೇ ಮಾಡ್ತೀನಿ' ಅಂದವನೇ ಪೂರ್ತಿ ಬೋಳು ಹೊಡೆಸಿಕೊಂಡು ಗೆಳೆಯನನ್ನು ರಸ್ತೇಲಿ ತಬ್ಬಲಿ ಮಾಡಿ ಜಾಗ ಖಾಲಿ ಮಾಡಿಬಿಟ್ಟ. ಪಾಪ ಅವನಿಗೆ ಬೇರೆ ದಾರಿನೂ ಇರಲಿಲ್ಲ ಅನ್ನಿ.

ಅಸಲಿಯತ್ತೇನೆಂದರೆ ಯಾವುದೋ ಹೊಸ ಸಿನಿಮಾದಲ್ಲಿ ಒಂದೇ ಪಾತ್ರಕ್ಕಾಗಿ ಇವರಿಬ್ಬರೂ try ಮಾಡ್ತಿದ್ದರಂತೆ. ಮಂಜನನ್ನು ಸ್ಪರ್ಧೆಯಿಂದ ಆಚೆ ಇಡಲು ಗಿರಿ ಮಾಡಿದ್ದ ಉಪಾಯ ಇದು ಅಂತ ಫ್ರೆಶ್ಶಾಗಿರುವ ರೂಮರ್.

ದಿಕ್ಸೂಚಿ ಮತ್ತೆ ಬಂತು

ದಿಕ್ಸೂಚಿ ಮಾಸಪತ್ರಿಕೆ ಮತ್ತೆ ಚಾಲನೆ ಪಡೆದುಕೊಂಡಿದೆ. ಪಾಟೀಲರದ್ದು ಅದಮ್ಯ ಚೇತನ ಅವರ ಮರು ಪ್ರಯತ್ನಕ್ಕೆ ಯಶಸ್ಸು ಸಿಗಲಿ ಅಂತ ನಮ್ಮ ಹಾರೈಕೆ. ಇದೇ ವಿಚಾರದಲ್ಲಿ ನಾನು ಪಶ್ಚಾತ್ತಾಪ ಪಡಬೇಕಾದ ಘಟನೆ ನಡೆದಿದೆ. 'ಲಂಕೇಶ್'ನ ಅಕ್ಟೋಬರ್ 10ರ ಸಂಚಿಕೆಯಲ್ಲಿ ದಿಕ್ಸೂಚಿ ನಿಂತು ಹೋದ ಬಗ್ಗೆ ನಾನೊಂದು ಚಿಕ್ಕ ಟಿಪ್ಪಣಿ ಬರೆದಿದ್ದೆ. ಎರಡು ಪ್ಯಾರಾಗಳ ಚಿಕ್ಕ ಕಾಮೆಂಟ್ ಅದು. ಆದರೆ ಲಂಕೇಶ್ ಪ್ರಿಂಟಾಗಿ ಬಂದ ಮೇಲೆ ಗೊತ್ತಾಯಿತು ದಿಕ್ಸೂಚಿ ಮತ್ತೆ ಪ್ರಕಟವಾಗಿದೆ ಅಂತ. ಆರು ತಿಂಗಳು ನಿಂತುಹೋಗಿದ್ದ ದಿಕ್ಸೂಚಿ ಪತ್ರಿಕೆ ಬಗ್ಗೆ ನಾನು ಬರೆದದ್ದು ಬೇರಿನ್ನಾವ ದುರುದ್ದೇಶದಿಂದಲೂ ಅಲ್ಲ. ಪತ್ರಿಕೋದ್ಯಮದ ವ್ಯವಹಾರಗಳು ಎಷ್ಟು ಸಂಕೀರ್ಣ ಇರುತ್ತವೆಂಬ ಕಾರಣಕ್ಕಷ್ಟೇ. ಆದರೆ ಮತ್ತೆ ದಿಕ್ಸೂಚಿಯ ಚುಕ್ಕಾಣಿ ಹಿಡಿದಿರುವ ಪಾಟೀಲರಿಗೆ ಈ ಟಿಪ್ಪಣಿ ಬಹಳ hurt ಮಾಡಿದೆ. ಅದನ್ನು ತಿಳಿಸಿ ಅವರು ಐದು ಪುಟಗಳ ದೀರ್ಘ ಪತ್ರವನ್ನು ಬರೆದಿದ್ದಾರೆ. ಸಿಟ್ಟು, ಹತಾಶೆ, ವ್ಯಂಗ್ಯ ಆಶಾಭಾವನೆ ಗಳೆಲ್ಲವೂ ಇರುವ ಆ ಪತ್ರದ ಒಟ್ಟು ಸಾರಾಂಶ ಅದು.

ಆ ಕಾಮೆಂಟ್‌ನಿಂದ ಪಾಟೀಲರು ನೊಂದುಕೊಳ್ಳದಿರಲಿ, ದಿಕ್ಸೂಚಿ ನಿಲ್ಲದಿರಲಿ

ಕತೆ

ಅವಳು

ಉರ್ದು ಮೂಲ: ರಶೀದ್ ಜಹಾನ್

ಕನ್ನಡಕ್ಕೆ :
ಸುಕನ್ಯಾ ಕನಾರಳ್ಳಿ

ಅವಳ ಹತ್ತಿರ ಕನ್ನಡಿಯೆನ್ನುವುದು ಇದೆಯೆ? ಹೊಲಸು ಬದುಕನ್ನು ಬಾಳಿದ್ದಕ್ಕೆ ಪರಿಣಾಮವನ್ನು ಅನುಭವಿಸುತ್ತಿದ್ದೇನೆ ಎಂದು ಅವಳಿಗೆ ತಿಳಿದಿದೆಯೆ? ಮನೆ, ಮಠ, ಕುಟುಂಬ ಏನಾದರೂ ಇದೆಯೆ? ಎಲ್ಲಿ ವಾಸಿಸುತ್ತಿದ್ದಾಳೆ? ಎಲ್ಲಿಯವಳು? ಅವಳೊಬ್ಬ ರೋಗಿಯಷ್ಟೇ ಎಂದು ನಾನು ತಿಳಿದುಕೊಂಡಿದ್ದೇನೆ ಎಂದು ಅವಳು ನಂಬಿದ್ದಾಳೆಯೆ?

ನಾನವಳನ್ನು ಮೊದಲು ಕಂಡಿದ್ದು ಆಸ್ಪತ್ರೆಯಲ್ಲಿ, ಅವಳಂತೆಯೇ ನಾನೂ ಸಹ ಚಿಕಿತ್ಸೆಗೆಂದು ಅಲ್ಲಿಗೆ ಹೋಗಿದ್ದೆ. ಅವಳನ್ನು ನೋಡಿದ್ದೇ ಅಲ್ಲಿಯ ಹೆಂಗಸರು ಮುಖ ತಿರುಗಿಸಿಕೊಂಡರು. ಡಾಕ್ಟರರ ಕಣ್ಣುಗಳೂ ಸಹ ಅತೀವ ಜಿಗುಪ್ಸೆಯಲ್ಲಿ ಒಂದು ಕ್ಷಣ ಮುಚ್ಚಿದವು. ನನಗೂ ಮನಸ್ಸು ಹೇವರಿಸಿತ್ತು, ಆದರೂ ಸಹ ನೇರವಾಗಿ ಅವಳ ಮುಖವನ್ನೇ ದಿಟ್ಟಿಸಿ ಹೇಗೋ ನಗುವೊಂದನ್ನು ಬೀರುವುದರಲ್ಲಿ ಸಫಲಳಾದೆ. ಅವಳೂ ನನ್ನನ್ನು ನೋಡಿ ನಕ್ಕಳೆ, ಅಥವಾ ನಗಲೆತ್ನಿಸಿದಳೆ? ಏನೋ ಗೊತ್ತಿಲ್ಲ... ಅವಳಿಗೆ ಮೂಗೇ ಇರಲಿಲ್ಲ. ಅದರ ಸ್ಥಳದಲ್ಲಿ ತೆರೆದುಕೊಂಡಿದ್ದ ಎರಡು ಹಸಿ ಬಿರುಕುಗಳು ನಮ್ಮನ್ನೇ ದಿಟ್ಟಿಸುತ್ತಿದ್ದಂತೆ ಭಾಸವಾಗುತ್ತಿತ್ತು. ಅವಳು ಒಂದು ಕಣ್ಣನ್ನು ಕಳೆದುಕೊಂಡಿದ್ದಳು. ಇದ್ದ ಒಂದೇ ಕಣ್ಣಿನಲ್ಲಿ ನೋಡಲು ಪೂರ್ತಿ ಕತ್ತನ್ನೇ ತಿರುಗಿಸಬೇಕಿತ್ತು.

ಔಷಧಿಯ ಕೌಂಟರಿನಲ್ಲಿ ಮತ್ತೆ ಒಬ್ಬರಿಗೊಬ್ಬರ ಢಿಕ್ಕಿ ಭೇಟಿ! ವಿಚಿತ್ರವಾಗಿ ಮೂಗಿನಿಂದ ಸ್ವರವನ್ನು ಹೊರಡಿಸುತ್ತ ನಾನು ವಾಸವಾಗಿರುವುದೆಲ್ಲಿ ಎಂದು ಕೇಳಿದಳು. ನನ್ನ ವಿಳಾಸವನ್ನು ಅವಳಿಗಿತ್ತೆ. ಅವಳ ಔಷಧಿ ಚೀಟಿಯನ್ನು ಪಡೆದು ಅಲ್ಲಿಂದ ನಡೆದಳು. ತಕ್ಷಣವೇ, ನಾನು ಕೇಳದೆಯೇ, ಆ ಔಷಧಿ ಕೌಂಟರಿನ ವ್ಯಕ್ತಿ "ಅವಳೊಬ್ಬ ಮಹಾ ನೀಚ ಹೆಂಗಸು, ಕುಲಟೆ, ಹೊಲಸು ಸೂಳೆ! ಇಂಚಿಂಚೇ ಕೊಳೆತು ನಾರುತ್ತಿದ್ದಾಳೆ. ಈಗ ಟ್ರೀಟ್‌ಮೆಂಟ್ ಬೇಕಂತೆ! ಈ ಡಾಕ್ಟರರಿಗೂ ಬುದ್ಧಿಯಿಲ್ಲ, ಪ್ರತಿ ಸಲ ಔಷಧಿ ಚೀಟಿಯೊಂದನ್ನು ಕೊಡುತ್ತಾರೆ. ಈ ಹೊಲಸು ರಂಡೆಯನ್ನು ಮತ್ತೆ ಬಾರದ ಕಡೆಗೆ ಅಟ್ಟಬೇಕು. ಮತ್ತಿನ್ನೇನು? ಮಾನಗೆಟ್ಟ ಹಾದರಗಿತ್ತಿ!" ಎಂದೆಲ್ಲಾ ಬಡಬಡಿಸಿದ.

ನಾನು ಬಾಲಕಿಯರ ಶಾಲೆಯೊಂದರಲ್ಲಿ ಕೆಲಸ ಮಾಡುತ್ತಿದ್ದೆ, ಆಗಿನ್ನೂ ಕಾಲೇಜಿನಿಂದ ಹೊರಬಂದಿದ್ದೆ. ನನ್ನ ಮಟ್ಟಿಗೆ ಭವಿಷ್ಯವೆಂಬ ತೋಟದಲ್ಲಿ ಇದ್ದ ಹೂಗಳೆಲ್ಲವೂ ಮಲ್ಲಿಗೆ, ಗುಲಾಬಿಯ ಕಂಪನ್ನು ಪಡೆದಿದ್ದವು. ಪ್ರಪಂಚವೇ ನನ್ನ ಕಾಲಡಿಯಲ್ಲಿದ್ದ ಹುಮ್ಮಸ್ಸು. ಬದುಕೆನ್ನುವುದು ಬೆಳದಿಂಗಳ ಬೆಳಕಲ್ಲಿ ಒಂದು ಕಡೆ ಮೃದುವಾದ ಅಲೆಗಳನ್ನೆಬ್ಬಿಸಿ, ಇನ್ನೊಂದೆಡೆ ಧಾರೆಧಾರೆಯಾಗಿ ಬಳುಕುತ್ತಾ, ಬಾಗುತ್ತಾ, ಹರಿಯುತ್ತಿದ್ದ ಸುಂದರ ತೊರೆ. ನಾನಾಗ ಅತ್ಯಂತ ಸುಖಿಯಾಗಿದ್ದೆ. ನೋವಿನ ಪರಿಚಯವೇನೆಂದರೇ ಗೊತ್ತಿರಲಿಲ್ಲ, ನನ್ನ ಅಧ್ಯಾಪಕ ವೃತ್ತಿ ಸಹ ಕಾಲ ಕಳೆಯಲು ನನಗೊಂದು ಹವ್ಯಾಸ ಅಷ್ಟೇ. ಅಸ್ತಿತ್ವವೆಂದರೇ ನಾಳೆಯನ್ನು ಕುತೂಹಲದಿಂದ ಕಾಯುವ ಕೇಲುಗಣ್ಣಿನ ನಿರೀಕ್ಷೆ.

ಚೊಂದದ ಪರದೆ ಮೇಲೆದ್ದಿತು. ಅವಳು ಸೀದಾ [illegible] ರೂಮಿನ ಒಳಗೆ ಬಂದಳು. ದಿಗ್ಮೂಢಳಾಗಿ ಕುರ್ಚಿ ಬಿಟ್ಟೆದ್ದ ನನ್ನ ಬಾಯಲ್ಲಿ ಅರಿವಿಲ್ಲದಂತೆಯೇ "ಕುಳಿತುಕೊಳ್ಳಿ" ಎಂಬ ಪದ ಹೊರಬಿದ್ದಿತ್ತು! ಒಂದುಗಳಿಗೆ ಅನುಮಾನಿಸಿ ಕೂತೇಬಿಟ್ಟಳು. ಅವಳ ಮುಷ್ಟಿಯಲ್ಲೊಂದು ಅರಳುಮಲ್ಲಿಗೆ! ಅದನ್ನು ನನಗೋಸ್ಕರ ಟೇಬಲ್ಲಿನ ಮೇಲಿಟ್ಟಳು. ಅದನ್ನು ನನ್ನ ಕೈಗೆ ತೆಗೆದುಕೊಳ್ಳುತ್ತಿದ್ದಂತೆ ಹೇಸಿಗೆಯ ಭಾವವೊಂದು ಮೆಲ್ಲನೆ ನನ್ನನ್ನು ಆವರಿಸಿತು. ಆದರೂ ಹೇಗೋ ಮುಡಿಯಲ್ಲಿಟ್ಟುಕೊಂಡೆ. ಒಂದು ತೆಳುವಾದ ನಗು ಬೀರಿ ಎದ್ದು ತಕ್ಷಣವೇ ಹೊರಟು ಹೋದಳು.

ಬಲು ಬೇಗನೆ ಇದು ಪ್ರತಿನಿತ್ಯದ ಘಟನೆಯಾಯಿತು. ಪ್ರತಿದಿನ ವಿರಾಮದ ಕಾಲದಲ್ಲಿ ಪರದೆಯನ್ನೆತ್ತಿ ಒಳಬರುತ್ತಿದ್ದಳು. ತಗ್ಗಿದ ದನಿಯಲ್ಲಿ "ಕುಳಿತುಕೊಳ್ಳಿ" ಎಂದು ಹೇಳುತ್ತಿದ್ದೆ. ದಿನವೂ ನನಗೋಸ್ಕರ ಹೂವೊಂದನ್ನು ತಂದು ನನ್ನೆದುರಿನ ಟೇಬಲ್ಲಿನ ಮೇಲಿಡುತ್ತಿದ್ದಳು.

ಉಳಿದ ಅಧ್ಯಾಪಕಿಯರು ಅವಳು ಬಂದುಹೋಗುತ್ತಿದ್ದರ ಬಗ್ಗೆ ನನ್ನನ್ನು ರೇಗಿಸಲು ಪ್ರಾರಂಭಿಸಿದರು. ಅವಳು ಕುಳಿತ ಕುರ್ಚಿಯಲ್ಲಿ ಯಾರೂ ಕೂರುತ್ತಿರಲಿಲ್ಲ, ಅದೂ ಸರಿಯೆ. ಅವರ ಮೇಲೇಕೆ ತಪ್ಪು ಹೊರಿಸಬೇಕು?



ಅವಳನ್ನು ನೋಡಿದರೇ ಅಸಹ್ಯ ಹುಟ್ಟುತ್ತಿತ್ತು. ಉಳಿದವರು ಯಾಕೆ, ನಾನೂ ಸಹ ಅವಳು ಕೂರುತ್ತಿದ್ದ ಕುರ್ಚಿಯನ್ನು ಮುಟ್ಟುವುದು ಸಾಧ್ಯವಾಗುತ್ತಿರಲಿಲ್ಲ.

ಎಷ್ಟೋ ವರ್ಷದಿಂದ ಸ್ಕೂಲಿನ ಕಸಗುಡಿಸುತ್ತಿದ್ದ ನಮ್ಮ ನಸೀಬನ್ ಸಹ ಗುರುಗುಟ್ಟಲಾರಂಭಿಸಿದಳು. "ಅಯ್ಯ ಇದೇನಿದು? ಈ ಹೊಸ ಟೀಚರಮ್ಮನ ವರಸೇ? ಎಲ್ಲಾ ಬಿಟ್ಟು ಈ ದರಿದ್ರ ಕೊಳಕು ಹೆಂಗಸನ್ನ ಎಲ್ಲಿಂದ ಜತೆ ಮಾಡ್ಕಂಡ ರಪ್ಪ!! ಅದು ಕೂತ್ಕಳ ಕುರ್ಚಿನಾ ನಾ ಯಾಕೆ ಸುದ್ದ ಮಾಡ್ಬೇಕೂ ಅಂತೀನಿ?"

ಪ್ರಿನ್ಸಿಪಾಲರಿಗೂ ಸಹ ಕಿರಿಕಿರಿಯಾಗಿತ್ತು, ದರ್ಪದಿಂದ ಮೇಲೇರಿ ಕೆಳಗೆ ಬಾಗಿದ್ದ ಹುಬ್ಬುಗಳನ್ನು ಪ್ರದರ್ಶಿಸಿ "ಅವಳನ್ನ ಸ್ಕೂಲಿಗೇ ಆಹ್ವಾನಿಸಬೇಕಿತ್ತೇನು? ಅವಳಂತ ನೀತಿಗೆಟ್ಟ ಹೆಂಗುಸು ಸ್ಕೂಲೊಳಗೆ ಬರುತ್ತಿದ್ದರೆ ಮಕ್ಕಳ ಪೇರೆಂಟ್ಸ್ ಏನೆಂದಾರು?" ಎಂದು ಕೇಳಿದರು.

ಯಾವುದು ಏನೇ ಇರಲಿ, ಅವಳು ಮಾರನೆಯ ದಿನವೂ ಹಾಜರಾಗುತ್ತಿದ್ದಳು. "ಕುಳಿತುಕೊಳ್ಳಿ" ಎಂದು ನಾನು ಪಿಸುಗುಡುವುದು, ಅವಳು ಕುಳಿತುಕೊಳ್ಳುವುದು ನಡೆದೇ ಇತ್ತು, ಈಗೀಗ ಸ್ವಲ್ಪ ಹೆಚ್ಚು ಹೊತ್ತೇ ಕುಳಿತಿರುತ್ತಿದ್ದಳು. ನನ್ನನ್ನೇ ಬಿರುಗಣ್ಣಲ್ಲಿ ನೋಡುತ್ತಿದ್ದರೂ ಸಹ ನಾವು ಪರಸ್ಪರ ಯಾವತ್ತೂ ಮಾತಾಡಿರಲಿಲ್ಲ, ಅವಳ ಬಗ್ಗೆ ಜನಗೇನೂ ಗೊತ್ತಿಲ್ಲವೆಂದು ಅವಳು ಅಂದುಕೊಂಡಿದ್ದಾಳೆಯೆ ಎಂದು ಗಲಿಬಿಲಿಗೊಳ್ಳುತ್ತಿದ್ದೆ, ಎದುರಿಗೆ ಕೂತು ಮೂಗಿಲ್ಲದ ವಿಕಾರ ಮುಖದಲ್ಲಿ, ಆ ವಕ್ರಗಣ್ಣಿನಲ್ಲಿ, ನನ್ನನ್ನೇ ನೋಡುತ್ತಾ ಕೂತುಬಿಡುತ್ತಿದ್ದಳು. ಕೆಲವೊಮ್ಮೆ ಅವಳ ಕಣ್ಣುಗಳು ತುಂಬಿರುತ್ತಿದ್ದವು ಎಂದು ನನಗೆ ಭಾಸವಾಗುತ್ತಿತ್ತು, ಅವಳ ಮನಸ್ಸಿನಲ್ಲಿ ಏನು ನಡೆಯುತ್ತಿರಬಹುದು ಎಂದು ಅಚ್ಚರಿಗೊಳ್ಳುತ್ತಿದ್ದೆ, ಅವಳನ್ನು ಕೇಳಬೇಕೆನ್ನಿಸಿತು. ಆದರೆ ಪ್ರಾರಂಭಿಸುವುದು ಹೇಗೆ?

ಅವಳು ಬಂದ ತಕ್ಷಣ ಉಳಿದ ಅಧ್ಯಾಪಕಿಯರು ಆಗಾಗ್ಗೆ ಕುರ್ಚಿ ಬಿಟ್ಟೆದ್ದು ಹೊರಗೆ ಹೋಗುತ್ತಿದ್ದರು. "ಸಫಿಯಾಳ ಅಭಿಮಾನಿ— ಅದೇ ಅವಳು- ಬಂದಿದಾಳೆ!" ಎಂದು ಇಂಗ್ಲಿಷಿನಲ್ಲಿ ಚುಚ್ಚುತ್ತಿದ್ದರು.

"ಬನ್ನಿ ನಾವೆಲ್ಲಾ ಹೋಗಿ ಲೈಬ್ರರಿಯಲ್ಲಿ ಕೂತಿರೋಣ."

"ಆ ಮುಖ ನೋಡಿ! ಅಯ್ಯಮ್ಮ! ವಾಕರಿಕೆ ಬರುತ್ತೆ" ಎಂದು ಅವರಲ್ಲೊಬ್ಬರು ಗೊಣಗಿದರು. "ನೆನಸಿಕೊಂಡರೆ ಊಟ ಮಾಡಬೇಕೆನ್ನಿಸುವುದಿಲ್ಲ, ಸಫಿಯಾ, ವಾಂತಿ ಬಂದ ಹಾಗಾಗುತ್ತೆ."

"ಆದರೂ ಅವಳ ಆಯ್ಕೆ ಸರಿಯಾಗಿಯೇ ಇದೆಯಲ್ಲ? ನಿನ್ನಂಥ ಸುಂದರಿಯೇ ಇಲ್ಲ ಸಫಿಯಾ!"

"ಥತ್! ಅದು ಎದುರು ಬಂದಾಗೆಲ್ಲಾ ನೀನು ಪರ್ದಾ ಒಳಗೆ ಅವಿತುಕೊಳ್ಳುವುದು ಮೇಲು," ಇಸ್ಲಾಮಿಕ್ ಧರ್ಮಶಾಸ್ತ್ರವನ್ನು ಬೋಧಿಸುತ್ತಿದ್ದ ಸ್ಥೂಲದೇಹಿ, ಗೌರವಾನ್ವಿತ ಮೇಡಮ್ ನುಡಿದರು.

ಅಂತೂ ದಿನಗಳು ಕಳೆಯುತ್ತಿದ್ದವು. ನನ್ನ ವೃತ್ತಿಯನ್ನು ಮುಂದುವರೆಸಿದೆ. ಅವಳು ಎದುರು ಕೂತು ನನ್ನನ್ನೇ ದಿಟ್ಟಿಸುವುದನ್ನೂ ಮುಂದುವರೆಸಿದಳು. ನನಗೆ ಇರಿಸುಮುರುಸೆನ್ನಿಸಹತ್ತಿತು. ಬರಬರನೆ ಅದೇನನ್ನು ನೋಡುತ್ತಿರುತ್ತಾಳೆ? ಅವಳ ಮನಸ್ಸಿನಲ್ಲಿ ಏನು ನಡೆಯುತ್ತಿದೆ? ಒಂದಾನೊಂದು ಕಾಲದಲ್ಲಿ ಅವಳು ನನ್ನ ತರಹವೇ ಇದ್ದಿರಬಹುದೆ? ಸಣ್ಣಗೆ ನಡುಗಿದೆ.

ಮತ್ತೆ ಅದೋ ಬಂದಳಲ್ಲ! ಅವಳು ಇಲ್ಲಿಗೆ ಯಾಕಾದರೂ ಬರುತ್ತಾಳೋ. ಜನ ಅವಳನ್ನು ಕಂಡರೇ ಹೇವರಿಸಿಕೊಳ್ಳುತ್ತಾರೆ ಎನ್ನುವುದು ಅವಳಿಗೆ ತಿಳಿಯದೆ? ಹಲವು ಸಲ ಅವಳ ಮೂಗಿನ್ನಿಕೊಂಡ ತೂತುಗಳಿಂದ ಏನೋ ಹರಿದುಬರುತ್ತಿತ್ತು.

ಇಲ್ಲ, ಇದಕ್ಕೇನಾದರೂ ಮಾಡಿ ವಿರಾಮ ಹಾಡಲೇಬೇಕು ಎಂದು ನಿರ್ಧಾರ ಮಾಡಿಕೊಳ್ಳುತ್ತಿದ್ದೆ, [illegible] ಹೇಳಿದ್ದೂ ಸರಿಯೆ. ಇತ್ತೀಚೆಗೆ ವಿದ್ಯಾರ್ಥಿಗಳಲ್ಲಿ ಗುಸುಗುಸು ಬೆಳೆದಿತ್ತು, ಏನಾದರೇನು? ಮಾರನೆಯ ದಿನ ಅವಳು ಹಾಜರಾದಾಗ ಕುರ್ಚಿಯೊಂದನ್ನು ಅವಳೆಡೆಗೆ ತಳ್ಳುತ್ತಾ "ದಯವಿಟ್ಟು ಕುಳಿತುಕೊಳ್ಳಿ" ಎಂದು ಕ್ಷೀಣದನಿಯಲ್ಲಿ ಉಸುರುತ್ತಿದ್ದೆ.

ಅವಳ ಹತ್ತಿರ ಕನ್ನಡಿಯೆನ್ನುವುದು ಇದೆಯೆ? ಹೊಲಸು ಬದುಕನ್ನು ಬಾಳಿದ್ದಕ್ಕೆ ಪರಿಣಾಮವನ್ನು ಅನುಭವಿಸುತ್ತಿದ್ದೇನೆ ಎಂದು ಅವಳಿಗೆ ತಿಳಿದಿದೆಯೆ? ಮನೆ, ಮಠ, ಕುಟುಂಬ ಏನಾದರೂ ಇದೆಯೆ? ಎಲ್ಲಿ ವಾಸಿಸುತ್ತಿದ್ದಾಳೆ? ಎಲ್ಲಿಯವಳು? ಅವಳೊಬ್ಬ ರೋಗಿಯಷ್ಟೇ ಎಂದು ನಾನು ತಿಳಿದುಕೊಂಡಿದ್ದೇನೆ ಎಂದು ಅವಳು ನಂಬಿದ್ದಾಳೆಯೆ?

ನನಗಂತೂ ವಿಪರೀತ ಮುಜುಗರವಾಗಹತ್ತಿತ್ತು, ಅವಮಾನದ ನೋವಿನಲ್ಲಿ ಕುದ್ದುಹೋದೆ. ಸ್ಕೂಲಿನಲ್ಲಿ ಎಲ್ಲರ ಲೇವಡಿಗೆ ನಾನೊಂದು ವಸ್ತುವಾಗಿದ್ದೆ, ಆದರೂ ಅವಳು ಹೂವನ್ನು ತಂದಿತ್ತಾಗೆಲ್ಲ ನನ್ನ ಹೆರಳಿಗೇರಿಸಿಕೊಳ್ಳುತ್ತಿದ್ದೆ. ಅವಳ ಮುಖದ ತುಂಬ ಹರಡಿಕೊಂಡ ನಗುವಿನಲ್ಲಿ ಸುಕ್ಕುಗಳು ಬಿರಿಯುತ್ತಿದ್ದವು. ರೆಪ್ಪೆಯನ್ನೂ ಮಿಟುಕಿಸದೆ ಅದೇಕೆ ಹಾಗೆ ದಿಟ್ಟಿಸುತ್ತಾಳೆ? ಅವಳು ಯಾರು? ಹಿಂದೆ ಏನಾಗಿದ್ದಳು? ಎಲ್ಲಿಂದ ಬಂದಳು? ಈ ಸ್ಥಿತಿಗೆ ಹೇಗೆ ಬಂದಳು? ಸ್ಕೂಲಿಗೆ ಬಂದಾಗೆಲ್ಲ ಅವಳ ಮನಸ್ಥಿತಿ ಏನಾಗಿರುತ್ತದೆ? ನೋವೆ? ಸಮಾಧಾನವೆ?

ಒಂದು ದಿನ, ಹೊರಡುವ ಮುನ್ನ, ಮೂಗನ್ನು ಜೋರಾಗಿ ಸೀಟಿ ಬೆರಳುಗಳನ್ನು ಗೋಡೆಗೆ ಒರೆಸಿದಳು. ಅವಳ ಬಗ್ಗೆ ಯಾವಾಗಲೂ ಕೋಪದಿಂದ ಕನಲುತ್ತಿದ್ದ ನಸೀಬನ್ ಅಲ್ಲೇ ಹತ್ತಿರದಲ್ಲಿ ಕೂತು ಕಿಂಡರ್‌ಗಾರ್ಟನ್ ಮಕ್ಕಳ ಸ್ಲೇಟುಗಳನ್ನು ಒದ್ದೆ ಬಟ್ಟೆಯಿಂದ ಒರೆಸುತ್ತಿದ್ದಳು. ಛಂಗನೆ ನೆಗೆದು ನಿಂತ ನಸೀಬನ್, ಶಕ್ತಿಯೆಲ್ಲವನ್ನೂ ಒಟ್ಟುಗೂಡಿಸಿ ಸ್ಲೇಟನಿಂದ ಆ ಹೆಂಗಸಿನ ಬೆನ್ನಿಗೆ ಜೋರಾಗಿ ಗುದ್ದಿದಳು. ಅಷ್ಟೇ, ಆ ಅವಳು ಭಯದಿಂದ ನಿಶ್ಚಲಳಾದಳು.

ಸ್ಕೂಲಿನಲ್ಲಿ ಇಪ್ಪತ್ತು ವರ್ಷಗಳ ಕಾಲ ಕೆಲಸ ಮಾಡುತ್ತಾ ಶಿಷ್ಟಾಚಾರವನ್ನು ಮೈಗೂಡಿಸಿಕೊಂಡಿದ್ದ ನಸೀಬನ್ನಳಿಗೆ, ತರಲೆ ಮಾಡುತ್ತಿದ್ದ ಹುಡುಗಿಯರಿಗೆ ಸರಿಯಾಗಿ ವರ್ತಿಸುವಂತೆ ಹಲವು ಬಾರಿ ಗದರುತ್ತಿದ್ದ ನಸೀಬನ್ನಳಿಗೆ, ಈ ದಿನ ಎಲ್ಲವೂ ಮರೆತುಹೋದಂತಿತ್ತು, ಮತ್ತೆ ಹಿಂದಿನ ಗಲ್ಲಿ ನಸೀಬನ್ ಮೈತಳೆದಿದ್ದಳು.

"ಥೂ ಹಲ್ಕಾಲೌಡಿ, ಸೂಳೆಮುಂಡೆ, ಏನಂದ್ಕಂಡಿದೀಯಾ? ನಿನ್ನೆ ಮೊನ್ನೆ ಗಿರಾಕಿಗಳನ್ನ ಹುಡಿಕ್ಕಂಡು ಬೀದಿ ಬೀದಿ ಅಲೀತಿದ್ದೆ? ಈಗ ನಿನ್ ವ್ಯಾಪಾರ ಎಲ್ಲ ಇಳ್ದು, ಕೊಳೆತ ಚರ್ಮ ಜೋತಾಡ್ತಾ ಇರೋವಾಗ ಮಹಾ ಸಭ್ಯಸ್ಥಳಂಗೆ ನಾಟ್ಕ ಬೇರೆ ಆಡ್ತಾ ಇದೀಯಾ?" ಎಂದು ಅರಚಿದಳು.

ಒಂದು ಒದೆತ ಬಿತ್ತು, ಮತ್ತೊಂದು. ಇನ್ನೊಂದು ಲಾತ! ಮುನ್ನುಗ್ಗಿ ನಸೀಬನ್ನಳನ್ನು ಹಿಡಿದೆಳೆದೆ. "ಏನ್ಮಾಡ್ತಾ ಇದೀಯ? ಮೈ ಮೇಲೆ ಪ್ರಜ್ಞೆ ಇದೆಯಾ ಹೇಗೆ?" ಎಂದು ಕಿರುಚಿದೆ. ಹುಡುಗಿಯರ ಒಂದು ದೊಡ್ಡ ಗುಂಪೇ ಜಮಾಯಿಸಿತು. ಹಲವಾರು ಅಧ್ಯಾಪಕಿಯರು ನಮ್ಮತ್ತಲೇ ಓಡಿ ಬರುತ್ತಿದ್ದರು.

ನಸೀಬನ್ ಎಲ್ಲ ಸ್ಥಿಮಿತವನ್ನೂ ಕಳೆದುಕೊಂಡಿದ್ದಳು. "ಇದೆಲ್ಲ ನಿಮ್ಮಿಂದ್ಲೇ ಆಗಿದ್ದು. ನಿಮ್ಮಿಂದ್ಲೇ ಅವಳಿಲ್ಲಿಗೆ ಕಾಲಿಡೋ ಧೈರ್ಯ ತೋರ್ಸಿದ್ದು" ನಸೀಬನ್ ಪನ್ನತ್ತ ಸಿಡಿದು ಹೇಳಿದಳು. "ಗಟಾರದಲ್ಲಿ ಕೊಳೀತಿದ್ ಈ ಹೊಲಸನ್ನ ಗೋರಿ ಇಲ್ಲಿಗ್ ತಂದ್ ಹಾಕಿದ್ರಿ. ಈಗ್ ನೋಡಿ, ಈ ಗೋಡೆ ಹಾಡು! ಹೊಲಸೆಬ್ಬಿದೆ ಈ ರಂಡೆ! ಇಪ್ಪತ್ತ್ ವರ್ಷದಿಂದ ಕಸ ಗುಡ್ಸೀದೀನಿ. ಹರಾಮಿರಂಡೇರೆಲ್ಲಾ ಸ್ಕೂಲಿಗ್ ಬಂದಿದ್ ಕಾಣೆ. ಇಲ್ಲ್ ನಂಗ್ ಕೆಲ್ಸ ಮಾಡಾಕಾಗ್ಲ, ಹೇಳಿದ್ನಲ್ಲ! ತಿಆದ್ರೆ ಬೇರೆ ಯಾರನ್ನಾದ್ರೂ ಹುಡುಕ್ಕೊಳಿ...ಇವ್ಳಂತಾ..."

ನಸೀಬನ್ ಮತ್ತೊಮ್ಮೆ ಅವಳ ಕಡೆ ನುಗ್ಗುವುದರಲ್ಲಿದ್ದಾಗ ಸುತ್ತಮುತ್ತಿದ್ದವರು ಅವಳನ್ನು ತಡೆದು ನಿಲ್ಲಿಸಿದರು. ನಾನು ಬಗ್ಗಿ ಅವಳನ್ನು ಮೇಲೆತ್ತಿದೆ. ಅವಳು ಅವಳ ಮೈಯನ್ನಿಡೀ ನಡುಗಿಸುತ್ತಿತ್ತು. [illegible] ಹಿಡಿದು ಮೆಲ್ಲಗೆ ಗೇಟಿನತ್ತ ಕರೆದೊಯ್ದೆ. ಕೆನ್ನೆಯ ಮೇಲೆ ರಕ್ತ ಹರಿಯುತ್ತಿತ್ತು. ಅವರ [illegible] ರಲಿಲ್ಲ, ಕೈಗಳಲ್ಲಿ ಮುಖವನ್ನು ಮುಚ್ಚಿಕೊಂಡು [illegible] ಬಿಟ್ಟು "ಈಗೆಲ್ಲ ಗೊತ್ತಾಯ್ತಲ್ಲ!" ಎಂದಷ್ಟೇ ಹೇಳಿ ಹೊರಟುಹೋದಳು.

ಅಪ್ಪ ಅಡ್ನಾಡಿ, ಮಗ ಕುಲಗೇಡಿಯಾದ್ರೆ ಹಿಂಗೆ ಆಗದು!

"ಇಪ್ಪತ್ತಂತೆ ಬಂದು ತೊಡೆದ ಅದ್ದ ಮಳೆಗೆ ಊರಿನ ಕೆರೆಕಟ್ಟೆಯೆಲ್ಲಾ ತುಂಬಿ ಕಾಳಮಾವನ ಮುಖ ಎಡ್ಯೂರಪ್ಪನ ಮುಖದಂತೆ ರಮ್ಯವಾಗಿತ್ತು. ಆಗ ವಿಧೀರನೆ ನುಗ್ಗಿ ಬಂದ ಉಗ್ರಿ ಒಂದಿಷ್ಟು ಉದ್ವೇಗವಳ್ಳಿ

"ಕಾಳಮಾವ, ಎಡೂರಪ್ಪನ ಸುದ್ದಿ ಗೊತ್ತಾಯ್ತೆ?" ಎಂದ.

"ಅವುನಿಗೇನಾಯಿತ್ಲ?"

"ಹಾಸ ಮದ್ದೆ ಬಿ.ಪಿ. ಗಿಪಿ ಅನ್ನಕಂಡು ಸರ್ಕಾರಿ ಆಸುಪತ್ರಿಗೋಯ್ತಿದ್ದಾ" ಎಂದು ಸೀರ ಇನ್ನೇನೊ ಹೇಳಲಿದ್ದಾಗ ತಡೆದ ಉಗ್ರಿ.

"ಏ ಅವುನಿಗೇನೂ ಆಗಿಲ್ಲ ಕಣೊ. ಮುಖ್ಯಮಂತ್ರಿ ಯಾಯ್ತಾ ಅವುನೆ ಗೊತ್ತೆ?"

"ತಗಳಪ್ಪ ಅವುನೆ ಆದನೋ ಯಾರಾರ ಮಾಡ್ತಯಿದ್ವರೊ?"

ಚಂದ್ರು ಸೀಮೆಯ ಕಟ್ಟೆಪುರಾಣ

ಬಿ. ಚಂದ್ರೇಗೌಡ

"ಅವುನೆ ಆಗಕ್ಕೆ ಯಂಗಾದತೊ ಮಾವ, ಇವುರೆ ಅಪ್ಪ ಮಕ್ಕಳು ಸೇರಿಕಂಡು ಮಾಡ್ತ ಅವುರೆ."

"ಇದೇನ್ಲ ಇಂತ ಆಟ ಆಡ್ತರಿವುರು?"

"ಅವುರುದು ಒಂದು ಕಾಲ. ಆಡ್ಲಿ ಬುಡು" ಎಂದಳು ಜುಮ್ಮಿ.

"ಆಡ್ಲಿ ಅಂತ ನೀನು ಸುಲಬಾಗೇಳ್ತಿ ಕಣೆ ಆದ್ರೆ, ಎಂ.ಪಿ. ಪ್ರಕಾಶನ ಕತೆ ಯೇಳೀಗ."

"ಅವುರದೇನು ಕತೆಲ್ಲ? ದ್ಯಾವೇಗೌಡುನ ಕುಟ್ಟೆ ಚನಾಗೆ ಅವುರೆ."

"ಚನ್ನಾಗಿದ್ದುದ್ದೆ ಕಣೆ ಬಂದಿದ್ದೀಗ. ಯಾವತ್ತೊ ಅಗ್ಗ ಹರಕಂಡು ಹೋಗಿದ್ರೆ ಇಂತ ಅವುಮಾನ್ನಲ್ಲ ಆಯ್ತಿರಲಿಲ್ಲ ಪಾಪ."

"ಅದೇನಾಯ್ತು ಸರಿಯಾಗೇಳ್ರ?"

"ಹೇಳಗಂಟ ಕೇಳೆ. ಈ ಅಪ್ಪ ಮಕ್ಕಳು ಬಿಜೆಪಿ ಜನಕೆ ಕೈ ಕೊಟ್ಟು ಮನೆ ಸೇರಿಕಂಡ್ರಲ್ಲಾ, ಸೇರಿಕಂಡ ಮ್ಯಾಲೆ ಏನಾಯ್ತವ್ವಾ ಅಂದ್ರೆ, ಇನ್ನು ಇಪ್ಪತ್ತು ತಿಂಗಳು ಶಾಸಕರಾಗಿ ಇರಬೇಕಾದೋರ್‍ನಲ್ಲ ದಿಕ್ಕುತಪ್ಪಿದಂಗಾದೊ."

"ಅವುರ್‍ಯಾಕ್ ದಿಕ್ ತಪ್ತರ್ಲ, ಯಮ್ಮೆಲ್ಲೆಗಳಲ್ವೆ?"

"ಥೂ, ಅವು ಯಮ್ಮೆಲ್ಲೆಗಳಾಗಿ ಉಳದಿಲ್ಲ ಕಣೇ, ಕುಮಾರಣ್ಣನ ಜ್ವತೆ ಸೇರಿಕಂಡು ರೆಸಾರ್ಟು, ಪಸಾರ್ಟು ಅಂತ ತಿರಿಕಂಡು ಕುಡುದು ತಿಂದು ಮಜ ಮಾಡಿಕಂಡು, ದುಡ್ಡು ಮಾಡಿಕಂದಿದ್ರೊ."

"ಅಂಗೆ ಮಾಡತಿದ್ದವೇನ್ಲ?"

"ಇದೇನೆ ವಸ್ತಾಗಿ ಕೇಳತಾಯಿದ್ದಿ? ಅವುರು ಗೆದ್ದಾಗಲಿಂದ ಮಾಡಿದ್ದು ಅವೆಯ. ಹಿಂಗಿರುವಾಗ ಇನ್ನು ಇಪ್ಪತ್ತು ತಿಂಗಳಿರಂಗೆ ಮನಿಗೆ ಬರದು ಅಂದ್ರೆ ಕಷ್ಟಾಗದಿಲವೆ?"

"ನಿಜ ಬುಡು."

"ಆಗ ಅವ್ಕಲ್ಲ ಸೇರಿಕಂಡು ಎಂ.ಪಿ. ಪ್ರಕಾಶನ ಮನಿಗೋಗಿ ಗೋಗರದವಂತೆ."

"ಏನಂತವಾ?"

"ನಾವಂತು ಮನಿಗೂ ಹೋಗದಿಲ್ಲ, ಚುನಾವಣೆಗೂ ಹೋಗದಿಲ್ಲ. ನೀವೆ ಏನಾರ ಮಾಡಿ ಕಾಂಗ್ರೆಸ್ ಜ್ವತಿಗೆ ಸೇರಿಕಂಡು ಸರ್ಕಾರ ಮಾಡಂಗೆ ಮಾಡಿ ಅಂದವಂತೆ. ಅದ್ಕೆ ಪ್ರಕಾಶ್ ಇರಿ-ಕಾಂಗ್ರೆಸ್ಸಿನೋರು ನನಿಗೂ ಗೊತ್ತು, ಅವುರ ಜ್ವತೆ ಮಾತಾಡಿಕಂಡು ಬತ್ತಿನಿ ಅಂತ ದಿಲ್ಲಿಗೋಗಿದ್ನಂತೆ."

"ಕಾಂಗ್ರೆಸಿನೋರು ಇಲ್ಲೆ ಇರುವಾಗ ಡಿಲ್ಲಿಗ್ಯಾಕೋ ಗಿದ್ದಾ?" ಎಂದ ಕಾಳಮಾವ.


"ಇಲ್ಲಿರವುಕೆ ಯಾವ ಪವರ್ರು ಇಲ್ಲ ಕಣಮಾವ. ಕರಗೆ ಪರಗೆ ಆ ಧ್ರಂಸಿಂಗ, ಸಿದ್ಧರಾಮಯ್ಯ ಯಾರಿಗೂ ಪವರಿಲ್ಲ, ಹೈಕಮಾಂಡು ಹೇಳಬೇಕು, ಇವು ಬಾಯಿಬುಡ ಬೇಕು. ಅಂಗದೆ ಪರಿಸ್ಥಿತಿ. ಅದ್ಕೆ ಪ್ರಕಾಶ್ ದಿಲ್ಲಿಗೋದ. ಅಲ್ಲಿಗೋದ್ರೆ ಸೋನಿಯಾ ಚೀನಾಕ್ಕೋಗಿದ್ಲು, ಇನ್ಯಾವನೋ ಗುಜರಾತಿಗೋಗಿದ್ದ. ಪ್ರಕಾಶ್ ವಾಪಸು ಬಂದ."

"ಬರಿಕೈಲಿ ಬಂದ ಅನ್ನು?"

"ಊ ಹೇಳದೆಕೇಳದೆ ಪ್ರಕಾಶ್ ದಿಲ್ಲಿಗೋಗಿ ಬಂದುದ್ದ ಕೇಳಿ ದ್ಯಾವೇಗೌಡನ ಪಟ್ಟಿಗೆ ಸುಣ್ಣ ಊದಂಗಾಯ್ತು."

"ಆಗದಿಲವೇನ್ಲ, ಬಡವಾ ನೀನು ಮಡಗಿದಂಗಿರು ಅನ್ನಂಗಿದ್ದ ಪ್ರಕಾಸ ಹೇಳದೆ ಕೇಳದೆ ದಿಲ್ಲಿಗೋಗಿ ಬಂದ ಅಂದ್ರೆ, ದ್ಯಾವೇಗೌಡ ಸಯಿಸ್ತನೆ?" ಎಂದ ಸೀರ.

"ಅಂಗೆ ಆಯ್ತು ಕಣ ಮಾವ. ಪ್ರಕಾಶ್ ಕಾಂಗ್ರೆಸ್ ಜ್ವತೆ ಸರಸ ಆಡದು ನೋಡಿ ದ್ಯಾವೇಗೌಡ ವಳಗೇ ರೆಡಿಯಾಯ್ತಾಯಿದ್ದ. ಆಟೊತ್ತಿಗಾಗ್ಲೆ ಪ್ರಕಾಶ್ ಕಾಂಗ್ರೆಸ್ ಹಳೆ ಮನೆವಳಿಕೋಗಿ ಶಿವಕುಮಾರ, ಸಿದ್ದರಾಮಯ್ಯ



ಇವುರನ್ನಲ್ಲ ಮಾತಾಡಿಸಿದನಂತೆ. ಯಾವಾಗ ಪ್ರಕಾಶ್ ಸಿದ್ದರಾಮಯ್ಯನ್ನ ಮಾತಾಡಿಸ್ತ ಅಂತ ಗೊತ್ತಾಯ್ತೋ, ದ್ಯಾವೇಗೌಡ ರಾತ್ರೋರಾತ್ರಿ ಕುಮಾರಸ್ವಾಮಿಗೇಳಿ ಬಿಜೆಪಿ ಸರ್ಕಾರಕ್ಕೆ ಸಪೋಟು ಮಾಡ್ತಿವಿ ಅಂದುಬುಡು ಅಂದ".

"ಅಪ್ಪ ಅಡ್ನಾಡಿ ಮಗ ಕುಲಗೇಡಿಯಾದ್ರೆ ಹಿಂಗೆ ಆಗದು" ಎಂದ ಸೀರ.

"ಸಿದ್ದರಾಮಯ್ಯನ್ನ ಮಾತಾಡಿಸಿದ್ಕೆ ಸಿಟ್ಟಾಗಿಬುಟ್ನೆ?" ಎಂದಳು ಜುಮ್ಮಿ.

"ಊ, ದ್ಯಾವೇಗೌಡ ಯಾರನ್ನಾದ್ರೂ ಸಯಿಸ್ಯನೆ. ಆದ್ರೆ ಶಿವಕುಮಾರ ಸಿದ್ದರಾಮಯ್ಯನ್ನ ಮಾತ್ರ ಸಯಿಸದಿಲವಂತೆ."

"ಅದ್ಯಾಕ್ಲ?"

"ಅದ ನಾನೇಲ್ತಿ ಕಣಕ್ಕ" ಎಂದುಕೊಂಡು ಹಾಜರಾದ ವಾಟಸ್ಸೆ.

"ಸಿದ್ದರಾಮಯ್ಯ, ಶಿವಕುಮಾರ್ ದ್ಯಾವೇಗೌಡನ ಕುಟುಂಬದ ವಿರೋಧಿಗಳು. ಅದ್ಕೆ ಅಲವೆ ಸಿದ್ದರಾಮಯ್ಯ ಚಾಮುಂಡೇಶ್ವರಿಲಿ ಚುನಾವಣೆಗೆ ನಿಂತಿದ್ದಾಗ ದ್ಯಾವೇಗೌಡನ ಕುಟುಂಬನೆ ಹೋಗಿ ಪ್ರಚಾರ ಮಾಡಿತ್ತು.

"ಚನ್ನಮ್ಮ ಮಾತ್ರ ಹೋಗಿರಲಿಲ್ಲವಂತೆ ಕಣೊ" ಎಂದು ಉಗ್ರಿ ನಗಾಡಿದ.

"ಅವುರು ಹೋಯ್ತಿದ್ದೇನೊ, ಆದ್ರೆ ಹೋಗೊ ಕಂಡಿಷನ್ನಲ್ಲಿ ಇರ್ಲಿಲ್ಲ, ಆದ್ರು ಉಗ್ರಿ ಈ ದ್ಯಾವೇಗೌಡ್ನು ಕುಮಾರಸ್ವಾಮಿನು ಸೇರಿಕಂಡು ನಮ್ಮ ಎಂ.ಪಿ. ಪ್ರಕಾಶನ್ನ ಮುಗಿಸಿದರಲ್ಲೊ."

"ಥೂ, ನೀನಂಗಂದಕಂಡಿದ್ದಿ ಅವುರೆ ಮುಗದೋದ್ರು ಕಣೊ."

"ಅದ್ಯಾಂಗೊ?"

"ಇವುರು ಬಿಜೆಪಿಗೆ ಕೈಕೊಟ್ಟೇಟಿಗೆ ಅವು ಈ ಅಪ್ಪಮಕ್ಕಳ ಶವಯಾತ್ರೆ ಮಾಡಿ, ಅದಕೆ ಮೆಟ್ಟನಲ್ಲಿ ವಡದು ಬೆಂಕಿಹಚ್ಚದ್ರು. ಅದೂ ಸಾಲ್ದು ಅಂತವ ಊರೂರು ಮ್ಯಾಲೆ ಬೈಯ್ಯಂಡು ಬಾಸಣ ಮಾಡಿಕಂಡು ತಿರುಗಿದ್ರು. ಅದ ನೋಡಿದ್ರೆ ಯಾರ ಕತೆ ಮುಗಿತು?"

"ನಿಜ ಕಣೊ ಉಗ್ರಿ. ಅದರಲ್ಲೂ ಆ ಎಡೂರಪ್ಪ ಕಣ್ಣಲ್ಲಿ ನೀರು ತುಂಬಿಕಂಡು ಮಾತೆಯರೇ, ನೀವು ದೇವರಲ್ಲಿ ಪ್ರಾರ್ಥನೆ ಮಾಡಿ, ಈ ಕುಮಾರಸ್ವಾಮಿಯಂತ ಮಗ ಹುಟ್ಟುಬಾರ್ದು, ಆ ದೇವೇಗೌಡನಂತ ಅಪ್ಪ ಯಾರಿಗೂ ಇರಬಾರ್ದು ಅಂಗೆ ಪೂಜೆ ಮಾಡಿ ಅಂದಿದ್ದ."

"ಅಲ್ಲಿಗೆ ಯಾರ ಕತೆ ಮುಗದದೇಳು?"


"ಇನ್ನು ಒಂದು ತಮಾಸಿ ಅದೆ ಕಣೊ ಉಗ್ರಿ."

"ಏನಪ್ಪ ಅದು?"

"ನಾವು ಪಾರಿನ್ನಿಗೆ ಹೋಗಂಗೇಯಿಲ್ಲ, ಅಂಗಾಗ್ಯ

ವಿಧಾನಸೌಧಕ್ಕೆ ಲಿಂಗಧಾರಣೆ ಕಸರತ್ತು

ಕಳೆದ ಅರವತ್ತರ ದಶಕದಲ್ಲಿರಬೇಕು. ಟಿ.ಎಸ್. ರಾಮಚಂದ್ರರಾಯರು ಪ್ರಜಾವಾಣಿ ದಿನಪತ್ರಿಕೆಯ 'ಛೂ ಬಾಣ'ದಲ್ಲಿ ಅಂದಿನ ಸರ್ಕಾರವನ್ನು ಕೆಣಕಿದ್ದರು- ವಿಧಾನಸೌಧದಲ್ಲಿ ಕೆಲಸ ಆಗಬೇಕಿದ್ದರೆ ದಾರ ಇದೆಯ ಅಂತ ನೋಡ್ತಾರಂತೆ. ದಾರಕ್ಕೆ ತೂಕಾನೂ ಇದೆಯ ಅಂತ ಗಮನಿಸುತ್ತಾರಂತೆ. ಅದು ಇದ್ದರೆ ಎಲ್ಲವೂ ಸುಲಲಿತವಾಗಿ ನೆರವೇರುವುದಂತೆ-ಈ ಅರ್ಥದ ಮಾತುಗಳು ಅವು. ವಚನಭ್ರಷ್ಟ ಕುಮಾರಸ್ವಾಮಿ ವಿರುದ್ಧ ಐದೂವರೆ ಕೋಟಿ ಕನ್ನಡಿಗರು ಪ್ರತಿಭಟನೆ ನಡೆಸುತ್ತಿದ್ದಾರೆ ಎಂಬುದಾಗಿ ಬಿಜೆಪಿ ಮುಖಂಡರು ಶಂಖ ಹೊಡೆಯುತ್ತಿದ್ದಾರಲ್ಲ... ಆದರೆ ಮೆಂಟಲ್ ಬ್ಲಾಕೋ ಏನು ಕತೆಯೋ ಇಂತಹ ಪ್ರತಿಭಟನ 'ಗಳಲ್ಲಿ ಬರೀ ವೀರಶೈವ ಮತಸ್ಥರೇ ಕಾಣುತ್ತಾರಲ್ಲ...



ಇವರ ಪ್ರತಿಭಟನೆ 'ವಚನ ಭ್ರಷ್ಟತೆ' ಕುರಿತೋ ಅಥವಾ ತಮ್ಮ ಕುಲಸ್ಥ ಯಡಿಯೂರಪ್ಪನವರಿಗೆ ಮುಖ್ಯಮಂತ್ರಿ ಪದವಿ ಕೈತಪ್ಪಿ ಹೋಯಿತಲ್ಲಾ ಅನ್ನುವ ಸಂಕಟಕ್ಕೋ ...ನ್ನುವುದೇ ತಿಳೀತಾ ಇಲ್ಲ, ಇದನ್ನೆಲ್ಲ ನೋಡಿದಾಗ ...ದೋ ಹೇಳಿದ್ದ ಟಿಎಸ್ಸಾರ್ ಮಾತು ನೆನಪಿಗೆ ಬಂತು.

ಐದೂವರೆ ಕೋಟಿ ಅಭಿಮಾನಿಗಳ ಹೆಣಭಾರ ಹೊತ್ತ ...ಡಿಯೂರಪ್ಪನವರ ಹೊರೆ ಇಳಿಸಲು, ಒಂದೆರಡು ...ವಾದಗಳಿದ್ದರೂ, ಮಠಾಧೀಶರುಗಳು ತುದಿಗಾಲ ಮೇಲೆ ನಿಂತಿದ್ದಾರೆ. ಆಧ್ಯಾತ್ಮ ಒಂದನ್ನು ಬಿಟ್ಟು ಮಿಕ್ಕೆಲ್ಲ ವಿಷಯ ಗಳಲ್ಲಿ ಪರಿಣಿತರುಂತೆ ಅಧಿಕೃತವಾಗಿ ಆಶೀರ್ವದಿಸುವ ಹಕ್ಕು ಇವರಿಗಿದೆ! ಇಂತಹವರು ಇನ್ನೂ ಇರುವುದರಿಂದಲೇ ಈ ಭೂಮಿ ಇನ್ನೂ ನಿಂತಿರುವುದು! ಇದನ್ನು ಅನುಮಾನಿಸುವವರು ದಯಮಾಡಿ ಕನ್ನಡಕ್ಕಾಗಿ ಹುತಾತ್ಮರಾಗಲು ಸಿದ್ಧರಿರುವ ಹಿರಿಯ ಸಾಹಿತಿಗಳು ಮೈಸೂರಿನ ಗಣಪತಿ ಸಚ್ಚಿದಾನಂದ ಸ್ವಾಮಿ ಅವರ ಸಮ್ಮುಖದಲ್ಲಿ ಹೇಳಿರುವ ಮಾತುಗಳನ್ನು ಗಮನಿಸಿ. ಅವರು ಹೇಳಿದ್ದು ಏನು ಅಂದರೆ ತಮ್ಮಂತಹವರು ಇನ್ನೂ ಇರುವುದರಿಂದಲೇ ಅನ್ಯಾಯ, ಸ್ವಾರ್ಥಿಗಳಿಂದಲೇ ತುಂಬಿರುವ ಈ ಭೂಮಿ ಇನ್ನೂ ಉಳಿದಿರುವುದು ಎಂಬರ್ಥದ ಮಾತುಗಳು. ಇಂತಹ ಸ್ವಾಮೀಜಿಗಳ, ಮಠಾಧೀಶರುಗಳ ಸಂಖ್ಯೆ ದಿನೇದಿನೇ ಹೆಚ್ಚಲಿ ಎಂದೂ ಅವರು ಆಶಿಸಿದರು. ಇದನ್ನು ಕೇಳಿ ಕೆಲವರು ಸಂದರ್ಭಕ್ಕೆ ತಕ್ಕಂತೆ ಮಾತುಗಳೂ ಹೊರಡುತ್ತವೆ: ಇದನ್ನು ನೋಡಿದಾಗ ಬೀಚಿಯವರು ಹೇಳಿದ್ದ ಒಂದು ಪ್ರಸಂಗ ನೆನಪಾಗುತ್ತದೆ. ಒಬ್ಬ ರಾಜಕಾರಣಿ ಇದ್ದನಂತೆ. ಸಂದರ್ಭಕ್ಕೆ ತಕ್ಕಂತೆ ಮಾತನಾಡುವ ಪ್ರಚಂಡ ಅವನು. ಪ್ರತಿಭಾ ಪುರಸ್ಕಾರ ಸಮಾರಂಭಕ್ಕೆ ಹೋದರೆ 'ಇಂತಹ ಪ್ರತಿಭೆಗಳು ನಮ್ಮ ದೇಶದಲ್ಲಿ ಹೆಚ್ಚಬೇಕು' ಅನ್ನೋನು. ಅಂತರ್ಜಾತಿ ವಿವಾಹಕ್ಕೆ ಹೋದರೆ' 'ಜಾತಿ ನಿರ್ಮೂಲನಕ್ಕೆ ಅಂತರ್ಜಾತಿ ವಿವಾಹವೊಂದೇ ದಾರಿ. ಇವು ಹೆಚ್ಚೆಚ್ಚು ನಡೆಯಬೇಕು' ಅನ್ನೋನು. ಹೀಗೆ... ಒಂದು ಸಲ ವಿಧವೆಯರ ಸಮ್ಮೇಳನಕ್ಕೆ ಆಹ್ವಾನಿತನಾದ. ಅಂತಃಸ್ಫೂರ್ತಿ ಉಕ್ಕಿ ಹರೀತು. 'ನಮ್ಮ ದೇಶ ಮುಂದುವರೆಯಬೇಕಾದರೆ ಇಂತಹ ಸಮ್ಮೇಳನಗಳು ನಡೆಯಬೇಕು. ನಿಮ್ಮಂತಹವರ ಸಂಖ್ಯೆ ದಿನೇದಿನೇ ಹೆಚ್ಚಬೇಕು' ಅಂದ! ಎಂಬುದಾಗಿ. ಭಾವೀ ಹುತಾತ್ಮರನ್ನು ಹೀಯಾಳಿಸಲೂಬಹುದು. ನಾಯಿ ಬೊಗಳಿದರೆ ದೇವ ಲೋಕವೇನೂ ಹಾಳಾಗುವುದಿಲ್ಲ ಬಿಡಿ.

ಬ್ರಾಹ್ಮಣ ಯತಿವರ್ಯರಿಗೆ ಕರ್ನಾಟಕದ ಸಿಂಹಾಸನವನ್ನು ಭಾರತೀಯ ಜನತಾಪಕ್ಷ ಏರುವುದು ಸನಾತನ ಹಿಂದೂ ಧರ್ಮದ ಉಳಿವಿಗಾಗಿ ಎಂಬ ಅರಿವಿರುವುದರಿಂದ ಅದಕ್ಕಾಗಿ ತಮ್ಮ ಬೆಂಬಲ ವ್ಯಕ್ತಪಡಿಸುವುದು ಸಹಜ. ವೀರಶೈವ ಮಠಾಧೀಶರು ಲಿಂಗವಂತನೊಬ್ಬ ಸಿಂಹಾಸನವೇರಲಿ ಎಂಬ ತುಡಿತದಿಂದ ಹೀಗೆ ಮಾಡಿರಬಹುದು. ಅಬ್ರಾಹ್ಮಣ, ಅವೀರಶೈವ ಮಠಾಧೀಶರಿಗೂ ಈ ಚಂಚಲತೆ ಏಕಾಯಿತು ಎಂದು ಸಂಶೋಧಿಸಲಾಗಿ... ಬ್ರಾಹ್ಮಣರು ಎಂದರೆ ವೇದ, ಉಪನಿಷತ್ತುಗಳನ್ನು ಬಲ್ಲವರು, ಕಾಲಜ್ಞಾನ ಗೊತ್ತಿರುವವರು, ಅವರ ಮಠಗಳ ದಾರಿಯೇ ಇತರೆ ಮಠಗಳಿಗೆ ಪರಮ ಪವಿತ್ರ. ಇನ್ನು ವೀರಶೈವರು, ಮಡಿ, ಮೈಲಿಗೆಯ ಮರ್ಮ ಅರಿತವರು. ಅವರು ಮಠಾಧೀಶರಾದರೂ ಲೌಕಿಕ ವ್ಯವಹಾರ ಕುಶಲಿಗಳು. ಇವರುಗಳಂತಾಗಬೇಕೆಂಬುದೇ ಅಬ್ರಾಹ್ಮಣ, ಅಲಿಂಗಾಯತ ಮಠಾಧೀಶರುಗಳ ಕನಸು! ಇದಕ್ಕಾಗಿಯೇ ಐದೂವರೆ ಕೋಟಿ ಕನ್ನಡಿಗರ ಭಾರವನ್ನು ಇಳಿಸಲು ಪ್ರಯತ್ನ!

ಈ ಯದ್ದಿ ನನ್ ಮಗ ಭಾರ ಹೊರಲಿ ಚುನಾವಣೆಯಲ್ಲಿ ಇಳಿಸಿದರಾಯಿತು ಅಂತ ಇತರೆ ಪಕ್ಷದವರು ಕೈಕಟ್ಟಿ ಕೂರುವಂತಿಲ್ಲ, ಈ ಮೂದೇವಿಗಳೇನು ಆಳಿಸುತ್ತಾಕುಂತವೆ. ಯಡಿಯೂರಪ್ಪ ನೋಡಿದರೆ ಧರ್ಮಯುದ್ಧ ಸಾರಿದ್ದಾರೆ. (ಆಗಾಗ ತಾತ್ಕಾಲಿಕ ರಜೆ ಘೋಷಿಸಿದ್ದರೂ ಯುದ್ಧ ಅಂತೂ ಸಾರಿದ್ದಾರೆ. ಮೂರನೆ ಹಂತದ ಯುದ್ಧ ಪ್ರಾರಂಭ ಆಗಬೇಕಿತ್ತು, ಆದರೆ ಏನು ಮಾಡ್ತೀರಿ. ಮಳ್ಳಿ ಹುಗೆ ಇದ್ದ ಆ ಎಂ.ಪಿ. ಪ್ರಕಾಶ್ ಅಂಬೋನು ಒಳೊಳಗೇ ಕಾಂಗ್ರೆಸ್ ಜೊತೆ ಸೇರಿ ಗದ್ದುಗೆ ಏರಲು ಪ್ರಯತ್ನಿಸುತ್ತಿದ್ದಾನೆ. ಅಧಿಕಾರದ ಆಸೆ ಇಲ್ಲ ಅಂತ ಹೇಳ್ತಿದ್ದರೂ ತಮ್ಮ ಬಟ್ಟು ಬೇರೆಯವರು ಮುಖ್ಯಮಂತ್ರಿ ಆದರೇನು ಗತಿ ಅನ್ನೋ ಚಿಂತೇಲಿ ಗುಸುಗುಸು, ಪುಸಪುಸ ಮಾಡಬೇಕಾದ ಅನಿವಾರ್ಯತೆ ಉದ್ಭವಿಸಿದೆ. ದೇವರ ದಯೆ. ಮಳೆ ಹಿಡಿದುಕೊಂಡಿತು. ಆ ನೆಪ ಹೇಳಿ ಧರ್ಮಯುದ್ಧ ಮುಂದೂಡಲಾಯಿತು) ಎಂಬುದಾಗಿ ಮತದಾರಪ್ರಭು

ಅಣಕ

ಎಚ್.ಎಲ್. ಕೇಶವಮೂರ್ತಿ

ತಾನುಂಟೋ ಮೂರು ಲೋಕ ಉಂಟೋ ಅಂತ ಇದ್ದರೂ ಹಾಳಾದ ಮಾಧ್ಯಮದವರು ಗೋಳುಹುಯ್ದು ಕೊಳ್ತಾರೆ. ಅದಕ್ಕೆ ಅವರೇನು ಮಾಡಿದರಪ್ಪ ಅಂದರೆ... ಸಾಲುಸಾಲಾಗಿ ಎಲ್ಲಾ ಮಠಾಧೀಶರುಗಳಿಗೂ ಶಿರಸಾಷ್ಟಾಂಗ ನಮಸ್ಕಾರ ಮಾಡಲು ಬಿಜಯಂಗೈದರು. ಎಲ್ಲಾ ಮಠಾಧೀಶರುಗಳಿಗೂ ಅಂದರೆ ಒಬ್ಬರನ್ನೂ ಬಿಡದೆ ಅಂತಲ್ಲ, ಅವರೇನು ಮಸಿ ಜನ ಇದ್ದಾರಾ. ಪ್ರಖ್ಯಾತರೂ, ಶ್ರೀಮಂತರೂ ಆದ ಬ್ರಾಹ್ಮಣ, ವೀರಶೈವ, ಒಕ್ಕಲಿಗ ಮಠಗಳಿಗೆ ಮಾತ್ರ ಅವರ ಸೇವೆ ಸೀಮಿತ ಆಗಿತ್ತು. ಇತರೆ ಮಠಗಳ ಮುಖ್ಯಸ್ಥರೂ; ಅವರ ಭಕ್ತರುಗಳೂ ಇರುವುದು ಚುನಾವಣೆಗಳಲ್ಲಿ ಮತ ಹಾಕಲು ಮಾತ್ರ; ಬೌದ್ಧಿಕ ಶ್ರಮಗಳಿಗೂ ಇವರಿಗೂ ಯಾವುದೇ ಸಂಬಂಧ ಇಲ್ಲ ಅನ್ನುವುದು ಅವರಿಗೆ ತಿಳಿದಿಲ್ಲವೇ! ಆ ಮಠಾಧೀಶರುಗಳು ಸಂದರ್ಭೋಚಿತವಾಗಿ ಕಿವಿ ನೊಚ್ಚಗಾಗುವಂತಹ ಮಾತನ್ನೇ ಆಡಿರಬಹುದು!

ಮಠಾಧೀಶರುಗಳ ನೋಡಿದ ಶಾಸ್ತ್ರ ಮಾಡಿ ಆಯಿತಲ್ಲ ಇನ್ನಾದರೂ ಆರಾಮವಾಗಿರೋಣ ಅಂದರೆ ಈ ಹಾಳಾದ ಹರದನಹಳ್ಳಿ ದೇವೇಗೌಡ ಹಾಗೂ ವಂಶಜರ ಕಾಟ. ಈ ಹಾಳಾದವರು ಯಾವ ಯಾವ ಜ್ಯೋತಿಷಿ ಕೇಳಿ ಏನೇನು ಪಟ್ಟಾಕ್ತಾರೋ; ಯಾವ ಯಾವ ಮಾಂತ್ರಿಕರನ್ನು ಹಿಡಿದು ಎಂತೆಂತಹ ಕಟ್ಟು ಮಾಡಿಸುತ್ತಾರೋ; ಸೀಮೇಲಿರೋ ಇಲ್ಲದಿರೋ ದೇವರುಗಳನ್ನೆಲ್ಲ ಕಂಡು ಅದೇನೇನು ವರ ಬೇಡಿಕೊಳ್ತಾರೋ ಒಂದೂ ತಿಳಿಯುವ

ದಂತೆ. ಆಫ್ಘಾನ್ ಪಾರಿನ್ನಿಗೋದ್ವಿ, ಎಲ್ಲಿಂದ ಬಂದ್ರಿ ಅಂತ ಕೇಳ್ದರಂತೆ. ನಾವೇನಾರ ಕರ್ನಾಟಕದಿಂದ ಬಂದಿದ್ವೀವಿ ಅಂದ್ರೆ, ಅಲ್ಲಿ ವಚನಭ್ರಷ್ಟರು ಅಂತ ಅವ್ರುರೆ. ಒಬ್ಬನುದುರು ದೇವೇಗೌಡ ಇನ್ನೊಬ್ಬನ ಹೆಸರು ಕುಮಾರಸ್ವಾಮಿ ಅವುರು ಗೊತ್ತ ನಿಮಗೆ ಅಂತ ಕೇಳ್ದರಂತೆ."

"ಯಾರ್ನ ಅಂಗಂದೋರು?"

"ಎದೂರಪ್ನ ಅಂಗನ್ನಂದು ತಿರಿಗಿದ್ದ ಕಣಕ್ಕ. ಈಗ ಅವುನೆ ಮುಖ್ಯಮಂತ್ರಿ."

"ನೋಡು ಮತ್ತೆ?"

"ಲ್ಯಕ್ಕ ಹಾಕು. ಅದೂ ಹುದ್ದಾಟಾಗಿಬುದತಲ್ಲ ರಾಜಕಾರಣ" ಎಂದ ಸೀರ.

"ಈಗ ಎಂ.ಪಿ. ಪ್ರಕಾಸುನ್ನ ದೂರ ಮಾಡಿದ್ರೊ?" ಎಂದ ಕಾಳಮಾವ.

"ಊ ದ್ವದಪ್ಪ ದ್ಯಾವೇಗೌಡ ಹೇಳಿದ ಮಾತು ಮೀರದಂಗೆ, ಹಾಕಿದ ಗೆರೆ ದಾಟದಂಗೆ ಇದ್ದುದುಕು ಅವುನಿಗೆ ಸರಿಯಾದ ಅವುಮಾನ ಮಾಡಿದ್ರು."

"ದ್ಯಾವೇಗೌಡನಿಗೆ ವಳ್ಳೆ ಸಾವು ಬರದಿಲ್ಲ ಕಂಡ್ಯ" ಎಂದ ಸೀರ.

"ಅಲ್ಲಿಗಂಟ ಹೇಳು ಚಿಗಪ್ಪ, ವಳ್ಳೊರ ಮಾನ ಹಳ್ಳಿಲೋಯ್ತು ಅಂತವ, ಇವ್ರುರ ಮಾತು ಕಟಗಂಡು ಕಾಂಗ್ರೆಸ್ ಸವಾಸಕ್ಹೋದ ಪ್ರಕಾಶ್ ವನವಾಸಕ್ಹೋದಂಗಾಯ್ತು."

"ನೋಡೋ ವಾಟಿಸ್ಸೆ ಪ್ರಕಾಶ್ ಈ ನನಮಕ್ಕಳಂಗಲ್ಲ, ಅವುನು ಯಾವತ್ತೋ ನಿಶ್ಯಯಿಸಿಗಂಡಿದ್ವ, ಇನ್ನು ಮುಂದೆ ಚುನಾವಣೆಗೂ ನಿಲ್ಲದಿಲ್ಲ ಅಂತ ಹೇಳಿದ್ದ, ಅಂಥ ಮನುಸುನಿಗೆ ಈ ಮರಿಯಾದಿ ಗೆಟ್ಟನನಮಕ್ಕಳು, ಅವುಮಾನ ಮಾಡಕ್ಕೂ ಆಗದಿಲ್ಲ, ರಾಜಕೀಯದಿಂದ್ಲೇ ಕಳಿಸಿದೊ ಅನ್ನಕ್ಕೂ ಆಗದಿಲ್ಲ ತಿಳಕೊ."

"ಎಜ್ಜಾಟ್ಲಿ ಕರಟ್ ಕಣೊ ಉಗ್ರಿ. ಪ್ರಕಾಶ್ ಯಾವತ್ತು ನಾನು ಉಪಮುಖ್ಯಮಂತ್ರಿ ಆಯ್ತಿನಿ ಅಂದೋನಲ್ಲ, ಮುಖ್ಯಮಂತ್ರಿ ಆಯ್ತಿನಿ ಅಂದೋನಲ್ಲ ಆದ್ರು ದ್ಯಾವೇಗೌಡ ಈಗ ಮಾಡಿರೊ ಪ್ಲಾನಲ್ಲಿ ನನಗೊಂದು ಡವುಟು ಬತ್ತಾ ಅದೆ."

"ಏನಪ್ಪ ಡವುಟು."

"ಪ್ರಕಾಶ್ ಪಾರ್ಟಿಲಿದ್ರೆ ಉಪಮುಖ್ಯಮಂತ್ರಿ ಮಾಡಬೇಕಾಯ್ತದೆ. ಅವುನ್ನ ಹ್ವರಿಕಾಕಿದ್ರೆ ರೇವಣ್ಣನ್ನ ಉಪಮುಖ್ಯಮಂತ್ರಿ ಮಾಡಬವುದು ಅನ್ನೊ ಪ್ಲಾನದು."

"ಇರಬವುದು ಕಣೊ. ಆದ್ರು ಪ್ರಕಾಶ್‌ಗೆ ಸರಿಯಾದ್ದೇ ಆಗ್ಯದೆ ಅಂತ ನನ್ನ ವಳಮನಸು ಹೇಳ್ತ ಅದೆ."

"ಅಂಗಂತಿಯಾ?"

"ಊ ಕಣೊ, ಅವತ್ತು ಸಿದ್ದರಾಮಯ್ಯನಿಗಾದದ್ದು ನನಿಗೂ ಆಗಬವುದು ಅಂತ ಯೋಚನೆ ಮಾಡಬೇಕಾಗಿತ್ತು. ಅವತ್ತು ಸಿಂಧ್ಯಾ ಪ್ರಕಾಶ್ ನಮ್ಮ ನಾಯಕರು ಅಂದಾಗ ಪ್ರಕಾಶ್ ಕುಮಾರಸ್ವಾಮಿಗೆ ನಮ್ಮ ನಾಯಕ ಅನ್ನಬಾರದಿತ್ತು, ಅವತ್ತು ಮಾಡಿದ ತಪ್ಪಿಗೆ ಇವತ್ತು ಬ್ಯಲೆ ತೆತ್ತರು" ಎಂದು ಉಗ್ರಿ ಹೇಳುವಾಗ, ಮೈಮುರಿದ ಜುಮ್ಮಿ,

"ಏನೊ ಹೋಗಿರ್ಲಿ, ನೀವು ಮಾತಾಡದು ಒಂದೂ ಗೊತ್ತಾಯ್ತಯಿಲ್ಲ" ಎಂದು ಆಕಳಿಸಿದಳು. ■

ಹಾಗಿಲ್ಲ, ಮುಖ್ಯಮಂತ್ರಿ ಪದವಿ ಆಸೆ ನೋಡಿ. ಉಳಿದ ಪಕ್ಷದ ನಾಯಕರೂ ಸಾಲಾಗಿ ದೇವೇಗೌಡ ವಂಶಜರು ಹೋದ ದೇವಾಲಯಗಳಿಗೆಲ್ಲ ಹೋಗಿ ತಮ್ಮ ಅಹವಾಲು ಹೇಳಿಕೊಳ್ತಿದಾರೆ. ಆ ದೇವರು **first come first served** ಅಂತಾನೋ ಅಥವಾ ವಸ್ತುಸ್ಥಿತಿ ಆಧಾರದ ಮೇಲೆ ತೀರ್ಪು ನೀಡ್ತಾನೋ ಗೊತ್ತಿಲ್ಲ. ಒಟ್ಟನಲ್ಲಿ **The ball is in his court!**

ಹಲ್ಮುಖಿ!

ಸದಾನಂದಗೌಡರು ಗೊತ್ತಲ್ಲ, ಅದೇ ಭಾಜಪ ರಾಜ್ಯಾಧ್ಯಕ್ಷರು, ದಿನಕ್ಕೆ ಕನಿಷ್ಠ ನಾಲ್ಕು ಸಲ ಆದರೂ ಟಿವಿಯಲ್ಲಿ ಮುಖ ತೋರಿಸೋರು. ಅವರ ಮುಖ ನೆನಪಿರದೇ ಇರಬಹುದು. ಹಲ್ಲು ಮಾತ್ರ ಮರೆಯುವ ಹಾಗಿಲ್ಲ, ನಗುವಾಗಲೂ ಹಲ್ಲು ಬಿಟ್ಟುಕೊಂಡೇ ಇರಬೇಕು. ಅಳುವಾಗಲೂ ಅದೇ ಪೋಸು. ಯಾವುದಾದರೂ ಶವಸಂಸ್ಕಾರಕ್ಕೋ, ಸಂತಾಪಸೂಚಕ ಸಭೆಗೋ ಇವರು ಹೋದರೆ ಏನು ಮಾಡುತ್ತಾರೆ ಅನ್ನೋದು ಸಣ್ಣ ಅನುಮಾನ.

ಇರಲಿ. ಇವರನ್ನು ಏನಂತ ಕರೆಯಬಹುದು?

ಹಸನ್ಮುಖಿ ಅನ್ನುವ ಹಾಗಿಲ್ಲ, ಮುಖದ ತುಂಬ ಹಲ್ಲುಗಳೇ ಕಾಣ್ತವೆ.

ನಗುಮುಖಿ? ಹಲ್ಲುಬಿಟ್ಟುಕೊಂಡಿದ್ದರೂ ಭಾವನೆ ಬೇರೆ ತರಹ ಇರುತ್ತೆ,

ಇನ್ನೇನನ್ನಬಹುದು?

ಹಲ್ಮುಖಿ!?

ಸೋಡಾ ಬಾಟ್ಲಿ ಸ್ಪಿರಿಟ್ಟು!

ಎಂಟು ವರ್ಷಕ್ಕೆ ನನ್ನ ಮಗ ದಂಟು ಕಡಿದ!

ಇಂತಹ ಸಾಹಸಕ್ಕೆ ಇಳಿದಿದ್ದಾರೆ ಎಂ.ಪಿ. ಪ್ರಕಾಶ್!

ಜಾತ್ಯತೀತ ಜನತಾದಳದ ಶಾಸಕರೊಂದಿಗೆ ಗೌಡರ ಕುಟುಂಬದ ವಿರುದ್ಧ ಸಿಡ್ದು ಹೊಡೆಯುತ್ತಾರಂತೆ!

ಯಾರಿಗೂ ಇದರಲ್ಲಿ ನಂಬಿಕೆ ಇಲ್ಲ, ಅವರ ಬಂಡಾಯ ಒನಕೆ ಚಿಗುರಿದಂತೆ! ಅವರ ಸ್ವಭಾವವೇ ಅಂತಹದ್ದು, ಎಲ್ಲಕ್ಕೂ ರಾಜಿ!

ಒಬ್ಬ ಹೆಣ್ಣುಮಗಳು ಅವರ ಬಳಿ ದೂರು ತರುತ್ತಾರೆ ಎನ್ನಿ, ಕಾಳಜಿಯಿಂದ ಆಕೆಯ ದೂರು ಕೇಳುತ್ತಾರೆ.

ಆಮೇಲೆ?

'ಛೆ ಛೆ ಹೀಗೆ ಆಗಬಾರದಿತ್ತು' ಅಂತಾರೆ.

'ಇವನೇ ಸಾರ್ ರೇಪ್ ಮಾಡಿದವನು' ಆಪಾದಿತನನ್ನು ತೋರಿಸುತ್ತಾರೆ ಆಕೆ.

'ಏನಯ್ಯ, ಹೀಗೆಲ್ಲ ಹೆಂಗಸರ ಮನ ನೋಯಿಸುವಂತಹ ಕೆಲಸ ಮಾಡುತ್ತಾರೇನಯ್ಯ' ಅಂತ ನೊಂದು ಕೊಳ್ತಾರೆ.

ಆನಂತರ?

'ಏನು ಮಾಡೋದು ತಾಯಿ. ಬಂದದ್ದನ್ನೆಲ್ಲ ಅನುಭವಿಸಬೇಕು. ಇನ್ನು ಮೇಲೆ ಹೀಗೆಲ್ಲ ಮಾಡಬಾರದು ಮರಿ' ಅಂತಾರೆ!

ಇಂತಹ ಪ್ರಕಾಶ ಬಂಡಾಯ ಏಳ್ತಾರೆ ಅಂದರೆ... ■

ಗಿಡ ಮತ್ತು ಮನುಷ್ಯ


ಮರೆಯುವ ಮುನ್ನ




ಪಿ. ಲಂಕೇಶ್ — ಮೇ 21, 1989

ಬತ್ತಿ ಹೋಗುತ್ತಿರುವ ಭಯ. ಸಿಕ್ಕ ಅರ್ಧ ಗಂಟೆಯಲ್ಲಿ ನನ್ನ ಮೆಚ್ಚಿನ ಹಳೆಯ ಪುಸ್ತಕ ತೆಗೆದುಕೊಳ್ಳುತ್ತೇನೆ. ಇದು 1903 ರಲ್ಲಿ ಪ್ರಕಟವಾದ ಪುಸ್ತಕ. ವರ್ಡ್ಸ್‌ವರ್ತ್ ಮತ್ತು ಕೋಲ್ ರಿಡ್ಜ್ ಎಂಬ ಗೆಳೆಯರು ತಮ್ಮ ಪ್ರಾತಿನಿಧಿಕ ಪದ್ಯಗಳನ್ನು ಸೇರಿಸಿ ಪ್ರಕಟಿಸಿದರು. ಅವರು 'ಲಿರಿಕಲ್ ಬ್ಯಾಲಡ್ಸ್' ಎಂಬ ಪುಸ್ತಕಕ್ಕೆ ನೀಡಿದ ಕವನಗಳು, ಬರೆದ ಮುನ್ನುಡಿ, ಟಿಪ್ಪಣಿಗಳು ಎಲ್ಲ ಇವೆ.

ನಾನು ಅಧ್ಯಾಪಕನಾಗಿದ್ದಾಗ ಕೊಂಡ ಪುಸ್ತಕ; ಸುಮಾರು ಹತ್ತು ವರ್ಷ ನಾನು ಬಳಸಿದ ಪುಸ್ತಕ. ಆಗ ಕ್ಲಾಸಿನಲ್ಲಿ ಪಾಠ ಮಾಡುತ್ತಿದ್ದ ಪುಸ್ತಕ. ಅದನ್ನು ಮತ್ತೆ ಮುಟ್ಟಿರಲಿಲ್ಲ, ನನ್ನೆಲ್ಲ ಗೋಳುಗಳ ನಡುವೆ ಈಗ ಹೊಸ ಜೀವದಿಂದ ಉಕ್ಕುವಂತೆ ಕಾಣುತ್ತಿದೆ. ಚಿಕ್ಕ, ದಪ್ಪರಟ್ಟಿನ ಪುಸ್ತಕವನ್ನು ತೆರೆದು ಅಲ್ಲಲ್ಲಿ ನೋಡುತ್ತೇನೆ.



ನನ್ನ ಮೆಚ್ಚಿನ ಕವಿ ವರ್ಡ್ಸ್‌ವರ್ತ್. ಇಂಗ್ಲಿಷ್ ಸಾಹಿತ್ಯದಲ್ಲಿ ಮೊತ್ತಮೊದಲ ಬಾರಿಗೆ ಕಾವ್ಯ ಮನುಷ್ಯರಿಗೆ ಎಷ್ಟು ಮುಖ್ಯ ಅನಿವಾರ್ಯ ಎಂದು ತೋರಿಸಿದ ಕವಿ ಈತ. ಕೈಗಾರಿಕೆ ಇಂಗ್ಲೆಂಡನ್ನು ತುಂಬುತ್ತಿರುವಾಗ, ಕಾರ್ಖಾನೆಯ ಹೊಗೆ ಆಕಾಶವನ್ನು ಮುತ್ತುತ್ತಿರುವಾಗ ಜೀವದ ಸೆಲೆಗಳನ್ನ, ಕಾರಂಜಿಗಳನ್ನು ಹುಡುಕಿಕೊಂಡು ಹೊರಟನೀತ. ಪ್ರಕೃತಿಯಲ್ಲಿ ಜೀವ ಕಂಡ. ಪ್ರಕೃತಿಯನ್ನು ಗ್ರಹಿಸುವ ಭಾಷೆಯನ್ನು ಸಜೀವಗೊಳಿಸಿದ. ಕ್ರಮೇಣ ಪ್ರಕೃತಿ ಎನ್ನುವುದು ಮನುಷ್ಯ ಪ್ರಕೃತಿಯ ಜೊತೆಗೆ ಹೆಣೆದುಕೊಂಡಿತು. ಹೂವು ನಮಗೆ ಸಂತೋಷ ಕೊಡುತ್ತದೆ; ಹೂವಿನ ಅಂದಕ್ಕೆ ಕರಗಿ ಹೋಗುತ್ತೇವೆ. ಆದರೆ ಹೂವನ್ನು ವರ್ಣಿಸಿದರೆ ಕಾವ್ಯವಾಗುವುದಿಲ್ಲ; ಹೂವಿನ ಧ್ಯಾನವನ್ನು ಮಂಡಿಸಿದರೆ ಮಾತ್ರ ಕಾವ್ಯವಾಗುತ್ತದೆ. ಈ ತಲ್ಲೀನಗೊಂಡ ಧ್ಯಾನದಲ್ಲಿ ಕಾವ್ಯ ಸ್ಫುರಿಸುತ್ತದೆ. "ಕಾವ್ಯ ಹುಟ್ಟುವುದು ಭಾವನೆಗಳ ಧರಿಸಿ ಸ್ಫೂರ್ತಿಯಿಂದ ಧ್ಯಾನಿಸುವುದರಿಂದ" ಎಂದು ಹೇಳಿದ.



ಕಾವ್ಯ ಹೇಗೆ ಮನುಷ್ಯನನ್ನು ಕಾಪಾಡುತ್ತದೆ? ಅವನಲ್ಲಿ ಸ್ಪಂದನ ಮೂಡಿಸುವ ಮೂಲಕ, ಪ್ರೀತಿ ಹುಟ್ಟಿಸುವ ಮೂಲಕ, ಆ ಪ್ರೀತಿಯನ್ನು ಹೇಳುವುದನ್ನು ಕಲಿಸುವ ಮೂಲಕ. ಇದೇ ಪ್ರೀತಿ ಲೂಸಿಯ ಬಗ್ಗೆ, ಮೈಖೇಲ್ ಬಗ್ಗೆ ಬ್ಲೇಕ್‌ನಲ್ಲಿ ಚಿಮನಿ ಗುಡಿಸುವ ಕಪ್ಪು ಹುಡುಗನ ಬಗ್ಗೆ ಉಕ್ಕುತ್ತದೆ. ವಸಂತ ಋತುವಿನಲ್ಲಿ ಕೂತು ಪ್ರಕೃತಿಯ ಸೌಂದರ್ಯದಲ್ಲಿ ಮುಳುಗಿದ ಕವಿ ವಿಷಾದಿಸುತ್ತಾನೆ; **Have I not reason to lament what man has made of man?**

ಆನೇಕಲ್ಲಿನಲ್ಲಿ....

ಮೊನ್ನೆ ಒಂದು ಅಂಬೇಡ್ಕರ್ ಜಯಂತಿಯಲ್ಲಿ ಭಾಗವಹಿಸಿದ್ದೆ, ಆನೇಕಲ್‌ನಲ್ಲಿ, ನಾನು ಆನೇಕಲ್‌ಗೆ ಹೋಗುತ್ತಿದ್ದುದು ಅದೇ ಮೊದಲು. ಸಭೆಗೆ ಕರೆದಿದ್ದವರು ದಲಿತ ಹುಡುಗರು. ಅವರ ಮಾತು ಕೇಳಿದರೆ ಆನೇಕಲ್‌ನ ಪಾಳೆಗಾರಿಕೆ ಮುಖಕ್ಕೆ ರಾಚುತ್ತಿತ್ತು. ಹೆಚ್ಚುಕಮ್ಮಿಯಾದರೆ ಹರಿಜನ ಅಮಾಯಕರ ಕಾಲು ಕತ್ತರಿಸುವ, ಹೊಡೆದು ಕಾಡಿನಲ್ಲಿ ಎಸೆಯುವ ಮೇಲುಜಾತಿಯ ಜನ. ಕೆಲವು ತಿಂಗಳ ಹಿಂದೆ ಒಂದು ಘಟನೆ ನಡೆದಿತ್ತು. ಊರಿನ ಕೊಳವೆಬಾವಿಯಿಂದ ನೀರು ಕುಡಿದ ಹಳ್ಳಿಯ ದಲಿತ; ಆತನ ನಾಲಗೆ ಕತ್ತರಿಸಿದರು. ಅವನ ಸಂಬಂಧಿಕರು ಕೂಡಲೆ ಆಸ್ಪತ್ರೆಗೆ ಸೇರಿಸಿದರೂ ಆತ ರಕ್ತಕಾರಿ ಸತ್ತ. ಈ ಬಗ್ಗೆ ನಾನು ಕೇಳಿದ್ದೆ; ಈಗ ವಿವರ ಕೇಳಿ ನಿಬ್ಬೆರಗಾದೆ. ಇದು ಮನುಷ್ಯರ ದೇಶವೆ?

ನನ್ನ ಪಕ್ಕದಲ್ಲಿದ್ದ ಪುಟ್ಟ ಆಕಾರದ ಹುಡುಗ. ಸದಾ ನಗುವ, ಮೃದು ಮನಸ್ಸಿನ, ಗಡ್ಡಬಿಟ್ಟ ಹುಡುಗ. ಕೋಲಾರದಲ್ಲಿ ಈತ ಸಿಕ್ಕಿದ್ದ. ಈಗ ಹೆಸರು ಕೇಳಿದೆ. ಅಶ್ವತ್ಥ್ ಅಂತ್ಯಜ. ನಾನು ಮುಗುಳ್ನಕ್ಕು ನೋಡುವುದನ್ನು ಕಂಡು "ಹೆಸರು ಚೆನ್ನಾಗಿಲ್ವ ಸಾರ್?" ಅಂದ. "ಚೆನ್ನಾಗಿದೆ" ಅಂದೆ. ಅನೇಕ ದಲಿತ ಹುಡುಗರಂತೆಯೇ ಈತ ಬರೆದುಕೊಳ್ಳುತ್ತಲೇ ಇದ್ದ, ಬಿ.ಎಂ. ಹನುಮಂತಪ್ಪನ ತರಹ; ಆತ ಕೂಡ ಯಾವುದಾದರೂ ಹೊಸ ವಿಷಯ ಸಿಕ್ಕರೆ, ಮಾಹಿತಿ ದೊರೆತರೆ ಕೂಡಲೆ ನೋಟ್ ಮಾಡಿಕೊಳ್ಳುತ್ತಾನೆ. ಮಾತಿನ ನಡುವೆ ಪುರಾವೆ ಒದಗಿಸಲು ಶಾನುಭೋಗರ ತರಹ ಎಕ್ಸರ್ ಸೈಸ್ ಪುಸ್ತಕದ ಹಾಳೆ ತಿರುವತೊಡಗುತ್ತಾನೆ. ಅಶ್ವತ್ಥ್ ಅಂತ್ಯಜ ಕೂಡ ಗಂಭೀರನಾದ, ಹೊಸತೇನು ಸಿಕ್ಕರೂ ಸಂಗ್ರಹಿಸುವ ಹುಡುಗ. ಈತ ನಗದೇ ಮಾತಾಡುವುದನ್ನೇ ನಾನು ನೋಡಲಿಲ್ಲ.



ಈ ಸಭೆಗೆ ಹೋಗಿಬಂದ ಮೇಲೆ ನನಗೊಬ್ಬರು ಹೇಳಿದರು, "ಆ ಸಭೆಯನ್ನು ಏರ್ಪಡಿಸಿದ್ದವರು ಯಾರು ಗೊತ್ತೆ? ತ್ಯಾಗಿ, ಮಹಾದೇವರ ಗುಂಪಿನಿಂದ ಹೊರಗೆ ಬಂದವರು ಅಥವಾ ಹೊರಗೆ ಕಳಿಸಲ್ಪಟ್ಟವರು. ತಾವು ತಪ್ಪು ಮಾಡಿರುವುದಾಗಿ ಅವರೆಲ್ಲ ಒಪ್ಪಿಕೊಂಡಿದ್ದಾರೆ. ನೀವು ಅವರ ಸಭೆಗೆ ಹೋಗುವುದು ತಪ್ಪಲ್ಲವೆ? ತ್ಯಾಗಿ ಗುಂಪಿನವರಿಗೆ ನೋವಾಗುವುದಿಲ್ಲವೆ!"

ನಾನು ಹೇಳಿದೆ, "ನನಗೆ ಅದು ಗೊತ್ತಿರಲಿಲ್ಲ, ಯಾಕೆ ಗೊತ್ತಿರಲಿಲ್ಲ ಅಂದರೆ ನಾನು ಆ ಬಗ್ಗೆ ಯೋಚಿಸಿಯೇ ಇರಲಿಲ್ಲ. ಮೊನ್ನೆ 'ಸಾಕ್ಷರತಾ ಆಂದೋಲನ' ಎಂಬ ಸಭೆಗೆ ಕರೆದರು. ಅದು ನನ್ನ ಮೆಚ್ಚಿನ ವಿಷಯವಾದ್ದರಿಂದ ಹೋದೆ. ಇಲ್ಲಿ ಅಂಬೇಡ್ಕರ್ ಜಯಂತಿಗೆ ಕರೆದರು. ಅದೇ ಕಾರಣದಿಂದ ಹೋದೆ...."

"ಆದರೆ ಯಾರು ಸಂಘಟಿಸುತ್ತಿದ್ದಾರೆ ಎಂದು ತಿಳಿದುಕೊಳ್ಳದೆ ಹೋಗುವುದು ತಪ್ಪಲ್ಲವೆ?"

"ಸ್ವಲ್ಪ ಯೋಚಿಸಿ. ಮೇಲುಜಾತಿಯವರ ಸಮ್ಮೇಳನಗಳಾದರೆ ಅದನ್ನೆಲ್ಲ ನೋಡಬೇಕು; ಈ ಅಸಹಾಯಕ ಹುಡುಗರ ಎಂಥ ಸಭೆಗೂ ನಮ್ಮ ಬೆಂಬಲ ಬೇಕು. ಹಿಂದುಳಿದವರು, ಅಲ್ಪಸಂಖ್ಯಾತರು, ಹರಿಜನರು ಎಂಥ ಕಷ್ಟದಲ್ಲಿರುತ್ತಾರೆಂದರೆ ಅವರ ಜಾತಿ ಸಮ್ಮೇಳನಗಳು ಮತ್ತು ವಿಚಾರಸಂಕಿರಣಗಳೆಲ್ಲ ಅವರ ನೋವು; ಕಷ್ಟಗಳನ್ನೇ ಹೇಳುತ್ತವೆ. ಇಂಥ ವಿಚಾರದಲ್ಲಿ ಗುಂಪನ್ನು ಪರೀಕ್ಷಿಸುತ್ತಾ ಕೂತುಕೊಳ್ಳಬಾರದು. ನನ್ನಿಂದ ಈ ಅಮಾಯಕ ಹುಡುಗರಿಗೆ ಅಂಥ ಲಾಭವೇನೂ ಆಗಲಾರದು. ಅಲ್ಲದೆ ನಾನು ತ್ಯಾಗಿ, ಮಹಾದೇವರ ಸಂಘರ್ಷ ಸಮಿತಿಯ ಸಭೆಗಳಿಗೂ ಹೋಗಿದ್ದೇನೆ. ಆ ಬಗ್ಗೆ ಆಕ್ಷೇಪಣೆ ಎತ್ತಿದವರಿಗೂ ನನ್ನ ನಿರ್ಲಕ್ಷ್ಯ ತೋರಿದ್ದೇನೆ. ನನ್ನ ಆಳದ ಕಾಳಜಿಗಳನ್ನು ಕಾಪಾಡಿಕೊಳ್ಳದೆ ಕೇವಲ ಜಾಣತನದ ವರ್ತನೆಯಲ್ಲಿ ಮುಳುಗಿದರೆ ನನ್ನಿಂದ ಯಾರಿಗೂ ಉಪಯೋಗವಾಗುವುದಿಲ್ಲ."


ಅಲ್ಲದೆ ಈ ದಲಿತ ಹುಡುಗರಲ್ಲಿ ನಾನು ಏನೆಲ್ಲ ಕಂಡಿದ್ದೇನೆ! ಅವರು ಎಷ್ಟು ಕಾತರದಿಂದ ಹೊಸ ಹೊಸ ಅನ್ನಿಸಿಕೆಗಳನ್ನು ಹೀರಿಕೊಳ್ಳುತ್ತಾರೆ! ಒಮ್ಮೆ ನಾನು ಅಂಬೇಡ್ಕರ್ ಅವರ ಬಗ್ಗೆ ವ್ಯಕ್ತಿ ಪೂಜೆ ಬೇಡ, ಅವರನ್ನು ಮನುಷ್ಯನನ್ನಾಗಿ ಪರಿಗಣಿಸಿ ಅವರಿಂದ ಕಲಿಯೋಣ, ಅಂದರೆ, ಅದು ಅವರ ಪ್ರಜ್ಞೆ ಸೇರಿತು. ಅಂಬೇಡ್ಕರ್ ಅವರನ್ನು ಬಂಡವಾಳ ಮಾಡಿಕೊಳ್ಳಕೂಡದು ಅಂದಿದ್ದೆ. ಅದೂ ಅವರ ಮನಸ್ಸು ಸೇರಿತು. ಯಾರ ವಿರುದ್ಧ ಪ್ರತಿನಿಧಿಸುತ್ತೇವೆಯೋ ಅವರ ದುರ್ಗುಣ ನಮಗೆ ಬರದಂತೆ ನೋಡಿಕೊಳ್ಳಬೇಕು, ಅಂದಿದ್ದೆ. ಅದೂ ಅಷ್ಟೆ.

ಅಲ್ಲದೆ ಈ ದಲಿತ ಹುಡುಗರಲ್ಲಿ ಎಂಥ ಸಂಗೀತ, ಚಿತ್ರ, ಸ್ಪಂದನಗಳಿವೆ! ಸಕಲೇಶಪುರದಿಂದ ಬಂದಿದ್ದ ಹುಡುಗರು ಹಾಡಿದ್ದು, ನರ್ತಿಸಿದ್ದು ನೀವು ನೋಡಬೇಕಿತ್ತು. ಆನೇಕಲ್ಲಿನ ದುಷ್ಟ ಪಾಳೆಗಾರಿಕೆಯ ವಿರುದ್ಧ ಕಟ್ಟಿದ ಕೋಟೆಯಂತಿದ್ದ ಹಾಡು, ಕುಣಿತ, ಎಂಥವನ ಮನಸ್ಸಿನಲ್ಲೂ ಮನುಷ್ಯನ ಸಮಾನತೆ, ಕ್ರಿಯಾಶೀಲತೆಯ ಬಗ್ಗೆ ವಿಶ್ವಾಸ ಮೂಡಿಸಬಲ್ಲ ಪ್ರತಿಭೆ.

ನಾನು ಹೇಳದ ಒಂದೇ ಒಂದು ಮಾತು ಈಗ ನೆನಪಾಗುತ್ತಿದೆ: ನಮ್ಮ ರಾಜ್ಯದ ಶಾಲೆಗಳು ಈಗ ಯಾವ ಸ್ಥಿತಿಯಲ್ಲಿವೆ ನೋಡಿದ್ದೀರಾ? ಇವುಗಳನ್ನು ಈ ಸ್ಥಿತಿಯಲ್ಲಿಟ್ಟಿರುವವರು ಹರಿಜನರಿಗೆ ನಿಜಕ್ಕೂ ದ್ರೋಹ ಬಗೆಯುತ್ತಿದ್ದಾರೆ. ಅವುಗಳನ್ನು ವಿದ್ಯೆಯ, ತಿಳಿವಳಿಕೆಯ ಕೇಂದ್ರಗಳನ್ನಾಗಿ ಮಾಡುವುದು ಎಲ್ಲ ಪಾಳೆಗಾರರ ವಿರುದ್ಧದ ಪರಿಣಾಮಕಾರಿ ಕ್ರಮ.

ಭಂಡಕ್ಕಿಂತ ದೊಡ್ಡ ಪದ ಸಿಗಲಿಲ್ಲವೇ?

ಕಲಾತ್ಮಕತೆಯ ಸಾಮ್ರಾಟ್ ಎಸ್. ನಾರಾಯಣ್ ಬಗ್ಗೆ ಮತ್ತಷ್ಟು ಬರೆದಿದ್ದರೆ ಚೆನ್ನಾಗಿರುತ್ತಿತ್ತು. ಈತ ಕನ್ನಡದ ಒಬ್ಬ ಪ್ರತಿಭಾವಂತ ನಿರ್ದೇಶಕ ಮತ್ತು ನಟನಂತೆ ವರ್ತಿಸುತ್ತಾನೆ. ಮೊದಲು ಉದಯ ಟೀವಿ ವಾಹಿನಿಗೆ ಧಾರಾವಾಹಿಗಳನ್ನು ನಿರ್ಮಿಸುತ್ತಿದ್ದಾಗ ಪ್ರೇಕ್ಷಕರನ್ನು ತಲೆ ಚಚ್ಚಿಹಿಡಿದು ಕಾಯಿಲೆಗೆ ಬೀಳುವಂತೆ ಮಾಡುತ್ತಿದ್ದ. 'ವೀರಪ್ಪ ನಾಯ್ಕ' ಎಂಬ ಚಿತ್ರ ತೆಗೆದು ಉತ್ತರ ಕರ್ನಾಟಕದ ಗಂಡುಗಲಿ ಭಾಷೆಯನ್ನೇ ಕೊಂದುಬಿಟ್ಟ. ಸ್ವಂತ ಒಂದೂರು ಪ್ರತಿಭೆಯಿಲ್ಲದಿದ್ದರೂ ಬೇರೆ ಭಾಷೆಯ ಚಿತ್ರಗಳನ್ನು ಇಲ್ಲಿ ಭಟ್ಟಿ ಇಳಿಸಿ ಆದರ ಸಾಹಿತ್ಯ ಸಂಭಾಷಣೆಯನ್ನು ತಿರುಚಿ ಪ್ರೇಕ್ಷಕನಿಗೆ ವಂಚಿಸುತ್ತಾನೆ. ಕಷ್ಟಪಟ್ಟು ಸ್ವಂತ ಕಥೆಯನ್ನು ನಿರ್ಮಿಸುವ ಪ್ರೇಮ್, ರತ್ನಜ ಎಲ್ಲಿ? ಕಳ್ಳಭಟ್ಟಿ ಗಿರಾಕಿಯಾದ ಇವನೆಲ್ಲಿ?




ದಯವಿಟ್ಟು ಇವನನ್ನು ಭಂಡ ಎನ್ನುವ ಪದಕ್ಕಿಂತ ದೊಡ್ಡ ಪದವಿದ್ದರೆ ಬಳಸಿ.

-ಸಿ. ಶಿವಕುಮಾರ್, ಚಿನಿವಾರನಹಳ್ಳಿ

ತಮ್ಮ ಪತ್ರಿಕೆಯ ಅಕ್ಟೋಬರ್ 31ರ ಸಂಚಿಕೆಯಲ್ಲಿ 'ನಾಗಲಿಂಗನ ತಾಯ್ಗಂಡಗಿರಿಯೂ ಕಲಬುರ್ಗಿಯ ಜನವಾದಿ ಮಹಿಳೆಯರೂ' ಎಂಬ ಶೀರ್ಷಿಕೆಯಡಿ ಲೇಖನ ಪ್ರಕಟವಾಗಿದ್ದು, ಅದು ತನ್ನ ಉದ್ದೇಶಿತ ಅರ್ಥವನ್ನು ಬಿಟ್ಟುಕೊಡುವಲ್ಲಿ ಸೋಲುತ್ತದೆ. ವರದಿಗಾರರ ನಿಲುವು ಸಕಾರಾತ್ಮಕವೇ ಇರಬಹುದು. ಆದರೆ ನಾಗಲಿಂಗಸ್ವಾಮಿ ಎಂಬ ಶುದ್ಧ ತರಲೆಯ ವಿಷಯವನ್ನು ವರದಿ ಮಾಡುವ ಸಂದರ್ಭದಲ್ಲಿ ಜನವಾದಿಯ ಹೆಸರನ್ನು ಉದ್ದೇಶವಿಲ್ಲದೆ ಎಳೆದು ತಂದದ್ದು ಅನವಶ್ಯಕ ಮತ್ತು ಓದುಗರಲ್ಲಿ ತಪ್ಪಭಿಪ್ರಾಯ ಮಾಡುವಂತಾಗಿದೆ. ಶೀರ್ಷಿಕೆ ಮತ್ತು ಕಾರಣವಿಲ್ಲದೆ ಪ್ರಕಟವಾದ ಫೋಟೋಗಳು ಓದುಗರಲ್ಲಿ ಗೊಂದಲವನ್ನು ಮೂಡಿಸುವಂತಿದೆ.

ಯಾವುದೇ ಮಹಿಳೆಯರ ಮೇಲೆ ಅನ್ಯಾಯ, ಅತ್ಯಾಚಾರವಾದಾಗ ಜನವಾದಿಯ ಗಮನಕ್ಕೆ ಬಂದರೆ ಸಾಕು. ಸಂಘಟನೆಯು ತಕ್ಷಣ ಖಂಡಿಸುತ್ತದೆ ಮತ್ತು ನ್ಯಾಯದ ಪರ ಧ್ವನಿ ಎತ್ತುತ್ತದೆ. ವರದಿಗಾರರು ಏನೇ ಬರೆಯಲಿ, ಸಂಪಾದಕರಾದ ತಾವು ವರದಿಗಳನ್ನು ಕೂಲಂಕಷವಾಗಿ ಗಮನಿಸಿ ಮುಂದಿತವಾದ ವಿಷಯಕ್ಕೂ, ಬಳಸಿಕೊಳ್ಳುವ ಫೋಟೋಗಳಿಗೂ ಪರಸ್ಪರ ಸಂಬಂಧ ಇದೆಯೇ ಎಂಬುದನ್ನು ಗಮನಿಸಬಹುದಿತ್ತು?



ಒಟ್ಟು ನಾನು ತಮಗೆ ಒತ್ತಾಯಿಸುವುದೇನೆಂದರೆ ಈ ಕುರಿತು ತಮ್ಮ ಪತ್ರಿಕೆಯಲ್ಲಿ ಸ್ಪಷ್ಟೀಕರಣ ನೀಡಿ ಓದುಗರಲ್ಲುಂಟಾದ ಗೊಂದಲವನ್ನು ನಿವಾರಿಸಬೇಕು. ಸದರಿ ಲೇಖನಕ್ಕೂ ಜನವಾದಿ ಸಂಘಟನೆಗೂ ಯಾವುದೇ ಔಚಿತ್ಯಪೂರ್ಣ ಸಂಬಂಧ ಇಲ್ಲದಿರುವುದನ್ನು ಮನವರಿಕೆ ಮಾಡಿಕೊಡಬೇಕು. ಪ್ರಜಾತಾಂತ್ರಿಕ ವ್ಯವಸ್ಥೆಯಲ್ಲಿ ಜನಪರ ಸಂಘಟನೆಗಳ ಮೇಲಿರುವ ನೈತಿಕ ಹೊಣೆಗಾರಿಕೆಯನ್ನು, ಸಾಂದರ್ಭಿಕ ಮಿತಿಗಳನ್ನು ನೀವು ಅರ್ಥಮಾಡಿಕೊಳ್ಳಬಲ್ಲಿರಿ ಎಂದು ಆಶಿಸುತ್ತೇನೆ.

-ಡಾ. ಮೀನಾಕ್ಷಿ ಬಾಳಿ,
ಜನವಾದಿ ಮಹಿಳಾ ಸಂಘಟನೆ,
ಗುಲ್ಬರ್ಗಾ

"ಅಿವ್ವ" ಚಿತ್ರದಲ್ಲಿ ನನಗೊಂದು ಪಾತ್ರ ಕೊಡಿಸಿ ಅಂತ ನಮ್ಮ ಚಂದ್ರೇಗೌಡ್ರಿಗೆ ಗಂಟುಬಿದ್ದೆ. ಅದಕ್ಕವರು "ಕತ್ತಲೆಯಲ್ಲಿ ಹೆಂಡ ಕುಡಿತಾ ನಾಲ್ಕು ಜನ ಇರ್ತಾರೆ, ಅದರಲ್ಲಿ ನೀನೊಬ್ಬ. ಪೊಲೀಸರು ಓಡಿಸಿಕೊಂಡು ಬರ್ತಾರೆ. ನೀನು ಓಡಿಹೋಗು" ಎಂದರು.



ನನ್ನ ದೈತ್ಯಾಕಾರದ ದೇಹಕ್ಕೆ ಬ್ರಾಂದಿ ಮಾತ್ರ ಹೊಂದಿಕೊಂಡಿರುವುದರಿಂದ ಮತ್ತು ಅದನ್ನು ಅಪರೂಪಕ್ಕೊಮ್ಮೆ ಕುಡಿಯುತ್ತಿರುವುದರಿಂದ ಯಾಕೋ ಹುಳಿ ಹೆಂಡ ತಯಾರಿಸುವುದರ ನನಗೆ ಒಂಥರಾ ಆಯ್ತು. ದುನಿಯಾ ವಿಜಯ್ ಹೆಗಲ ಮೇಲೆ ಕೈ ಹಾಕುವ ಪಾತ್ರ ಸಿಗುತ್ತದೆಂದು ಊಹಿಸಿಕೊಂಡ ನಾನು ಭ್ರಮ ನಿರಸನಾದೆ. ಅಷ್ಟೇನೂ ಪರಿಚಯವಿರದ ಕವಿತಾ ಲಂಕೇಶ್ ಹತ್ತಿರ ಒಂದು ಛಾನ್ಸ್ ಕೊಡಿ ಅಂತ ಕೇಳೋಣವೆಂದಿದ್ದೆ. ಇದು ನನ್ನಕ್ಕ ಗೌರಿ ಲಂಕೇಶ್‌ಗೆ ಗೊತ್ತಾಗಿ ನಾಳೆಯಿಂದ ನೀನು ಆಫೀಸ್ ಹತ್ರ ಬರಬ್ಯಾಡ ಅಂದುಬಿಟ್ಟರೆ... (ಪತ್ರಿಕೆ ಬಿಟ್ಟು, ಸಿನಿಮಾ ನಟ ಆಗುವುದು ಅವರಿಗೆ ಇಷ್ಟವಿಲ್ಲಾ) ಏನು ಕತೆ ಅಂತ ಸುಮ್ಮನಾದೆ.

ಮೇಲಾಗಿ ಬಿಡುವಿಲ್ಲದ ನನಗೆ, ಸಣ್ಣದೊಂದು ಪಾತ್ರಕ್ಕೆ ಹೆಚ್ಚುಕಡಿಮೆ ವಾರಗಟ್ಟಲೆ ಕಾಯುವ ತಾಳ್ಮೆ ಎಲ್ಲಿದೆ. ಕೊನೆಗೂ ಖ್ಯಾತ ಚಿತ್ರನಟನಾಗುವ ಆಸೆಯನ್ನು ಕೈಬಿಟ್ಟೆ.

-ಶೂದ್ರ ಸಂತೋಷ್,
ಅಜ್ಜಂಪುರ

ನಿಮ್ಮ ಪತ್ರಿಕೆಯ ನಿಲುವು, ನೀವು ಮಾಡಿದ ಹೋರಾಟಗಳನ್ನು ಮೆಚ್ಚಿ ನಿಮ್ಮ ಪತ್ರಿಕೆಯನ್ನು ಪ್ರತಿವಾರವೂ ತಪ್ಪದೆ ಓದುತ್ತಿದ್ದೆ. ಆದರೆ ಈ ವಾರದಿಂದ ಪತ್ರಿಕೆಯನ್ನು ಕೊಂಡು ಓದುವುದನ್ನು ನಿಲ್ಲಿಸುತ್ತಿದ್ದೇನೆ. ಕಂಡಕಂಡವರ ಕಾಲೆಳೆಯುವುದು ಪತ್ರಿಕೆಯೊಂದರ ಕೆಲಸವಲ್ಲ.

ಈ ರೀತಿಯದ ಪತ್ರ ಬರೆಯಲು ಕಳೆದ ಎರಡು ವಾರಗಳ ನಿಮ್ಮ ಪತ್ರಿಕೆಯಲ್ಲಿ ನೀವು ಬರೆದ ಲೇಖನಗಳೇ ಕಾರಣ. ನಾಗತಿಹಳ್ಳಿ ಚಂದ್ರಶೇಖರ ಅವರು ತಮ್ಮ 'ಮಾತಾಡ್ ಮಾತಾಡು ಮಲ್ಲಿಗೆ' ಚಿತ್ರದ ಮೂಲಕ ಒಂದು ಹೋರಾಟವನ್ನು ಜನರಿಗೆ ತಲುಪಿಸಲು ಪ್ರಯತ್ನಪಟ್ಟಿದ್ದಾರೆ. ಅವರು ತಮ್ಮ ಚಿತ್ರದಲ್ಲಿ ವಿಷ್ಣುವರ್ಧನ್ ಮುಂತಾದ ಕಮರ್ಷಿಯಲ್ ಅಂಶಗಳನ್ನು ಸೇರಿಸಿ ಒಂದು ಸಾಕ್ಷ್ಯಚಿತ್ರ ಮತ್ತು ಜನನೋಡದ ಕೇವಲ ಅವಾರ್ಡ್ ಪಡೆಯುವ ಚಿತ್ರವಾಗದಂತೆ ಪ್ರಯತ್ನಿಸಿದ್ದಾರೆ. 'ಮಾಮಾಮ' ಚಿತ್ರದ ಕಥಾವಸ್ತು ನೀವು ಮಾಡುವ ಹೋರಾಟಗಳಿಗೆ ಹತ್ತಿರವಾಗಿದ್ದೂ ಅಲ್ಲದೆ ಗೊಲ್ಲಹಳ್ಳಿ ಶಿವಪ್ರಸಾದ್ ಕೈಯಲ್ಲಿ ಮೂರು ಹಾಡುಗಳನ್ನು ಬರೆಸಿದ್ದಾರೆ.

ನೀವು 'ಮಾತಾಡ್ ಮಾತಾಡು ಮಲ್ಲಿಗೆ'ಯನ್ನು ಬೆಂಬಲಿಸಿ ಅಥವಾ ಅಂತಹ ದೊಡ್ಡ ಮನಸ್ಸು ನಿಮಗಿಲ್ಲದಿದ್ದರೆ ಸುಮ್ಮನಿರುವ ಬದಲು ಯಾವುದೋ ರೀಮೇಕ್-ರಿಮಿಕ್ಸ್ ಚಿತ್ರವೆಂಬಂತೆ ಎ.ಎಸ್. ಶ್ರೀಧರ್ ಕಾಲೆಳೆದಿದ್ದಾರೆ. ಮಾಮಾಮ ಯಾವುದೇ ಮಸಾಲೆ ಚಿತ್ರವಾಗಿದ್ದರೆ ನಿಮ್ಮ ಕಾಲೆಳೆಯುವ ಮನಸ್ಥಿತಿಯನ್ನು ಒಪ್ಪಿಕೊಳ್ಳಬಹುದಿತ್ತು ಆದರೆ ಈ ಲೇಖನದಿಂದ ನಿಮ್ಮ ಹಾಗೂ ಶ್ರೀಧರ್ ಮೇಲೆ ನನಗಿದ್ದ ಗೌರವ ಕಡಿಮೆ ಆಗಿದೆ. ಹಾಗೇ ನಿಮ್ಮ ಕಾಲೆಳೆಯುವ ಪ್ರವೃತ್ತಿ ಇತ್ತೀಚಿನ ಯುವಕವಿಗಳ ಕಡೆಗೆ ತಿರುಗಿಸಿದ್ದೀರಲ್ಲಾ, ಅದು ಶೂದ್ರ ಹುಡುಗರನ್ನೇ ಟಾರ್ಗೆಟ್ ಮಾಡಿದ್ದೀರಲ್ಲಾ ನಿಮಗೆ ಮೇಲ್ವರ್ಗದ ತಗಡು ಕವಿಗಳ್ಯಾರು ಸಿಗಲಿಲ್ಲವೇ? ಎ.ಆರ್.ಕಾರ್ಪೆಂಟರ್ ಪದ್ಯಗಳು ಯಾಕೆ ಇಂಗ್ಲಿಷ್ ಟ್ರಾನ್ಸ್‌ಲೇಶನ್‌ಗೆ ಅರ್ಹವಲ್ಲಾ? ಹಾಗೆಯೇ ಅಂಕುರ್ ನನ್ನು ಅನುವಾದದ ಫ್ಯಾಕ್ಟರಿ ಎಂದು ಕರೆದಿರುವುದೂ ಸರಿಯಲ್ಲ.

ಮೊದಲು ನಿಮ್ಮ ವಿರೋಧಿಗಳನ್ನು ಗುರುತಿಸಿಕೊಳ್ಳಿ ಹಾಗೂ ನಿಮ್ಮಂತೆಯೇ ತಮ್ಮದೇ ರೀತಿಯಲ್ಲಿ ಹೋರಾಡುತ್ತಿರುವವರ ಕಾಲೆಳೆಯುವುದನ್ನು ಬಿಟ್ಟು ಎಲ್ಲರನ್ನೂ ದೊಡ್ಡ ಮನಸ್ಸಿನಿಂದ ನೋಡಲು ಕಲಿಯಿರಿ.

- ಸೂರ್ಯ ಲಕ್ಕೇನಹಳ್ಳಿ, ಈ ಮೇಲ್ ಮೂಲಕ

ಮಾನವ ಹಕ್ಕುಗಳ ಆಯೋಗದಲ್ಲಿ.....

(2ನೇ ಪುಟದಿಂದ)

ಜ್ಞಾನ ಎಂದೂ ಹೇಳಬಹುದು. ಏಕೆಂದರೆ ಮಲೆನಾಡಿನಲ್ಲಿ ಪೊಲೀಸರು ನಡೆಸಿದ ಮಾನವ ಹಕ್ಕುಗಳ ಉಲ್ಲಂಘನೆಯ ಬಗ್ಗೆ ಅಧ್ಯಯನ ಮಾಡಲು ಹೋಗಿದ್ದ ಅಧ್ಯಕ್ಷರು ಅಲ್ಲಿದ್ದ ಒಂದೇ ದಿನದಲ್ಲಿ ತಾಳಿದ ನಿಲುವುಗಳು ಹಾಗಿದ್ದವು.

ಅಪಾಯಕಾರಿ ಅಜ್ಞಾನದ ಎರಡನೇ ಸ್ಯಾಂಪಲ್: "ನಕ್ಸಲ್ ಚಳವಳಿ ಸಾಮಾಜಿಕ ಪಿಡುಗು. ಅದನ್ನು ಕೇವಲ ಪೊಲೀಸರಿಂದ ಮಟ್ಟ ಹಾಕಲು ಸಾಧ್ಯವಿಲ್ಲ, ಅದನ್ನು ಮಟ್ಟ ಹಾಕಲು ಛತ್ತೀಸ್‌ಘಡದಲ್ಲಿ ಸರ್ಕಾರವು ಮಾಡುತ್ತಿರುವಂತೆ ಸಲ್ವಾ ಜುಡುಂ ರೀತಿಯಲ್ಲಿ ಜನರಿಗೇ ಬಂದೂಕನ್ನು ಕೊಟ್ಟು ನಕ್ಸಲರ ವಿರುದ್ಧ ಸಶಸ್ತ್ರ ಪ್ರತಿಹೋರಾಟಕ್ಕೆ ಇಳಿಸಬೇಕು"!!!!

ಕಾನೂನು ಪಾಲನೆಯ ಹೆಸರಲ್ಲಿ ಪೊಲೀಸರಿಂದ ಮಾನವಹಕ್ಕುಗಳ ಉಲ್ಲಂಘನೆಯಾಗಿದೆಯೇ ಎಂದು ಪರಿಶೀಲಿಸಬೇಕಾದ ಆಯೋಗ ಅದರ ಬದಲಿಗೆ ಪೊಲೀಸರ ಬಗ್ಗೆ ಸಹಾನುಭೂತಿಯಿಂದ ಮಾತನಾಡುತ್ತಾ ಅವರ ಹಕ್ಕುಗಳನ್ನು ಪರೋಕ್ಷವಾಗಿ ಎತ್ತಿ ಹಿಡಿದಿದೆ. ಅಷ್ಟು ಮಾತ್ರವಲ್ಲ, ಛತ್ತೀಸ್‌ಘಡದಲ್ಲಿ ಸಲ್ವಾ ಜುಡುಂ ಹೆಸರಲ್ಲಿ ಸರ್ಕಾರವು ಮುಗ್ಧ ಆದಿವಾಸಿಗಳ ಮಾರಣ ಹೋಮ ಮಾಡುತ್ತಿರುವುದನ್ನು ದೇಶದ ಎಲ್ಲಾ ಪಕ್ಷಗಳು ಮತ್ತು ಪರೋಕ್ಷವಾಗಿ ಕೇಂದ್ರ ಗೃಹ ಮಂತ್ರಾಲಯವೂ ಒಪ್ಪಿಕೊಂಡಿದೆ. ಈ ಸಲ್ವಾ ಜುಡುಂ ಎಂಬುದು ಪೊಲೀಸರು ಮತ್ತು ಅರೆಸೇನಾ ಪಡೆಗಳು ಸರ್ಕಾರದ ಸಂಪೂರ್ಣ ಒಪ್ಪಿಗೆಯಿಂದ ಸೃಷ್ಟಿಸುತ್ತಿರುವ ಕೊಲೆಗಡುಕ ಪಡೆಯಾಗಿದೆ. ಇದರ ಉದ್ದೇಶ ಆತ್ಮರಕ್ಷಣೆಯಲ್ಲ, ಬದಲಿಗೆ ಯಾರನ್ನು ಅದು ನಕ್ಸಲ್ ಬೆಂಬಲಿಗ ಎಂದು ಭಾವಿಸುತ್ತದೋ ಅವರನ್ನು ಕೊಂದು ಹಾಕುವುದೇ ಆಗಿದೆ. ಹೀಗಾಗಿಯೇ ಇದರಿಂದ ಛತ್ತೀಸ್‌ಘಡದಲ್ಲಿ ಸಾವಿರಾರು ಜನರ ಕೊಲೆಯಾಗಿದೆ. ಅಷ್ಟೇ ಅಲ್ಲ, ಇವತ್ತು ಅಲ್ಲಿ ಒಂದು ಭೀಭತ್ಸ ವಾತಾವರಣ ಸೃಷ್ಟಿಯಾಗಿದೆ. ಇಡೀ ಛತ್ತೀಸ್‌ಘಡದ ಜನತೆ, ಮಾನವ ಹಕ್ಕುಗಳಲ್ಲಿ ಪ್ರಥಮವಾದ ಜೀವಿಸುವ ಹಕ್ಕನ್ನೇ ಕಳೆದುಕೊಂಡಿದ್ದಾರೆ. ಇಂಥ ಸಂಸ್ಥೆಗಳಿಂದ ಆಗುವ ಮಾರಣಹೋಮವನ್ನು ತಡೆಯುವುದು ಹೇಗೆ ಎಂದು ಸಲಹೆ ಕೊಡಬೇಕೆಂದು ಸುಪ್ರೀಮ್‌ಕೋರ್ಟೇ ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗವನ್ನು ಕೇಳಿಕೊಂಡಿದೆ. ಹೀಗಿರುವಾಗ ನಮ್ಮ ಕರ್ನಾಟಕದ ಮಾನವ ಹಕ್ಕುಗಳ ಆಯೋಗದ ಅಧ್ಯಕ್ಷರು ಮಾತ್ರ ಸಲ್ವಾ ಜುಡುಂ ಮಾದರಿಯಲ್ಲಿ ನರಮೇಧ ಮಾಡುವುದೊಂದೇ ದಾರಿಯೆಂದು ಹೇಳುತ್ತಿದ್ದಾರೆ!!

ಇದು ಸನ್ಮಾನ್ಯರಿಗೆ ಮಾನವ ಹಕ್ಕುಗಳ ಬಗ್ಗೆ ಪ್ರಾಥಮಿಕ ಜ್ಞಾನವೂ ಇಲ್ಲವೆಂಬುದನ್ನು ಸೂಚಿಸುತ್ತದೆ. ನಮ್ಮ ದೇಶದ ಕಾನೂನುಗಳು ಯಾರಿಗೂ, ನಕ್ಸಲರಿಗಾಗಲೀ, ಪೊಲೀಸರಿಗಾಗಲೀ ಮತ್ತೊಬ್ಬರ ಪ್ರಾಣ ತೆಗೆಯುವ ಹಕ್ಕನ್ನು ಕೊಟ್ಟಿಲ್ಲ. ದೇಶದ ಕಾನೂನಿನ ಪ್ರಕಾರ ತನ್ನ ಪ್ರಾಣ ರಕ್ಷಣೆಯ ಸಂದರ್ಭವೊಂದನ್ನು ಹೊರತುಪಡಿಸಿ ಬೇರೆ ಯಾವ ಸಂದರ್ಭದಲ್ಲೂ ಪೊಲೀಸರು ನಕ್ಸಲರ ಪ್ರಾಣ ತೆಗೆದರೂ, ನಕ್ಸಲರು ಪೊಲೀಸರ ಪ್ರಾಣ ತೆಗೆದರೂ ಶಿಕ್ಷಾರ್ಹ ಅಪರಾಧವಾಗುತ್ತದೆ ಮತ್ತು ಶಿಕ್ಷೆಯಿಂದ ಪಾರಾಗಲು ತಮ್ಮ ಪ್ರಾಣ ರಕ್ಷಣೆಗೆಂದೇ ಇನ್ನೊಬ್ಬರ ಪ್ರಾಣ ತೆಗೆದೆವೆಂದು ಸಾಬೀತುಪಡಿಸುವ ಜವಾಬ್ದಾರಿ ಕೊಂದವರದ್ದಾಗಿರುತ್ತದೆ. ಪೊಲೀಸರಾದರೂ ಸರಿ, ನಾಗರಿಕರಾದರೂ ಸರಿ, ಇಬ್ಬರಿಗೂ ಇದೇ ಕಾನೂನು. ಇದಲ್ಲದೆ ಪೊಲೀಸರಿಗೆ ಕ್ರಿಮಿನಲ್ ಪ್ರೊಸೀಜರ್ ಕೋಡಿನ 46ನೇ ಕಲಮಿನ ಪ್ರಕಾರ ಸರ್ಕಾರಿ ಕಾರ್ಯವನ್ನು ಜಾರಿ ಮಾಡುವ ಪ್ರಕ್ರಿಯೆಯಲ್ಲಿ ಅಡ್ಡಿಯಾದಲ್ಲಿ ಸಕಾರಣವಾದಷ್ಟು ಮತ್ತು ಅಗತ್ಯ ಬಿದ್ದರೆ ಕನಿಷ್ಠ ಪ್ರಮಾಣದಲ್ಲಿ ಪ್ರಾಣಹಾನಿಯನ್ನೂ ಮಾಡಬಹುದಾದಷ್ಟು ಶಕ್ತಿ ಬಳಸುವ ಅಧಿಕಾರ ನೀಡಲಾಗಿದೆ. ಆದರೆ ಅಷ್ಟು ಶಕ್ತಿಯ ಬಳಕೆ ಸಕಾರಣವಾಗಿತ್ತು ಮತ್ತು ಅಗತ್ಯವಾಗಿತ್ತು ಎಂದು ಸಾಬೀತು ಮಾಡುವ ಜವಾಬ್ದಾರಿ




ಪೊಲೀಸರ ಮೇಲಿರುತ್ತದೆ.

ಆದರೆ ದೇಶದ ಕಳೆದ ಆರು ದಶಕಗಳ ಇತಿಹಾಸ ಸಾಬೀತು ಪಡಿಸುತ್ತಿರುವುದೇನೆಂದರೆ ವ್ಯವಸ್ಥೆಯನ್ನು ವಿರೋಧಿಸಿ ಸಶಸ್ತ್ರ ಹೋರಾಟ ಮಾಡುವ ನಕ್ಸಲರನ್ನು ಪೊಲೀಸರು ಸಾಯಿಸುವುದು ಮುಖಾಮುಖೀ ಹೋರಾಟದಲ್ಲಲ್ಲ, ಅಂದರೆ ತಮ್ಮ ಜೀವರಕ್ಷಣೆ ಮಾಡಿಕೊಳ್ಳುವ ಪ್ರಕ್ರಿಯೆಲ್ಲಲ್ಲ, ಬದಲಿಗೆ ಅವರು ಮಲಗಿದ್ದಾಗ ಅಥವಾ ಬಂದೂಕನ್ನು ಬಳಸಲಾಗದ ಪರಿಸ್ಥಿತಿಯಲ್ಲಿ ಇದ್ದಾಗ. ಮಾತ್ರವಲ್ಲ, ಇಂಥ ಚಳವಳಿಗೆ ಸಹಕಾರ ನೀಡುವ ಮತ್ತು ಸಹಾನುಭೂಮಿ ತೋರಿಸುವ ನಾಗರಿಕರನ್ನು ಸಹ ಬೆದರಿಸುವ ಸಲುವಾಗಿ ನಿಶಸ್ತ್ರರಾದ ಅವರನ್ನು ಕೊಂದು ಹಾಕಿ ಎನ್‌ಕೌಂಟರ್ ಕಥೆ ಕಟ್ಟುತ್ತಾರೆ. ಆದ್ದರಿಂದಲೇ ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗ ಪೊಲೀಸರ ಕೈಯಲ್ಲಿ ಇರುವ ಜೀವ ತೆಗೆಯುವ ಅಧಿಕಾರದ ಮೇಲೆ ಅಂಕುಶ ವಿಧಿಸುವ ಭಾಗವಾಗಿ 1997ರಲ್ಲಿ ಒಂದು ಸೂಚನೆಯನ್ನು ನೀಡಿತು. ಮತ್ತದನ್ನು 2003ರಲ್ಲಿ ಮತ್ತೆ ನವೀಕರಿಸಿ ಎಲ್ಲಾ ಸರ್ಕಾರಗಳಿಗೂ ಕಳಿಸಿಕೊಟ್ಟಿತು.

ಅದರ ಪ್ರಕಾರ ಪೊಲೀಸರು ಎಲ್ಲೇ ಎನ್‌ಕೌಂಟರ್ ನಡೆಸಿ ಕೊಂದು ಹಾಕಿದರೂ ಕೂಡಲೇ ಅದರಲ್ಲಿ ಭಾಗವಹಿಸಿದ ಪೊಲೀಸರ ಮೇಲೆ ಕೊಲೆ ಮೊಕದ್ದಮೆ ದಾಖಲೆ ಮಾಡಿಕೊಳ್ಳಬೇಕು ಮತ್ತು ಆ ಪ್ರಾಣಹಾನಿ ಅಗತ್ಯವಾಗಿತ್ತೇ ಎಂಬ ಬಗ್ಗೆ ಒಂದು ಸ್ವತಂತ್ರ ತನಿಖೆ ನಡೆಸಬೇಕು. ಅದರಲ್ಲಿ ಸತ್ತವರ ಹತ್ತಿರದ ಸಂಬಂಧಿಗಳನ್ನೂ ಸೇರಿಸಿಕೊಳ್ಳಬೇಕು. ಆ ಸ್ವತಂತ್ರ ತನಿಖೆಯಲ್ಲಿ ಆರೋಪಿತ ಪೊಲೀಸರು ಪ್ರಾಣಹಾನಿ ಮಾಡಿದ್ದು ಸಕಾರಣವಾಗಿತ್ತು ಎಂದು ಸಾಬೀತಾಗುವ ತನಕ ಆ ಪೊಲೀಸರಿಗೆ ಯಾವುದೇ ಬಡ್ತಿ ಅಥವಾ ಪುರಸ್ಕಾರ ನೀಡಬಾರದು. ಇದು ಕಾನೂನು ಮತ್ತು ಮಾನವ ಹಕ್ಕುಗಳ ಆಯೋಗ ನಡೆದುಕೊಳ್ಳಬೇಕಾದ ರೀತಿ.

ಬದಲಿಗೆ ಆಯೋಗದ ಅಧ್ಯಕ್ಷರಾದ ಎಸ್. ಆರ್. ನಾಯಕರು ಭಿನ್ನ ರಾಜಕೀಯ ನಿಲುವನ್ನು ಹೊಂದಿದ ಮಾತ್ರಕ್ಕೆ ಹುಡುಕಿಕೊಂಡು ಹೋಗಿ ಕೊಂದು ಬರುವ ಕೊಲೆಗಡುಕ ಪಡೆಯಾದ, ಸಾಮಾನ್ಯ ಜನತೆಯ ಜೀವಿಸುವ ಹಕ್ಕನ್ನೇ ಕಸಿದುಕೊಳ್ಳುವ ಸಲ್ವಾ ಜುಡುಂ ರೀತಿಯ ನರಮೇಧವನ್ನು ಕರ್ನಾಟಕದಲ್ಲೂ ನಡೆಸುವುದರ ಮೂಲಕವೇ ಮಾನವಹಕ್ಕುಗಳ ರಕ್ಷಣೆಯಾಗುತ್ತದೆಂದು ಪ್ರತಿಪಾದಿಸುತ್ತಿದ್ದಾರೆ. ಇವರೇ ಆ ಸ್ಥಾನದಲ್ಲಿ ಮುಂದುವರೆದರೆ ಕರ್ನಾಟಕದ ಶ್ರೀಸಾಮಾನ್ಯರ ಮಾನವ ಹಕ್ಕಿರಲಿ ಜೀವಿಸುವ ಹಕ್ಕೇ ದೊಡ್ಡ ಅಪಾಯಕ್ಕೆ ಒಳಗಾಗುತ್ತದೆ. ಕೂಡಲೇ ಅವರನ್ನು ಆ ಸ್ಥಾನದಿಂದ ಕೆಳಗಿಳಿಸಲು ಮಾನವ ಹಕ್ಕುಗಳ ಹೋರಾಟಗಾರರು ಚಳವಳಿಯನ್ನೇ ಮಾಡಬೇಕಾಗುತ್ತದೆ. ●



ಬದುಕೇ ಸಿನಿಮಾ ಸಿನಿಮಾನೇ ಬದುಕು

ವಿಜಯಲಕ್ಷ್ಮಿಸಿಂಗ್ ನಿರ್ದೇಶನದ 'ಈ ಬಂಧನ' ಚಿತ್ರದ ಬಗ್ಗೆ ಎಲ್ಲೆಡೆ ಒಳ್ಳೆಯ ಮಾತು ಕೇಳಿಬರುತ್ತಿದೆ. ಇದರ ಪರಿಣಾಮವಾಗಿಯೋ ಏನೋ ಬೆಂಗಳೂರಿನಲ್ಲಿರುವ ಗುಜರಾತಿ ಮತ್ತು ಬೆಂಗಾಲಿ ಸಮುದಾಯದವರು ತಮಗಾಗಿ ವಿಶೇಷ ಪ್ರೀಮಿಯರ್ ಶೋಗಳನ್ನು ಕೇಳಿದ್ದಾರೆ. ಇನ್ನೊಂದು ಕಡೆ ಚಿತ್ರ ಬಿಡುಗಡೆಯಾಗುವ ಮೊದಲೇ ಚಿತ್ರರಂಗದ ಬಹುತೇಕ ಜನರಿಗೆ ತಮ್ಮ ಚಿತ್ರವನ್ನು ಪ್ರದರ್ಶಿಸುವ ಧೈರ್ಯವನ್ನು ವಿಜಯಲಕ್ಷ್ಮಿ ಸಿಂಗ್ ಉರುಫ್ ಮುನ್ನಿ ತೋರಿಸಿದ್ದಾರೆ.

ತನ್ನ ಚೊಚ್ಚಲ ನಿರ್ದೇಶನದ ಚಿತ್ರದ ಬಗ್ಗೆ ಅಪಾರ ವಿಶ್ವಾಸ ಮತ್ತು ನಂಬಿಕೆ ಹೊಂದಿರುವ ಮುನ್ನಿ ತನ್ನ ಇಪ್ಪತ್ತೂರು ವರ್ಷದ ಚಿತ್ರರಂಗದ ಅನುಭವವನ್ನು ಸಮರ್ಥವಾಗಿ ಬಳಸಿಕೊಂಡಿದ್ದಾರೆ ಎನ್ನುವುದು ಈ ಚಿತ್ರದ ನಾಯಕನಟ ವಿಷ್ಣುವರ್ಧನ್ ಅವರ ಅಭಿಪ್ರಾಯ.

ಮೊನ್ನೆ ಈ ಚಿತ್ರದ ಕೆಸೆಟ್ ಬಿಡುಗಡೆ ಸಮಾರಂಭ ನಡೆದಾಗ ವೇದಿಕೆಯಲ್ಲಿದ್ದ ಮುನ್ನಿ ತನ್ನ ಅನುಭವವನ್ನು ವಿವರಿಸುತ್ತಿದ್ದರು. ಸಭಾಂಗಣದಲ್ಲಿದ್ದ ಆಕೆಯ ತಾಯಿ ಪ್ರತಿಮಾ ದೇವಿ, ಸಹೋದರ ರಾಜೇಂದ್ರಸಿಂಗ್ ಬಾಬು, ಪತಿ ಜೈ ಜಗದೀಶ್, ಸಹೋದರನ ಮಗ ಆದಿತ್ಯ... ಹೀಗೆ ಇಡೀ ಕುಟುಂಬವೇ ಮುನ್ನಿಯವರ ಮಾತುಗಳಿಗೆ ಭಾವುಕರಾದರು. ರಿಯಲ್ ಎಸ್ಟೇಟ್ ಮತ್ತು ಗಣಿ ದೊರೆಗಳು ಗಾಂಧಿನಗರಕ್ಕೆ ಲಗ್ಗೆಯಿಡುತ್ತಿರುವ ಇಂದಿನ ಸಂದರ್ಭದಲ್ಲಿ ಚಿತ್ರರಂಗವನ್ನೇ ಆಧರಿಸಿರುವ ಕುಟುಂಬವೊಂದರ ಎಲ್ಲಾ ಸದಸ್ಯರು ಒಂದೆಡೆ ಸೇರಿದ್ದು ನೋಡುಗರ ಕಣ್ಣಿಗೆ ಹಿತ ನೀಡಿತು. ಇದು ಮುನ್ನಿಯವರ ತಂದೆ ಶಂಕರ್‌ಸಿಂಗ್ ಆರಂಭಿಸಿದ್ದ ಮಹಾತ್ಮ ಪಿಕ್ಚರ್ಸ್ ಸಂಸ್ಥೆ ತಯಾರು ಮಾಡಿರುವ 97ನೇ ಚಿತ್ರ.

ಅನ್ನದಾತರಿಗೆ ಗೌರವ



ಶಿವರಾಜ್‌ಕುಮಾರ್‌ರವರ ನೂತನ ಮನೆಯ ಗೃಹಪ್ರವೇಶ ಸಮಾರಂಭ ಮೊನ್ನೆ ಬಹಳ ಅದ್ದೂರಿಯಾಗಿ ನಡೆಯಿತು. ಈ ಕಾರ್ಯಕ್ರಮದ ಆಹ್ವಾನ ಪತ್ರಿಕೆಗಳನ್ನು ಶಿವಣ್ಣ ನಟಿಸಿದ್ದ ಸಿನಿಮಾಗಳ ನಿರ್ಮಾಪಕರಿಗೆ ಸ್ವತಃ ಶಿವು ದಂಪತಿಗಳೇ ನೀಡಿ ಬಂದಿದ್ದರು. ಅಷ್ಟೇ ಅಲ್ಲ, ಅದರೊಂದಿಗೆ ಒಂದು ರೇಷ್ಮೆ ಸೀರೆ ಮತ್ತು ಶಲ್ಯವನ್ನು ಉಡುಗೊರೆಯಾಗಿ ನೀಡಿ ಅವರನ್ನೆಲ್ಲ ಆಮಂತ್ರಿಸಿದ್ದರು. ನಿರ್ಮಾಪಕರೇ ಅನ್ನದಾತರು ಎಂದು ಹೇಳುವ ಅನೇಕ ಕಲಾವಿದರು ಚಿತ್ರರಂಗದಲ್ಲಿದ್ದರೂ ಅದೇ ನಿರ್ಮಾಪಕರಿಗೆ ಹೀಗೆ ಗೌರವ ಸಲ್ಲಿಸಿದ ಉದಾಹರಣೆ ಬಹಳ ಕಡಿಮೆ.

ನಗು ನಿಲ್ಲಿಸಿದ 'ಗಾಂಧಿ ಸ್ಮೈಲ್ಸ್'



'ಗಾಂಧಿ ಸ್ಮೈಲ್ಸ್' ಚಿತ್ರ ಆರಂಭವಾಗುವ ಮೊದಲೇ ಕನ್ನಡದ ಮೂರು ಕಲಾವಿದರ ನಗು ನಿಲ್ಲಿಸಿದ (ಕು)ಖ್ಯಾತಿ ಆ ಚಿತ್ರದ ನಿರ್ದೇಶಕ ಕ್ರಿಷ್ ಜೋಷಿಗೆ ಸಂದಿದೆ.

'ಗಾಂಧಿ ಸ್ಮೈಲ್ಸ್'ನ ವಿಶೇಷವೇನೆಂದರೆ, ಚಿತ್ರ ಆರಂಭಿಸುವ ಮೊದಲೇ ರಿಹರ್ಸಲ್ ಮಾಡಲೇಬೇಕು ಎಂಬುದು ನಿರ್ದೇಶಕರ ನಿಲುವಾಗಿತ್ತು, ಆ ಕಾರಣಕ್ಕಾಗಿ ಈ ಚಿತ್ರದ ಪ್ರಮುಖ ಪಾತ್ರಕ್ಕಾಗಿ ಆಯ್ಕೆಯಾಗಿದ್ದ ಶಿವರಾಜ್‌ಕುಮಾರ್, ಕುಮಾರ್ ಬಂಗಾರಪ್ಪ ಮತ್ತು ಗಿರೀಶ್ ಕಾರ್ನಾಡ್‌ರನ್ನು ಕೈಬಿಡಲಾಗಿದೆ. ಯಾಕೆಂದರೆ ನಿರ್ದೇಶಕರ ಶರತ್ತಿಗೆ ಒಪ್ಪಿದ ಈ ಕಲಾವಿದರು ತಮ್ಮ ಬ್ಯುಸಿಯಾದ ಶೆಡ್ಯೂಲ್‌ನಿಂದಾಗಿ ರಿಹರ್ಸಲ್‌ಗೆ ಹಾಜರಾಗಲು ಸಾಧ್ಯವಿಲ್ಲ ಎಂದರಂತೆ. ಆದರೆ ಆ ಕಾರಣಕ್ಕೆ ನಿರ್ದೇಶಕ ತನ್ನ ನಿಲುವಿನಲ್ಲಿ ರಾಜಿಯಾಗಿಲ್ಲ. ಆದ್ದರಿಂದ ಈಗ ಚಿತ್ರಕ್ಕೆ ಬೇರೆ ಕಲಾವಿದರನ್ನು ಆಯ್ಕೆ ಮಾಡಲಾಗಿದೆ.



ನಿರ್ಮಾಪಕ ಎನ್.ಎಂ. ಸುರೇಶ್ 'ಬಲ್ಲವ ಪ್ರೊಡಕ್ಷನ್'ನವರ ಜೊತೆ ಸೇರಿ ಈ ಚಿತ್ರವನ್ನು ತೆಗೆಯುತ್ತಿದ್ದಾರೆ. ಜಾಹೀರಾತು ಸಂಸ್ಥೆಯಲ್ಲಿ ಕೆಲಸ ಮಾಡಿದ ಅನುಭವವಿರುವ ಕ್ರಿಷ್ ಜೋಷಿ ನಿರ್ದೇಶಿಸುತ್ತಿದ್ದಾರೆ. ಅವರ ಸ್ನೇಹಿತರಾದ ರಮಾನಂದ ಕಾಮತ್ ಮತ್ತು ಶ್ರೀಧರ್ ಈ ಚಿತ್ರದ ಸಹ ನಿರ್ಮಾಪಕರು.

ಬರಲಿದ್ದಾರೆ ಮರಿ ಕ್ರೇಜಿ




ಹೊಸಬರ ಪ್ರವಾಹದ ನಡುವೆ ಹಳಬರು ಮಂಕಾಗಿದ್ದಾರೆ ಎಂಬುದು ಬಹುತೇಕ ಗಾಂಧಿನಗರಿಗಳ ವಾದ. ಈ ವಾದದಲ್ಲಿ ಸತ್ಯಾಂಶವೂ ಇದೆ. ಹೊಸಬರಿಂದಾಗಿ ಹೆಚ್ಚು ಆಘಾತಕ್ಕೆ ಒಳಗಾದವರೆಂದರೆ, ಕ್ರೇಜಿ ಸ್ಟಾರ್ ರವಿಚಂದ್ರನ್. ರವಿಚಂದ್ರನ್ ನಟಿಸಿದ 'ಯುಗಾದಿ' ಚಿತ್ರ ಬಾಕ್ಸಾಫೀಸಿನಲ್ಲಿ ಅಂತಹ ಓಪನಿಂಗ್ ಪಡೆಯದಿದ್ದಾಗ ಇಡೀ ಗಾಂಧಿನಗರವೇ ಆಶ್ಚರ್ಯಗೊಂಡಿತ್ತು.

ಆದರೆ ಕರ್ನಾಟಕ ಕಂಡ ಅತ್ಯಂತ ಶ್ರೇಷ್ಠ ತಂತ್ರಜ್ಞರಾದ ಕ್ರೇಜಿಯನ್ನು ಅಷ್ಟು ಸುಲಭವಾಗಿ ಯಾರೂ ತಳ್ಳಿಹಾಕುವಂತಿಲ್ಲ. ಹೀಗಾಗಿ ರವಿಚಂದ್ರನ್ ಮುಂದೇನು ಮಾಡಬಹುದು ಎಂಬ ಕುತೂಹಲ ಎಲ್ಲರಲ್ಲೂ ಇದೆ.

ಈಗ ಎಲ್ಲೆಡೆ ಹಬ್ಬಿರುವ ಸುದ್ದಿಯ ಪ್ರಕಾರ ಇನ್ನೊಂದೆರಡು ತಿಂಗಳುಗಳಲ್ಲಿ ರವಿಚಂದ್ರನ್ ತಮ್ಮ ಹಿರಿಯ ಪುತ್ರನನ್ನು ಚಿತ್ರರಂಗಕ್ಕೆ ಪರಿಚಯಿಸಲಿದ್ದಾರಂತೆ. ಈ ನಿಟ್ಟಿನಲ್ಲಿ ಆತ ಕಳೆದ ಆರು ತಿಂಗಳುಗಳಿಂದ ಮದ್ರಾಸಿನಲ್ಲಿ ತಾಲೀಮು ಪಡೆಯುತ್ತಿದ್ದಾನೆ.

ಮರಿ ಕ್ರೇಜಿಸ್ಟಾರ್‌ನ ಆಗಮನವು ನಿಜವೇ ಆದಲ್ಲಿ ಅದು ರವಿಚಂದ್ರನ್ ಅವರ ಸರಿಯಾದ ನಿರ್ಧಾರ ಎಂದು ಹೇಳಬಹುದು.

ಎರಡನೇ ತಲೆಮಾರಿನ ಸರ್ಜಾ ಎಂಟ್ರಿ



ಅರ್ಜುನ್ ಸರ್ಜಾ ಹಾಗೂ ಕಿಶೋರ್ ಸರ್ಜಾ ಮತ್ತೆ ಕನ್ನಡ ಚಿತ್ರರಂಗದಲ್ಲಿ ತಮ್ಮನ್ನು ಸಕ್ರಿಯವಾಗಿ ತೊಡಗಿಸಿಕೊಳ್ಳುತ್ತಿದ್ದಾರೆ. ಅವರ ತಂಗಿಯ ಮಗ ಚಿರಂಜೀವಿ ಸರ್ಜಾ ಎಂಬ ಚಿಗುರುಮೀಸೆಯ ತರುಣನನ್ನು ನಾಯಕನಟನನ್ನಾಗಿ ಕನ್ನಡದಲ್ಲಿ ಪರಿಚಯಿಸುತ್ತಿದ್ದಾರೆ. ನ. ಹದಿನೈದರಂದು ಈ ಹೊಸ ಚಿತ್ರ ಸೆಟ್ಟೇರಲಿದ್ದು ಇದನ್ನು ಕಿಶೋರ್ ನಿರ್ದೇಶಿಸುತ್ತಿದ್ದರೆ, ಅರ್ಜುನ್ ಇದರ ನಿರ್ಮಾಪಕರು. ಚಿತ್ರದ ಹೆಸರು 'ಒಡೆಯ'.

ಚಿರಂಜೀವಿ ಸರ್ಜಾ ನಿರ್ದೇಶಕ ಶಂಕರ್‌ರವರ 'ಬಾಯ್ಸ್' ಎಂಬ ತೆಲುಗು ಚಿತ್ರದ ಮುಖಾಂತರ ಬೆಳ್ಳಿ ತೆರೆಗೆ ಪರಿಚಯವಾಗಬೇಕಿತ್ತು. ಆದರೆ ಆತ ಕನ್ನಡದಲ್ಲೇ ಚಿತ್ರರಂಗಕ್ಕೆ ಕಾಲಿಡಲಿ, ಇಲ್ಲಿ ಒಂದೆರಡು ಚಿತ್ರಗಳಲ್ಲಿ ನಟಿಸಿದ ನಂತರ ತೆಲುಗು-ತಮಿಳಿಗೆ ಹೋಗಲಿ ಎಂಬುದು ಸರ್ಜಾ ಸಹೋದರರ ನಿಲುವಾಗಿತ್ತು. ಅಂದರೆ ಅವರ ಪಾಲಿಗೆ ಕನ್ನಡ ಚಿತ್ರರಂಗ ಒಂದು ಟೆಸ್ಟಿಂಗ್ ಪ್ಯಾಡ್ ಅಷ್ಟೇ!

ಕಳೆದ ಆರು ವರ್ಷಗಳಿಂದ ಸಿನಿಮಾಕ್ಕೆ ಬೇಕಾದ ವ್ಯಾಯಾಮ ಮತ್ತು ಕಸರತ್ತುಗಳನ್ನು ಚಿರಂಜೀವಿ ಸರ್ಜಾ ಮಾಡುತ್ತಿದ್ದಾನಂತೆ. ಈತ ತೆಲುಗು ಸೂಪರ್ ಸ್ಟಾರ್ ಚಿರಂಜೀವಿಯವರ ಪುತ್ರ ರಾಮ್‌ಚರಣ್ ತೇಜ ಮತ್ತು ಚಿರಂಜೀವಿಯವರ ಭಾವ ಅಲ್ಲು ಅರವಿಂದ್‌ರವರ ಮಗ ಅಲ್ಲು ಅರ್ಜುನ್ ಸಹಪಾಠಿ. ಅವರಿಬ್ಬರೂ ಈಗಾಗಲೇ ಹೀರೋಗಳಾಗಿ ತೆಲುಗು ಚಿತ್ರರಂಗಕ್ಕೆ ಎಂಟ್ರಿ ಪಡೆದಿದ್ದಾರೆ. ಅವರ ಹಾದಿಯಲ್ಲೇ ಈಗ ಈ ಚಿರಂಜೀವಿ ಹೊರಟಿದ್ದಾನೆ. ಈತನೂ ಮಾವಂದಿರಂತೆ ದೊಡ್ಡ ಹೆಸರು ಮಾಡಲಿ.

ಮುಂಬೈ ಕ್ಲಾಸ್‌ಮೇಟ್‌ಗಳು

ಧ್ಯಾನ್ ಮತ್ತು ಜೆನ್ನಿಫರ್ ಕೊತ್ವಾಲ್ ಕನ್ನಡದ ನಟ ನಟಿಯರೋ ಅಥವಾ ಪರಭಾಷೆಯವರೋ? ಯಾಕೆ ಈ ಪ್ರಶ್ನೆ ಎಂದರೆ ಇವರಿಬ್ಬರೂ ಮುಂಬೈನಿಂದ ಗಾಂಧಿನಗರಕ್ಕೆ ವಲಸೆ ಬಂದವರು. ಆದ್ದರಿಂದ ಅವರು ಪರಭಾಷೆಯವರು ಎಂದು ವಾದಿಸಬಹುದು. ಆದರೆ ಇವರಿಬ್ಬರೂ ತಲಾ ನಾಲ್ಕೈದು ಕನ್ನಡ ಚಿತ್ರಗಳಲ್ಲಿ ನಟಿಸಿದ್ದಾರೆಯೇ ಹೊರತು ಬೇರೆ ಭಾಷೆಯ ಸಿನಿಮಾಗಳಲ್ಲಿ ನಟಿಸಿಲ್ಲ (ಧ್ಯಾನ್ ಅದ್ಯಾವುದೋ ಒಂದು ಹಿಂದಿ ಚಿತ್ರದಲ್ಲಿ ನಟಿಸಿದ್ದಾನಂತೆ. ಆದರೆ ಅದು ಬಿಡುಗಡೆಯಾಯಿತೋ ಇಲ್ಲವೋ ಎಂಬುದು ಯಾರಿಗೂ ಗೊತ್ತಿಲ್ಲ). ಆದ್ದರಿಂದ ಅವರನ್ನು ಕನ್ನಡ ಸಿನಿಮಾದ ನಟ ನಟಿ ಎಂದೂ ತರ್ಕಿಸಬಹುದು, ಅಲ್ಲವೇ?!

ಅದೇನೇ ಇರಲಿ, ಮುಂಬೈನಿಂದ ಗಾಂಧಿನಗರಕ್ಕೆ ಬಂದಿರುವ ಇವರಿಬ್ಬರು ಈಗ ಜೊತೆಜೊತೆಯಾಗಿ ಕನ್ನಡ ಸಿನಿಮಾವೊಂದರಲ್ಲಿ ನಟಿಸುತ್ತಿದ್ದಾರೆ. ಚಿತ್ರದ ಹೆಸರು 'ಓ ಮನಸೇ'. ಅದರ ನಿರ್ದೇಶಕ ಶರಣ್.

ಇಲ್ಲೊಂದು ಕಾಕತಾಳೀಯ ವಿಷಯವನ್ನು ಹೇಳಬೇಕು. ಧ್ಯಾನ್ ಮತ್ತು ಜೆನ್ನಿಫರ್ ಮುಂಬೈನವರು ಮಾತ್ರವಲ್ಲ, ಇವರಿಬ್ಬರೂ ಅಲ್ಲಿ ಒಂದೇ ಕಾಲೇಜಿನಲ್ಲಿ ಓದುತ್ತಿದ್ದರಂತೆ. ಈಗ ಇವರು ಮತ್ತೆ ಕ್ಲಾಸ್‌ಮೇಟ್‌ಗಳಾಗುತ್ತಿದ್ದಾರೆ 'ಓ ಮನಸೇ' ಚಿತ್ರದಲ್ಲಿ. ಹೀಗಾಗಿ ಒಂದು ರೀತಿಯಲ್ಲಿ ಅವರಿಬ್ಬರಿಗೂ ಈ ಸಿನಿಮಾ ಫ್ಲಾಶ್ ಬ್ಯಾಕ್ ಇದ್ದಂತೆ ಅಂದರೆ ತಪ್ಪಾಗಲಾರದು.



RANJANE BODHANE PRACHODANE LANKESH, Kannada Weekly Price Rs. 10/- 7-11-2007 RNI No. KARKAN2005/14648 Regd.No.KA/RNP/BGS/2036/2008-10

ಕಾಮಿಡಿ ಟೈಮ್ ಗಣೇಶನ ಗಲಾಟೆ ಗಾಂಧಿನಗರದಲ್ಲಿ ಶುರುವಾಗಿದೆಯಲ್ಲದೆ ಅದಕ್ಕೆ ಆತನೇ ನಟಿಸಬೇಕಿದ್ದ 'ಮುಂಗಾರು ಮಳೆ-2' ಎಂಬ ಚಿತ್ರ ಬಲಿಯಾಗಿದೆ.

ಇತ್ತೀಚೆಗೆ ಈ ಚಿತ್ರವನ್ನು ಸದ್ಯಕ್ಕೆ ಕೈಬಿಡಲಾಗಿದೆ ಎಂದು ಅದನ್ನು ನಿರ್ಮಿಸಲು ಯೋಜಿಸಿದ್ದ ರಾಕ್‌ಲೈನ್ ವೆಂಕಟೇಶ್ ಹೇಳಿಕೆ ಕೊಟ್ಟರು. ಆದರೆ ಎಲ್ಲಾ ತಯಾರಿಗಳು ನಡೆದಿದ್ದ ಚಿತ್ರವೊಂದನ್ನು ಹೀಗೆ ಇದ್ದಕ್ಕಿದ್ದಂತೆ ಯಾಕೆ ಕೈಬಿಡಲಾಯಿತು ಎಂದು ಕೆದಕಿ ನೋಡಿದರೆ ಅದರ ಹಿಂದೆ ಈ ಗಣೇಶನ ಮಸಲತ್ತು ಎದ್ದು ಕಾಣಿಸುತ್ತದೆ.



ಗಣೇಶನ ಗಲಾಟೆಗೆ 'ಮಳೆ-2' ಬಲಿ

ಆರಂಭದಿಂದಲೂ ಈ ಚಿತ್ರದ ಬಗ್ಗೆ ತರಹೇವಾರಿ ಹೇಳಿಕೆಗಳನ್ನು ನೀಡುತ್ತಲೇ ಬಂದಿರುವ ಗಣೇಶ್ ಮೊದಲು ಇದಕ್ಕೆ 'ಮುಂಗಾರು ಮಳೆ ಭಾಗ-2' ಎಂಬ ಹೆಸರಿನ ಬದಲಾಗಿ ಬೇರೆ ಹೆಸರಿಟ್ಟರೆ ಚೆನ್ನಾ ಎಂದು ತಕರಾರೆತ್ತಿದ. ಈ ಅಪಸ್ವರದಿಂದಾಗೆ ಕೊನೆಗೆ 'ಮುಂಗಾರು ಮೋಡ' ಎಂಬ ಹೆಸರನ್ನು ಆಯ್ಕೆಮಾಡಲಾಗಿತ್ತು.

ಅದಾದ ನಂತರ ತನ್ನೊಂದಿಗೆ ಎಸ್ಟಾಬ್ಲಿಷ್ ಆಗಿರುವ ನಟಿಯ ಬದಲಾಗಿ ಹೊಸಬಳನ್ನು ಹಾಕಿದರೆ ಉತ್ತಮ ಎಂದು ಮತ್ತೊಂದು ತಕರಾರನ್ನು ಗಣೇಶ್ ಎತ್ತಿದ. ಅದಕ್ಕೂ ಒಪ್ಪಿದ ರಾಕ್‌ಲೈನ್ ವೆಂಕಟೇಶ್ ತಮ್ಮ ಚಿತ್ರದಿಂದ ರಮ್ಯಾಳಿಗೆ ಗೇಟ್ ಪಾಸ್ ಕೊಟ್ಟು ಹೊಸ ಮುಖಕ್ಕೆ ತಲಾಷ್ ಆರಂಭಿಸಿದರು.

ಈ ಚಿತ್ರವನ್ನು ನಿರ್ದೇಶಿಸಬೇಕಿದ್ದ ಪ್ರೀತಂ ಗುಬ್ಬಿ ತಮ್ಮ ಚಿತ್ರಕತೆ, ಸಂಭಾಷಣೆ, ಸಂಗೀತ ಸಾಹಿತ್ಯ ಎಲ್ಲವನ್ನೂ ತಯಾರಿಸಿ ಚಿತ್ರೀಕರಣಕ್ಕೆ ಸಜ್ಜಾದರು. ಆಗ ಗಣೇಶ್ ಮತ್ತೊಂದು ಕಿರಿಕ್ ಶುರುಹಚ್ಚಿಕೊಂಡ. ಅದೇನೆಂದರೆ, ಪ್ರೀತಂ ಗುಬ್ಬಿಯ ಬದಲಾಗಿ 'ಮುಂಗಾರು ಮಳೆ' ಚಿತ್ರವನ್ನು ನಿರ್ದೇಶಿಸಿದ್ದ ಯೋಗರಾಜ್ ಭಟ್ಟರೇ ಇದನ್ನು ನಿರ್ದೇಶಿಸಿದರೆ ಚೆಂದ ಎಂಬುದು.

ಅದನ್ನು ಕೇಳಿ ತಮ್ಮ ಚೊಚ್ಚಲ ನಿರ್ದೇಶನದ ಸಿನಿಮಾ ಬಗ್ಗೆ ಕನಸು ಕಾಣುತ್ತಿದ್ದ ಕತೆಗಾರ ಪ್ರೀತಂ ಗುಬ್ಬಿಗೆ ಶಾಕ್ ಆಗಿ ನಿಜವಾಗಲೂ ಗುಬ್ಬಚ್ಚಿಯಂತಾದರು. ಗಣೇಶನ ಈ ಅವಾಂತರಗಳಿಂದ ಮತ್ತು ಗುಬ್ಬಿ ಬಗೆಗಿನ ಕನಿಕರದಿಂದ "ಮುಂದೊಂದು ದಿನ ಗುಬ್ಬಿ ನಿರ್ದೇಶನದ ಇನ್ನೊಂದು ಚಿತ್ರವನ್ನು ನಿರ್ಮಿಸುತ್ತೇನೆ" ಎಂದು ರಾಕ್‌ಲೈನ್ ಹೇಳಿ ಆತನ ಮನಸ್ಸಿಗೆ ನೋವಾಗದಂತೆ ನೋಡಿಕೊಂಡರು.

ಈಗ ನೋಡಿದರೆ 'ಗಾಳಿಪಟ'ದಲ್ಲಿ ಯೋಗರಾಜ್ ಭಟ್ ಬಿಜಿ ಆಗಿರುವುದರಿಂದ 'ಮಳೆ-2' ಮಾಡಲು ಅವರಿಗೆ ಬಿಡುವಿಲ್ಲ, ಆದ್ದರಿಂದ ಸದ್ಯಕ್ಕೆ ಇದನ್ನು ಕೈಬಿಡಲಾಗಿದ್ದು ಅವರ ಕಾಲ್‌ಶೀಟ್ ಸಿಕ್ಕನಂತರವೇ ಅದರ ಬಗ್ಗೆ ತಲೆಕೆಡಿಸಿಕೊಳ್ಳುತ್ತೇನೆ ಎಂದು ಹೇಳಿ ರಾಕ್‌ಲೈನ್ ಸುಮ್ಮನಾಗಿದ್ದಾರೆ.

ಗಣೇಶ್ ಯಾಕೆ ಇಷ್ಟೆಲ್ಲ ತರಲೆಗಳನ್ನು ಮಾಡಿದ ಎಂಬ ಪ್ರಶ್ನೆಗೆ ಉತ್ತರವು ದೂರವಿಲ್ಲ, ಯಾಕೆಂದರೆ ಎಲ್ಲರಿಗೂ ಗೊತ್ತಿರುವಂತೆ ಗಣೇಶನನ್ನು ತನ್ನ ಕೈಗೊಂಬೆಯಂತೆ ಆಡಿಸುವವರು ಯೋಗರಾಜ್ ಭಟ್! ಆದ್ದರಿಂದ ಇದೆಲ್ಲದರ ಹಿಂದೆ ಇರುವುದು ಭಟ್ಟರೇ ಎಂಬುದು ಎಲ್ಲರಿಗೂ ಸ್ಪಷ್ಟವಾಗಿದೆ.



'ಅವ್ವ' ಬೈಗುಳಗಳ, ಚುಂಬನಗಳ

ನಟಿ ಶೃತಿ ತೆರೆಯ ಮೇಲೆ ಕಣ್ಣೀರಿಟ್ಟಿರುವ ದೃಶ್ಯಗಳಿಗೆ ಲೆಕ್ಕವಿಲ್ಲ, ಆದರೆ 'ಅವ್ವ' ಚಿತ್ರದಲ್ಲಿ ಅವರು ಇನ್ನೊಂದು ರೀತಿಯ ಸಾಧನೆಯನ್ನು ಮಾಡಿದ್ದಾರೆ. ಅದೇನೆಂದು ಅವರ ಮಾತಿನಲ್ಲೇ ಹೇಳುವುದಾದರೆ: "ನಾನು ನನ್ನ ಜೀವನದಲ್ಲೇ ಇಷ್ಟೊಂದು ಬೈಗುಳಗಳನ್ನು ಆಡಿಲ್ಲ."

ಪಿ. ಲಂಕೇಶರ 'ಮುಸ್ಸಂಜೆಯ ಕಥಾ ಪ್ರಸಂಗ' ಕಾದಂಬರಿಯನ್ನು ಆಧರಿಸಿರುವ 'ಅವ್ವ' ಚಿತ್ರದಲ್ಲಿ ಶೃತಿಯವರದ್ದು ಆಣೆ ಬಡ್ಡಿ ರಂಗವ್ವನ ಪಾತ್ರ. ಆದ್ದರಿಂದ ಚಿತ್ರದಲ್ಲಿ ಅವರ ಬಾಯಿತುಂಬ ಬರೀ ಬೈಗುಳಗಳೇ! ಅವರ ಇಂತಹ ಬೈಗುಳಕ್ಕೆ ತುತ್ತಾಗುವವರಲ್ಲಿ ಮೆಷೀನ್ ಭರ್ಮಣ್ಣನ ಪಾತ್ರದಲ್ಲಿ ನಟಿಸಿರುವ ರಂಗಾಯಣ ರಘು ಕೂಡ ಒಬ್ಬರು.

ಬೈಗುಳ ಇದ್ದಲ್ಲಿ ಪ್ರೀತಿ ಕೂಡ ಇರುತ್ತೆ ಎಂಬುದನ್ನು ಬಯಲುಸೀಮೆಯ ಜನ ಚೆನ್ನಾಗಿ ಬಲ್ಲರು. ಆದ್ದರಿಂದ 'ಅವ್ವ' ಚಿತ್ರದಲ್ಲಿ ಹಲವು ಚುಂಬನದ ದೃಶ್ಯಗಳೂ ಇವೆ. ಆದರೆ ನಮ್ಮ ಚಿತ್ರರಂಗದವರಿಗೆ ಬೈಯ್ಯೋದು ಸುಲಭ, ಚುಂಬಿಸುವುದು ತುಂಬಾ ಕಷ್ಟ. ಈ ಕಾರಣದಿಂದಾಗಿ ಒಂದು ಚುಂಬನದ ದೃಶ್ಯದಲ್ಲಿ ವಿಜಯ್ ಮತ್ತು ಸ್ಮಿತಾ ನಟಿಸುತ್ತಿರುವಾಗ ಆರು ಬಾರಿ ಟೇಕ್ ಮಾಡಬೇಕಾಯಿತಂತೆ. ಕೊನೆಗೂ ಅವರಿಬ್ಬರು ಅದನ್ನು 'ಸರಿಯಾಗಿ' ಮಾಡಿದ ನಂತರವೇ ನಿರ್ದೇಶಕಿ ಕವಿತಾ ಲಂಕೇಶ್ 'ಓಕೆ' ಅಂದರಂತೆ.

ಆದರೆ ಕವಿತಾ ಹೇಳುವ ಪ್ರಕಾರ ಈ ಚಿತ್ರದಲ್ಲಿರುವ ಬೈಗುಳಗಳ ಸಂಭಾಷಣೆಯಾಗಲಿ, ಚುಂಬಿಸುವ ದೃಶ್ಯಗಳಾಗಲಿ ಅತಿ ಸಹಜವಾಗಿಯೂ, ಕಲಾತ್ಮಕವಾಗಿಯೂ ಮೂಡಿಬಂದಿವೆಯಂತೆ.



ಕಾಶ್ಮೀರದಲ್ಲಿ ಉಪ್ಪಿ

ಕಾಶ್ಮೀರ ಪ್ರದೇಶವು ಭಯೋತ್ಪಾದಕರಿಂದಾಗಿ ನಲುಗಿದೆ ಎಂಬುದು ಹೆಚ್ಚಿನವರ ಅನಿಸಿಕೆ. ಆದರೆ ಉಪೇಂದ್ರ ಈಗ 'ಬುದ್ಧಿವಂತ' ಮತ್ತು 'ಭೀಮೂಸ್ ಬ್ಯಾಂಗ್ ಬ್ಯಾಂಗ್ ಕಿಡ್ಸ್' ಚಿತ್ರಗಳ ಚಿತ್ರೀಕರಣಕ್ಕಾಗಿ ಒಂದು ವಾರದಿಂದ ಕಾಶ್ಮೀರದಲ್ಲಿ ಬೀಡುಬಿಟ್ಟಿದ್ದಾರೆ.

'ಬುದ್ಧಿವಂತ' ಚಿತ್ರದ ಹಾಡುಗಳನ್ನು ಮುಗಿಸಿ ವಾಪಾಸು ಬಂದಿರುವ ನಿರ್ಮಾಪಕ ಮೋಹನ್ ಕಾಶ್ಮೀರದ ಬಗ್ಗೆ ಈಗ ಲೆಕ್ಚರ್ ಕೊಡುವುದರಲ್ಲಿ ಬ್ಯುಸಿಯಾಗಿದ್ದಾರೆ.

"ಭಯೋತ್ಪಾದಕರ ಕೃತ್ಯಗಳಿಗೆ ತುತ್ತಾಗಿರುವ ಹಲವಾರು ಸ್ಥಳಗಳಲ್ಲೂ ನಾವು ಶೂಟಿಂಗ್ ಮಾಡಿದೆವು. ಬೆಳಗಿನ ಜಾವ ಐದರಿಂದ ರಾತ್ರಿ ಹನ್ನೆರಡರ ತನಕವೂ ಶೂಟಿಂಗ್ ಮಾಡಿದೆವು. ನಮಗೆ ಎಲ್ಲೂ ಏನೂ ತೊಂದರೆ ಆಗಲಿಲ್ಲ, ಲೋಕಲ್ ಜನರಂತೂ ಅವರೇ ನಮ್ಮ ಯುನಿಟ್ ಬಾಯ್ಸ್‌ಗಳ ಥರ ನಮಗೆ ಸಹಾಯ ಮಾಡಿದ್ದಾರೆ. ಖಂಡಿತವಾಗಿಯೂ ಕಾಶ್ಮೀರ ಸ್ವಿಟ್ಜರ್‌ಲ್ಯಾಂಡಿಗಿಂತ ಸುಂದರವಾದ ಪ್ರದೇಶ ಮತ್ತು ಅಲ್ಲಿಗಿಂತ ಖರ್ಚು ಕೂಡಾ ನಮಗೆ ಕಡಿಮೆಯಾಗಿದೆ. ಹೀಗಾಗಿ ಇನ್ನುಮುಂದೆ ನಾನು ಕಾಶ್ಮೀರದಲ್ಲಿ ಸಾಧ್ಯವಾದಷ್ಟು ಚಿತ್ರೀಕರಣ ಮಾಡಲು ತೀರ್ಮಾನಿಸಿದ್ದೇನೆ" ಎಂದು ಮೋಹನ್ ಹೇಳಿದರು.

ಇತ್ತೀಚಿನ ವರ್ಷಗಳಲ್ಲಿ ಕಾಶ್ಮೀರದಲ್ಲಿ ಕನ್ನಡ ಸಿನಿಮಾಗಳ ಚಿತ್ರೀಕರಣ ನಡೆದದ್ದೇ ಅಪರೂಪ. ಈಗ ಎರಡೆರಡು ಚಿತ್ರಗಳನ್ನು ಉಪ್ಪಿ ಅಲ್ಲಿ ಚಿತ್ರೀಕರಿಸುವ ಮುಖಾಂತರ ಒಂದು ಹೊಸ ಅಧ್ಯಾಯ ತೆರೆದಿದ್ದಾರೆ.



ಅದ್ಧೂರಿ ಸಮಾರಂಭದಲ್ಲೂ ಸರಳತೆ

ಮೊನ್ನೆ ಅರಮನೆ ಆವರಣದಲ್ಲಿ ರಾಕ್‌ಲೈನ್ ವೆಂಕಟೇಶ್ ಅವರ ಇಪ್ಪತ್ತೈದನೆಯ ವಿವಾಹ ವಾರ್ಷಿಕೋತ್ಸವದ ಸಮಾರಂಭ ನಡೆಯಿತು. ಈ ಸಮಾರಂಭಕ್ಕೆ ತೀರಾ ಆಪ್ತರನ್ನು ಮಾತ್ರ ಕರೆದಿದ್ದರೂ ಅಲ್ಲಿ ನೆರೆದಿದ್ದವರ ಸಂಖ್ಯೆ ಸಾವಿರ ದಾಟಿತ್ತು, ಶಿವರಾಜ್‌ಕುಮಾರ್, ವಿಷ್ಣು, ರವಿಚಂದ್ರನ್, ಅಂಬರೀಷ್, ರಮೇಶ್, ಜಗ್ಗೇಶ್.... ಹೀಗೆ ಬಹುತೇಕ ಎಲ್ಲ ದೊಡ್ಡ ಮತ್ತು ಹೊಸ ಜಮಾನಾದ ಹೀರೋಗಳು ತಮ್ಮ ಕುಟುಂಬಗಳ ಸಮೇತ ಹಾಜರಾಗಿದ್ದರು. ಅತ್ಯಂತ ವೈಭವದಿಂದ ನಡೆದ ಈ ಸಮಾರಂಭಕ್ಕೆ ಯಾವುದೇ ಚಾನೆಲ್‌ನ ಕ್ಯಾಮರಾಗಳಿಗೆ ಪ್ರವೇಶ ನೀಡದೆ ರಾಕ್‌ಲೈನ್ ತಮ್ಮ ಸರಳತೆಯನ್ನು ಮೆರೆದರು.

ರಾಕ್‌ಲೈನ್ ದಂಪತಿಗಳಿಗೆ ನಮ್ಮ ಶುಭಾಶಯಗಳು.



ಚಾಣಾಕ್ಷ ಚಿತ್ರದಲ್ಲಿ ಅಂಜಲಿ ಪಾಂಡೆ

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427, Fax : 26604536, E-mail :lankesh70@rediffmail.com, Printed at Rajhans Enterprises, # 134, 4th Main, Industrial Estate, Rajajinagar, Bangalore-44